ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

# ಪ್ರಾಥಮಿಕ ಶಾಲಾ ಶೈಕ್ಷಣಿಕ ಮಾರ್ಗದರ್ಶಿ

# 2010–11

## ವರ್ಷದ ವಿಶೇಷ
## ಕಲಿಕಾ ಸಾಧನಾ ವರ್ಷ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
ಮತ್ತು
ಸರ್ವ ಶಿಕ್ಷಣ ಅಭಿಯಾನ ಮಿಷನ್, ಕರ್ನಾಟಕ, ಆಯುಕ್ತರ ಕಛೇರಿಯ ಪೂರಕ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು

**ಸಮುದಾಯದತ್ತ ಶಾಲಾ, ಕಾರ್ಯಕ್ರಮ**

| ತಿಂಗಳು | ಪ್ರಾಥಮಿಕ ಶಾಲೆ | | ಪ್ರೌಢಶಾಲೆ | |
|---|---|---|---|---|
| ಅಕ್ಟೋಬರ್ 2010 | ಮಂಗಳವಾರ | 05–10–2010 | ಬುಧವಾರ | 06–10–2010 |
| ಏಪ್ರಿಲ್ 2011 | ಗುರುವಾರ | 07–04–2011 | ಶನಿವಾರ | 09–04–2011 |

**ಸೆಮಿಸ್ಟರ್ ಅವಧಿ**

| | |
|---|---|
| ದಿ: 28–05–2010 ರಿಂದ 06–10–2010 | ಮೊದಲನೇ ಸೆಮಿಸ್ಟರ್ |
| ದಿ: 25–10–2010 ರಿಂದ 09–04–2011 | ಎರಡನೇ ಸೆಮಿಸ್ಟರ್ |

**ರಜಾ ಅವಧಿ**

| | |
|---|---|
| ದಿ: 07–10–2010 ರಿಂದ 24–10–2010 | ಮಧ್ಯಂತರ ರಜೆ |
| ದಿ: 10–04–2011 ರಿಂದ 26–05–2011 | ಬೇಸಿಗೆ ರಜೆ |

**2010–2011ರ ಬೋಧನಾ ದಿನಗಳು**

| ಕ್ರ ಸಂ | ತಿಂಗಳು | ಶೈಕ್ಷಣಿಕ ವರ್ಷದ ಒಟ್ಟು ದಿನಗಳು | ಎಲ್ಲಾ ತೆರನಾದ ಒಟ್ಟು ರಜೆಗಳು | ಲಭ್ಯವಾಗಬಹುದಾದ ಬೋಧನಾ ದಿನಗಳು |
|---|---|---|---|---|
| 1. | ಮೇ 2010 | 04 | 01 | 03 |
| 2. | ಜೂನ್ 2010 | 30 | 04 | 26 |
| 3. | ಜುಲೈ 2010 | 31 | 04 | 27 |
| 4. | ಆಗಸ್ಟ್ 2010 | 31 | 05 | 26 |
| 5. | ಸೆಪ್ಟೆಂಬರ್ 2010 | 30 | 06 | 24 |
| 6. | ಅಕ್ಟೋಬರ್ 2010 | 31 | 20 | 11 |
| 7. | ನವೆಂಬರ್ 2010 | 30 | 09 | 21 |
| 8. | ಡಿಸೆಂಬರ್ 2010 | 31 | 06 | 25 |
| 9. | ಜನವರಿ 2011 | 31 | 07 | 24 |
| 10. | ಫೆಬ್ರವರಿ 2011 | 28 | 06 | 22 |
| 11. | ಮಾರ್ಚ್ 2011 | 31 | 05 | 26 |
| 12. | ಏಪ್ರಿಲ್ 2011 | 09 | 03 | 06 |
| ಒಟ್ಟು | | 317 | 76 | 241 |
| ವಿವೇಚನಾ ರಜೆಗಳು | | 04 | | |
| ಒಟ್ಟು ಬೋಧನಾ ದಿನಗಳು | | | | 237 |

**ಟಿಪ್ಪಣಿ:– ರಾಷ್ಟ್ರೀಯ ಹಬ್ಬಗಳು ಹಾಗೂ ಪರೀಕ್ಷಾ ದಿನಗಳನ್ನು ಕೂಡಾ ಬೋಧನಾ ದಿನಗಳೆಂದು ಪರಿಗಣಿಸಿದೆ.**

**ಪರಿವಿಡಿ**


| ಕ್ರ ಸಂ | ವಿಷಯ | ಪುಟ ಸಂಖ್ಯೆ |
|---|---|---|
| 1) | ಸಂದೇಶಗಳು | i-viii |
| 2) | ವಾರ್ಷಿಕ ಶೈಕ್ಷಣಿಕ ಕಾರ್ಯಸೂಚಿ | 1–2 |
| 3) | ಮಾರ್ಗದರ್ಶಿಯ ವಿವರ | 03–13 |
| 4) | ಶಾಲಾ ದೈನಂದಿನ ಕಾರ್ಯಸೂಚಿ, ದಾಖಲಾತಿ–ಹಾಜರಾತಿ, ವಿಶೇಷ ದಾಖಲಾತಿ ಆಂದೋಲನ ನಿರಂತರ ಸಹಪಠ್ಯ ಚಟುವಟಿಕೆಗಳು | 14–16 |
| 5) | ಶಾಲೆಯ ಪರಿಣಾಮಕಾರಿ ಕಾರ್ಯ ನಿರ್ವಹಣೆಗಾಗಿ ಗುರುತಿಸಿಕೊಳ್ಳಬಹುದಾದ ಮಾನಕಗಳು | 17 |
| 6) | ಶಾಲಾ ಶೈಕ್ಷಣಿಕ ಯೋಜನೆ | 18–20 |
| 7) | ಸೇತುಬಂಧ ಕಾರ್ಯಕ್ರಮ – ಪೂರಕ ಬೋಧನೆ – ಪರಿಹಾರ ಬೋಧನೆ | 21–25 |
| 8) | ನಲಿ–ಕಲಿ ಬೋಧನಾ ಕ್ರಮ | 26–28 |
| 9) | ಪೂರಕ ಓದು | 29 |
| 10) | ಮುಖ್ಯಶಿಕ್ಷಕರ ಶೈಕ್ಷಣಿಕ ಕರ್ತವ್ಯಗಳು | 30–35 |
| 11) | ಸಮುದಾಯದತ್ತ ಶಾಲೆ | 36–37 |
| 12) | ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ | 38 |
| 13) | ಶುಲ್ಕದ ವಿವರ | 39 |
| 14) | ವಿದ್ಯಾರ್ಥಿ ಸ್ವಯಂ ಸರ್ಕಾರ | 40 |
| 15) | ಸರ್ವ ಶಿಕ್ಷಣ ಅಭಿಯಾನದ ಮಧ್ಯವರ್ತನೆಗಳು | 41–48 |
| 16) | ತರಗತಿ ಪ್ರಕ್ರಿಯೆ | 49–51 |
| 17) | ಶಾಲಾ ಹಂತದಲ್ಲಿ ಗುಣಾತ್ಮಕ ಉಸ್ತುವಾರಿ ನಮೂನೆಗಳು | 52–53 |
| 18) | ಮೌಲ್ಯಮಾಪನ | 54–59 |
| 19) | ಅಕ್ಷರ ದಾಸೋಹ | 60–64 |
| 20) | ಶಿಕ್ಷಕರ ಕಲ್ಯಾಣ ಯೋಜನೆಗಳು | 65–67 |
| 21) | ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು | 68–71 |
| 22) | ಸುತ್ತೋಲೆಗಳು | 72–74 |
| 23) | ಶಾಲಾ ಸಂದರ್ಶನದ ನಮೂನೆ | 75–76 |
| 24) | ತರಗತಿ ಪ್ರಕ್ರಿಯೆಗಳನ್ನು ವೀಕ್ಷಿಸಲು ನಮೂನೆ | 77–81 |

## ವಾರ್ಷಿಕ ಶೈಕ್ಷಣಿಕ ಕಾರ್ಯಸೂಚಿ 2010–11

| | |
|---|---|
| ಮೇ 2010 | ➢ ಸಮಗ್ರ ವಾರ್ಷಿಕ ಯೋಜನೆ ತಯಾರಿ, ಶಾಲಾ ಶೈಕ್ಷಣಿಕ ಯೋಜನೆ ತಯಾರಿ ಮತ್ತು ಎಸ್‌ಡಿಎಂಸಿ ಸಭೆಯಲ್ಲಿ ಅನುಮೋದನೆ : ವೇಳಾ ಪಟ್ಟಿ, ಕಾರ್ಯಹಂಚಿಕೆ ಕೊಠಡಿಗಳ ಸುಸ್ಥಿತಿಗಳ ಕಡೆ ಗಮನ ಇತ್ಯಾದಿ<br>➢ 28ನೇ ಮೇ – ಶಾಲಾ ಪ್ರಾರಂಭ<br>➢ 31–05–2010 – ಶಾಲಾ ಪ್ರಾರಂಭೋತ್ಸವ |
| ಜೂನ್ 2010 | ➢ ಸಾರ್ವತ್ರಿಕ ದಾಖಲಾತಿ ಪ್ರಕ್ರಿಯೆ ಹಾಗೂ ಸೇತುಬಂಧ ಕಾರ್ಯಕ್ರಮ ಅನುಷ್ಠಾನ 28–05–2010 ರಿಂದ 25–06–2010ರವರೆಗೆ<br>➢ ಶಾಲಾಮಟ್ಟದಲ್ಲಿ ಕ್ರೀಡಾಸ್ಪರ್ಧೆಗಳು<br>➢ ಬೋಧನಾ ಕಾರ್ಯಕ್ರಮ ವಾರ್ಷಿಕ ಯೋಜನೆಯಂತೆ ಪ್ರಾರಂಭ |
| ಜುಲೈ 2010 | ➢ ಹೋಬಳಿ ಮಟ್ಟದಲ್ಲಿ ಕ್ರೀಡಾಕೂಟಗಳು<br>➢ ಮೊದಲನೇ ಕಿರುಪರೀಕ್ಷೆ |
| ಆಗಸ್ಟ್ 2010 | ➢ ಸ್ವಾತಂತ್ರ್ಯೋತ್ಸವ ದಿನಾಚರಣೆ ಪೂರ್ವಸಿದ್ಧತೆ/ಆಚರಣೆ<br>➢ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಕ್ರೀಡಾಕೂಟಗಳ ಸಂಘಟನೆ |
| ಸೆಪ್ಟೆಂಬರ್ 2010 | ➢ ಶಿಕ್ಷಕರ ದಿನಾಚರಣೆ<br>➢ ಸರ್.ಎಂ.ವಿಶ್ವೇಶ್ವರಯ್ಯ ದಿನಾಚರಣೆ<br>➢ ಮೊದಲನೇ ಸೆಮಿಸ್ಟರ್ ಪರೀಕ್ಷೆಗಳು<br>➢ ಕ್ಯೂಎಂಟಿ ನಮೂನೆಗಳ ಸಲ್ಲಿಕೆ |
| ಅಕ್ಟೋಬರ್ 2010 | ➢ ಗಾಂಧಿಜಯಂತಿ ಆಚರಣೆ<br>➢ ವಿಭಾಗಮಟ್ಟದ ಕ್ರೀಡಾಕೂಟಗಳ ಸಂಘಟನೆ.<br>➢ ಮೊದಲನೇ ಸಮುದಾಯದತ್ತ ಶಾಲಾ ಕಾರ್ಯಕ್ರಮ |
| ನವೆಂಬರ್ 2010 | ➢ ಕನ್ನಡ ರಾಜ್ಯೋತ್ಸವ ಆಚರಣೆ<br>➢ ರಾಜ್ಯಮಟ್ಟದ ಕ್ರೀಡಾಕೂಟಗಳ ಸಂಘಟನೆ.<br>➢ ಶಾಲಾಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗಳು<br>➢ ಮಕ್ಕಳ ದಿನಾಚರಣೆ<br>➢ ರಾಷ್ಟ್ರೀಯ ಭಾವೈಕ್ಯತಾ ಸಪ್ತಾಹ<br>➢ ಕ್ಲಸ್ಟರ್‌ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗಳು |
| ಡಿಸೆಂಬರ್ 2010 | ➢ ವಿಶ್ವ ಅಂಗವಿಕಲರ ದಿನಾಚರಣೆ<br>➢ ಮಾನವ ಹಕ್ಕುಗಳ ದಿನಾಚರಣೆ<br>➢ ಎರಡನೇ ಕಿರುಪರೀಕ್ಷೆ<br>➢ ತಾಲ್ಲೂಕು ಮತ್ತು ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗಳು<br>➢ ಶೈಕ್ಷಣಿಕ ಪ್ರವಾಸ<br>➢ ಶಾಲಾ ಮ್ಯಾಗಜ಼ಿನ್ ಮತ್ತು ವಾರ್ಷಿಕೋತ್ಸವ |
| ಜನವರಿ 2011 | ➢ ಗಣರಾಜ್ಯೋತ್ಸವ ಆಚರಣಾ ಪೂರ್ವಸಿದ್ಧತೆ ಮತ್ತು ಆಚರಣೆ<br>➢ ಮಕ್ಕಳ ಗಣತಿ ಕಾರ್ಯಕ್ರಮ |

| | |
|---|---|
| | ➢ ಕ್ಯೂಎಂಟಿ ನಮೂನೆಗಳ ಸಲ್ಲಿಕೆ |
| ಫೆಬ್ರವರಿ 2011 | ➢ ರಾಷ್ಟ್ರೀಯ ವಿಜ್ಞಾನ ದಿನಾಚರಣೆ |
| ಮಾರ್ಚ್ 2011 | ➢ ಕಲಿಕೆಯ ಮನರ್ಮನನ<br>➢ ಎರಡನೇ ಸೆಮಿಸ್ಟರ್ ಪರೀಕ್ಷೆಗಳು |
| ಏಪ್ರಿಲ್ 2011 | ➢ ಎರಡನೇ ಸಮುದಾಯದತ್ತ ಶಾಲೆ ಕಾರ್ಯಕ್ರಮ<br>➢ ಫಲಿತಾಂಶ ಪ್ರಕಟಣೆ<br>➢ ಡಾ. ಬಿ.ಆರ್.ಅಂಬೇಡ್ಕರ್ ದಿನಾಚರಣೆ<br>➢ ಕ್ಯೂಎಂಟಿ ನಮೂನೆ ಸಲ್ಲಿಕೆ |

**ಟಿಪ್ಪಣಿ:–**

- ➢ ಸಮಾಲೋಚನಾ ಸಭೆಗಳನ್ನು ಮೊದಲ ಮತ್ತು ಎರಡನೆಯ ಶನಿವಾರದಂದು ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ಮತ್ತು 3ನೇ ಹಾಗೂ 4ನೇ ಶನಿವಾರಗಳಂದು ಹಿರಿಯ ಪ್ರಾಥಮಿಕ ಶಾಲೆಯ ಅಧ್ಯಾಪಕರಿಗೆ ಕೈಗೊಳ್ಳುವುದು
- ➢ ಶಾಲಾ ಹಂತದಲ್ಲಿ ಪ್ರತಿ ವಾರದಲ್ಲಿ ಎರಡು ಅವಧಿಗೆ ಸಹಪಠ್ಯ ಚಟುವಟಿಕೆ ಕಾರ್ಯಕ್ರಮ ಹಮ್ಮಿಕೊಳ್ಳುವುದು.
- ➢ ಜೂನ್ ತಿಂಗಳನ್ನು ಹೊರತುಪಡಿಸಿ ಪ್ರತಿ ತಿಂಗಳ ಮೂರನೇ ಶನಿವಾರದಂದು ಎಸ್.ಡಿ.ಎಂ.ಸಿ ಸಭೆ ನಡೆಸುವುದು
- ➢ ಮುಖ್ಯಶಿಕ್ಷಕರ ಸಮಾಲೋಚನಾ ಸಭೆಯನ್ನು ತಿಂಗಳ ನಾಲ್ಕನೇ ಶನಿವಾರದಂದು ನಡೆಸುವುದು
- ➢ ಇಲ್ಲಿ ಸೂಚಿಸಿರುವ ಅಂಶಗಳು ಸಾಂಕೇತಿಕ ಮಾತ್ರ ಇವುಗಳನ್ನು ಆಧರಿಸಿ ಪ್ರತಿ ಶಾಲೆಯ ಸಮಗ್ರ ವಾರ್ಷಿಕ ಯೋಜನೆಯನ್ನು ತಯಾರಿಸುವುದು.

| ಪ್ರಾಥಮಿಕ ಶಾಲಾ ಶೈಕ್ಷಣಿಕ ಮಾರ್ಗದರ್ಶಿ 2010–11 | | |
|---|---|---|
| **ಅವಧಿ** | **ಶಾಲೆಯಲ್ಲಿ ಹಮ್ಮಿಕೊಳ್ಳಬೇಕಾದ ವಿಶೇಷ ಕಾರ್ಯಕ್ರಮಗಳು** | **ಪೂರಕ ಚಟುವಟಿಕೆಗಳು** |
| 28ಮೇ 2010 | **ಶಾಲೆ ಪ್ರಾರಂಭ**<br>**ಎಸ್.ಡಿ.ಎಂ.ಸಿ ಪ್ರಥಮ ಸಭೆ**<br>ಶಾಲೆಯ ಅಂದ – ಚೆಂದ ಹೆಚ್ಚಿಸುವುದು. | • ಶಾಲಾ ಆವರಣ ಸ್ವಚ್ಛತೆ<br>• ಕುಡಿಯುವ ನೀರಿನ ವ್ಯವಸ್ಥೆ<br>• ಶೌಚಾಲಯವನ್ನು ಬಳಸುವ ಸ್ಥಿತಿಯಲ್ಲಿರುವಂತೆ ಶುಚಿಯಾಗಿಡುವುದು.<br>• ತರಗತಿವಾರು ಮತ್ತು ಶಿಕ್ಷಕವಾರು ವೇಳಾಪಟ್ಟಿಯನ್ನು ಸಿದ್ಧಪಡಿಸುವುದು |
| 31–05–2010 | ಶಾಲಾ ಪ್ರಾರಂಭೋತ್ಸವ<br><br>ಶಾಲಾ ಪ್ರಾರಂಭೋತ್ಸವದಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ | • ತಳಿರು ತೋರಣಗಳಿಂದ ಅಲಂಕರಿಸಿ ಶಾಲೆಗೆ ಮಕ್ಕಳನ್ನು ಸ್ವಾಗತಿಸುವುದು<br>• ಮಕ್ಕಳಿಗೆ ಸಿಹಿ ಹಂಚುವುದು<br>• ಎಸ್.ಡಿ.ಎಂ.ಸಿ. ಸದಸ್ಯರು, ಸಮುದಾಯದ ಮುಖಂಡರು ಮತ್ತು ಪೋಷಕರನ್ನು ಶಾಲಾ ಪ್ರಾರಂಭೋತ್ಸವದಲ್ಲಿ ತೊಡಗಿಸಿಕೊಳ್ಳುವುದು. |
| 28–05–2010 ರಿಂದ 25–06–2010 ರವರೆಗೆ | ವೇಳಾಪಟ್ಟಿಯಂತೆ ಬೋಧನೆ ಪ್ರಾರಂಭ<br>ಶಾಲಾ ವಾರ್ಷಿಕ ಯೋಜನೆ<br><br>ಶಾಲಾ ಶೈಕ್ಷಣಿಕ ಯೋಜನೆ ರೂಪಿಸುವುದು<br><br>ವಿದ್ಯಾರ್ಥಿಗಳಿಗೆ ಸರ್ಕಾರದ ಉತ್ತೇಜಕ ಸಾಮಗ್ರಿಗಳ ವಿತರಣೆ | • ಶಾಲಾ ವಾರ್ಷಿಕ ಕಾರ್ಯಸೂಚಿ ಮತ್ತು ಪಾಠಗಳ ಹಂಚಿಕೆಯನ್ನು ಸಿದ್ಧಪಡಿಸುವುದು<br>• ಶಾಲಾಹಂತದ ಶೈಕ್ಷಣಿಕ ಸೂಚ್ಯಾಂಕ ಮತ್ತು ಅಂಕಿ–ಅಂಶಗಳ ಸಮಂಜಸತೆಯನ್ನು ಖಾತರಿಪಡಿಸಿಕೊಳ್ಳುವುದು<br>• ಉಚಿತ ಪಠ್ಯಪುಸ್ತಕಗಳು<br>• ನಲಿಕಲಿ ಸಾಮಗ್ರಿಗಳು / ಕಿಟ್<br>• ಸಮವಸ್ತ್ರಗಳು, ಶಾಲಾ ಬ್ಯಾಗ್ ಮತ್ತು ನೋಟ್ ಪುಸ್ತಕಗಳು<br>• ಮಧ್ಯಾಹ್ನದ ಉಪಾಹಾರದ ಸಲಕರಣೆಗಳ ಸಿದ್ಧತೆ<br>• ಮಧ್ಯಾಹ್ನದ ಉಪಾಹಾರ ಯೋಜನೆ ಪ್ರಾರಂಭಿಸುವುದು |
| 01–06–2010 | | • ಶಾಲಾ ಪ್ರಾರಂಭೋತ್ಸವದ ದಿನ ಹಾಜರಾಗದ ಮಕ್ಕಳ ಮನೆಗೆ ಎಸ್.ಡಿ.ಎಂ.ಸಿ. ಮತ್ತು ಸಮುದಾಯದ ಮುಖಂಡರೊಂದಿಗೆ ಭೇಟಿ<br>• ಪೂರ್ಣ ಪ್ರಮಾಣದಲ್ಲಿ ತರಗತಿಯ ಬೋಧನೆ ಪ್ರಾರಂಭ |
| 28–05–2010 ರಿಂದ 25–06–2010 | ಸೇತುಬಂಧ ಶಿಕ್ಷಣ | • ಪೂರ್ವಪರೀಕ್ಷೆ<br>• ವಿದ್ಯಾರ್ಥಿವಾರು, ವಿಷಯವಾರು ಸಾಮರ್ಥ್ಯ ಗುರ್ತಿಸುವಿಕೆ |

| | | |
|---|---|---|
| | | • ಫಲಿತಾಂಶದ ವಿಶ್ಲೇಷಣೆ<br>• ಪರಿಹಾರ ಬೋಧನೆ<br>• ಸಾಫಲ್ಯ ಪರೀಕ್ಷೆ<br>• ಅನುಪಾಲನಾ ಚಟುವಟಿಕೆಗಳು |
| 05-06-2010 | ವಿಶ್ವ ಪರಿಸರ ದಿನಾಚರಣೆ | • ಶಾಲಾ ಕೈತೋಟ ನಿರ್ವಹಣೆ<br>• ಶಾಲೆಯ ಆವರಣದಲ್ಲಿ ನುಗ್ಗೆ, ಪಪ್ಪಾಯಿ, ತರಕಾರಿ ಗಿಡಗಳನ್ನು ನೆಡುವುದು<br>• ಹೊಸದಾಗಿ ಶಾಲೆಗೆ ದಾಖಲಾದ ಪ್ರತಿ ಮಗುವಿನಿಂದ ತಲಾ ಒಂದು ಗಿಡವನ್ನು ಶಾಲಾ ಪ್ರದೇಶದಲ್ಲಿ ನೆಡೆಸುವುದು ಮತ್ತು ಪ್ರತಿ ಗಿಡವನ್ನು ಮಕ್ಕಳು, ಶಿಕ್ಷಕರು, ಪೋಷಕರು ದತ್ತು ತೆಗೆದುಕೊಂಡು ಬೆಳೆಸುವುದು. ದತ್ತು ತೆಗೆದುಕೊಂಡವರ ಹೆಸರುಗಳನ್ನು ಆಯಾ ಗಿಡಗಳಲ್ಲಿ ಪ್ರದರ್ಶಿಸುವುದು<br>• ಶಾಲಾ ಆವರಣವನ್ನು ಸುಂದರವಾಗಿಡಲು ಹೂ ಗಿಡಗಳನ್ನು ಬೆಳೆಸುವುದು.<br>• ಶಾಲೆಗಳಲ್ಲಿಯ ಇಕೋ-ಕ್ಲಬ್ ಮೂಲಕ ಕಾರ್ಯಕ್ರಮ ಅನುಷ್ಠಾನಗೊಳಿಸುವುದು.<br>• ಜಾಗತಿಕ ತಾಪಮಾನದ ಬಗ್ಗೆ ಅರಿವು ಮೂಡಿಸುವುದು. |
| 12-06-2010 | ಬಾಲಕಾರ್ಮಿಕ ಪದ್ಧತಿ ಕುರಿತು ಸಮುದಾಯದಲ್ಲಿ ಜಾಗೃತಿ ಮೂಡಿಸುವುದು | • ಬಾಲಕಾರ್ಮಿಕ ಪದ್ಧತಿ ಕುರಿತು ಸಮುದಾಯದಲ್ಲಿ ಜಾಗೃತಿ ಮೂಡಿಸುವುದು.<br>• ನಿರ್ಮಾಣ ಕಾಮಗಾರಿಯಲ್ಲಿ ತೊಡಗಿರುವ ಪೋಷಕರು ಮತ್ತು ಬಾಲಕಾರ್ಮಿಕರನ್ನು ಗುರ್ತಿಸುವುದು<br>• ಹೋಟೆಲ್, ಕಾರ್ಖಾನೆ ಮತ್ತು ಗುಡಿಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಮಕ್ಕಳನ್ನು ಗುರುತಿಸಿ, ಶೈಕ್ಷಣಿಕ ಮುಖ್ಯವಾಹಿನಿಗೆ ತರುವುದು<br>• ಬಾಲ ಕಾರ್ಮಿಕ ಪದ್ಧತಿಯ ನಿಷೇಧ ಕುರಿತಂತೆ ಅಪರಾಧ ಮತ್ತು ಕಾನೂನು, ದಂಡ ವಿಧಿಸುವುದು ಸೇರಿದಂತೆ ಅಗತ್ಯ ಮಾಹಿತಿಯನ್ನು ಸಮುದಾಯ, ಪೋಷಕರು ಮತ್ತು ಸಂಬಂಧಿಸಿದ ಮಾಲೀಕರಿಗೆ ಮನವರಿಕೆ ಮಾಡುವ ಮೂಲಕ ಶಿಕ್ಷಣ ಜಾಗೃತಿ ಮೂಡಿಸುವುದು.<br>• ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಬಗ್ಗೆ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಇರುವ ಎಲ್ಲಾ ಮಧ್ಯವರ್ತನೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು. |

| | | |
|---|---|---|
| | | • ಪೋಷಕರು, ಸಮುದಾಯದ ಮುಖಂಡರು ಮತ್ತು ಎಸ್.ಡಿ.ಎಂ.ಸಿ ಸದಸ್ಯರುಗಳನ್ನು ಒಳಗೊಂಡು ಭಿತ್ತಿಪತ್ರಗಳೊಂದಿಗೆ ಮೆರವಣಿಗೆ ಏರ್ಪಡಿಸುವುದು.<br>• ಸಮೂಹ ಮಾಧ್ಯಮದಲ್ಲಿ ಈ ಬಗ್ಗೆ ವ್ಯಾಪಕ ಪ್ರಚಾರ ನೀಡುವುದು |
| 15–06–2010 ರಿಂದ 30–06–2010 ರವರೆಗೆ | ಶಾಲಾಹಂತದ ಕ್ರೀಡಾಸ್ಪರ್ಧೆಗಳ ಆಯೋಜನೆ | • ಶಾಲಾಹಂತದ ಉತ್ತಮ ಕ್ರೀಡಾಸ್ಪರ್ಧಿಗಳ ಹಾಗೂ ತಂಡಗಳ ಆಯ್ಕೆ |
| 16–06–2010 | ಚಿಣ್ಣರ ಅಂಗಳ ಕಾರ್ಯಕ್ರಮದ ಮಕ್ಕಳನ್ನು ಮುಖ್ಯವಾಹಿನಿಗೆ ದಾಖಲು ಮಾಡುವುದು | • ಚಿಣ್ಣರ ಅಂಗಳದ ಮಕ್ಕಳನ್ನು ದಾಖಲಿಸುವುದು<br>• ಸಾರ್ವತ್ರಿಕ ಹಾಜರಾತಿಗೆ ವಿಶೇಷವಾಗಿ ಚಿಣ್ಣರ ಅಂಗಳದ ಮಕ್ಕಳ ಉಳಿಯುವಿಕೆ ಮತ್ತು ಕಲಿಕೆಗೆ ವೈಯಕ್ತಿಕ ಗಮನವನ್ನು ನೀಡುವುದು |
| 26–06–2010 [ಶನಿವಾರ] | ಪ್ರತ್ಯೇಕವಾಗಿ ಮಾಸದ ನಾಲ್ಕನೇ ಶನಿವಾರ 11.00 ರಿಂದ 5.00 ಗಂಟೆಯವರೆಗೆ ಸಮಾಲೋಚನಾ ಸಭೆ | • ಕ್ಲಸ್ಟರ್‌ಹಂತದಲ್ಲಿ ಎಲ್ಲಾ ಶಿಕ್ಷಕರು ಮತ್ತು ಮುಖ್ಯಶಿಕ್ಷಕರ ಸಮಾಲೋಚನಾ ಸಭೆ ಏರ್ಪಡಿಸುವುದು.<br>• ಕ್ರಿಯಾಸಂಶೋಧನೆ, ಬೋಧನೆ ಮತ್ತು ಕಲಿಕೆ ಸಮಸ್ಯೆಗಳು ಹಾಗೂ ಪರಿಹಾರ ಕಾರ್ಯಕ್ರಮಗಳ ಕುರಿತು ಪರಸ್ಪರ ಅನುಭವಗಳನ್ನು ಹಂಚಿಕೆ ಮಾಡಿಕೊಳ್ಳುವುದು<br>• ಗ್ರಂಥಾಲಯಗಳ ಬಳಕೆ, ಬೋಧನೆ–ಕಲಿಕೆ ಉಪಕರಣಗಳ ಸಿದ್ಧತೆ ಮತ್ತು ಸಮರ್ಪಕ ಬಳಕೆ ಕುರಿತು ಚರ್ಚೆ<br>• ಟಿ.ಎಲ್.ಎಂ ಬಳಕೆ ವಹಿ ನಿರ್ವಹಣೆ<br>• ತರಬೇತಿಗಳ ಅಗತ್ಯ, ಆದ್ಯತೆ ಕುರಿತು ಚರ್ಚೆ ಮತ್ತು ವಿವರಗಳ ಪಟ್ಟಿ ಸಿದ್ಧತೆ<br>• ಗುಣಾತ್ಮಕ ಉಸ್ತುವಾರಿ ನಮೂನೆಗಳನ್ನು ಅನುಸರಿಸುವ ಬಗ್ಗೆ ಪೂರ್ವಸಿದ್ಧತೆ ಮತ್ತು ಚರ್ಚೆ |
| 30–06–2010 | ವಿಶೇಷ ದಾಖಲಾತಿ ಆಂದೋಲನ | • 29–06–2010 ರವರೆಗೆ ಶಾಲೆಗೆ ಬಾರದ ಮಕ್ಕಳನ್ನು ಶಾಲೆಗೆ ಕರೆತರುವುದು.(ದಾಖಲಾತಿ ಶೇಕಡಾ 100 ರಷ್ಟು ಇರುವ ಶಾಲೆಗೆ ಈ ಸೂಚನೆ ಅನ್ವಯಿಸುವುದಿಲ್ಲ.)<br>• ಶಾಲೆಗೆ ಬರದಿರುವ ಮಕ್ಕಳ ಭಾವಚಿತ್ರ ತೆಗೆಸುವುದು ಮತ್ತು ಪೋಷಕರ ವಿಳಾಸ ಇನ್ನಿತರ ವಿವರಗಳನ್ನು ಸಂಗ್ರಹಿಸಿ ದಾಖಲಿಸುವುದು.<br>• ಇಂತಹ ಮಕ್ಕಳ ಪೋಷಕರಿಗೆ ಸ್ಥಳೀಯ ಜನಪ್ರತಿನಿಧಿಗಳು ಮತ್ತು ಸಮುದಾಯದ |

| | | |
|---|---|---|
| | | ಮುಖಂಡರಿಂದ ಪತ್ರ ಕಳುಹಿಸುವುದು.<br>• ತಹಶೀಲ್ದಾರ್ ಸೇರಿದಂತೆ ಸ್ಥಳೀಯ ಅಧಿಕಾರಿಗಳಿಂದ ಪೋಷಕರನ್ನು ಭೇಟಿ ಮಾಡಿಸಿ, ತಿಳುವಳಿಕೆ ಮೂಡಿಸುವುದು.<br>• ದ್ವಿದಾಖಲಾತಿ ಪ್ರಕರಣವನ್ನು ಪತ್ತೆಹಚ್ಚಿ ಸೂಕ್ತ ದಾಖಲೆಗಳ ಆಧಾರದ ಮೇಲೆ ಪ್ರವೇಶ ದಾಖಲೆ ಮತ್ತು ವಿದ್ಯಾರ್ಥಿಯ ಹಾಜರಿ ದಾಖಲೆಗಳಿಂದ ವಿದ್ಯಾರ್ಥಿಯ ಹೆಸರನ್ನು ತೆಗೆಯುವುದು. ಒಬ್ಬ ವಿದ್ಯಾರ್ಥಿಯ ಹೆಸರು ಒಮ್ಮೆ ಮಾತ್ರ ದಾಖಲಾಗುವಚಿತೆ ಕ್ರಮ ವಹಿಸುವುದು. |
| 01–07–2010 ರಿಂದ | ಸೇತುಬಂಧ ಶಿಕ್ಷಣದ ಸಾಫಲ್ಯ ಪರೀಕ್ಷೆಯ ಅನುಪಾಲನೆ | • ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವೈಯಕ್ತಿಕ ಗಮನ ನೀಡುವುದು. |
| 15–07–2010 ರಿಂದ 20–07–2010 ರವರೆಗೆ | ಹೋಬಳಿಮಟ್ಟದ ಕ್ರೀಡಾಕೂಟಗಳು | • ಹೋಬಳಿ ಹಂತದಲ್ಲಿ ಎಲ್ಲಾ ಮಕ್ಕಳು ಭಾಗವಹಿಸುವಂತೆ ಕ್ರೀಡೆಗಳನ್ನು ಏರ್ಪಡಿಸಿ ತಾಲ್ಲೂಕು ಮತ್ತು ಜಿಲ್ಲಾಮಟ್ಟಕ್ಕೆ ಅಗತ್ಯ ಸಿದ್ಧತೆ ಮಾಡುವುದು. |
| 15–07–2010 ರಿಂದ 16–07–2010 | ಮೊದಲನೇ ಕಿರುಪರೀಕ್ಷೆ | • ವಿಷಯವಾರು ಹಾಗೂ ತರಗತಿವಾರು ಒಂದು ಅವಧಿಗೆ ಸೀಮಿತಗೊಂಡಂತೆ ಕಿರುಪರೀಕ್ಷೆ ನಡೆಸುವುದು. |
| 03–08–2010 ರಿಂದ 04–08–2010 | ತಾಲ್ಲೂಕುಮಟ್ಟದ ಕ್ರೀಡಾಕೂಟ | • ಇಲಾಖೆಯ ಸೂಚನೆಗಳಿಗನುಗುಣವಾಗಿ ತಾಲ್ಲೂಕು ಕ್ರೀಡಾಕೂಟವನ್ನು ಏರ್ಪಡಿಸುವುದು. ಜಿಲ್ಲಾಮಟ್ಟಕ್ಕೆ ಅಗತ್ಯ ಸಿದ್ಧತೆ |
| 07–08–2010 | ಟಿ.ಎಲ್.ಎಂ ಮೇಳ | • ಶಾಲಾ ಹಂತದಲ್ಲಿ ಶಿಕ್ಷಕರು ಪ್ರಸಕ್ತ ಸಾಲಿಗೆ ಸಿದ್ಧಪಡಿಸಿದ ವಿಷಯವಾರು ಮತ್ತು ಶಿಕ್ಷಕವಾರು ಬೋಧನೆ–ಕಲಿಕೆ ಉಪಕರಣಗಳನ್ನು ಪ್ರದರ್ಶಿಸುವುದು.<br>• ಎಲ್ಲಾ ವಿದ್ಯಾರ್ಥಿಗಳು, ಪೋಷಕರು ಮತ್ತು ಸಮುದಾಯದವರು ವೀಕ್ಷಿಸಲು ಅನುವು ಮಾಡಿಕೊಡುವುದು. |
| 13–08–2010 ರಿಂದ 14–08–2010 | ಸ್ವಾತಂತ್ರ್ಯ ದಿನಾಚರಣೆಯ ಪೂರ್ವಸಿದ್ಧತೆ | • ಸ್ವಾತಂತ್ರ್ಯ ದಿನಾಚರಣೆಗೆ ಸಂಬಂಧಿಸಿದಂತೆ ಅಗತ್ಯ ಪೂರ್ವಸಿದ್ಧತೆ ಮಾಡಿಕೊಳ್ಳುವುದು. |
| 15–08–2010 | ಸ್ವಾತಂತ್ರ್ಯ ದಿನಾಚರಣೆ | • ಮಕ್ಕಳು ಪೋಷಕರು ಹಾಗೂ ಸಮುದಾಯದ ಪಾಲ್ಗೊಳ್ಳುವಿಕೆಯೊಂದಿಗೆ ಸ್ವಾತಂತ್ರ್ಯ ದಿನವನ್ನು ಆಚರಿಸುವುದು. |
| 16–08–2010 ರಿಂದ 25–08–2010 | ಜಿಲ್ಲಾಮಟ್ಟದ ಕ್ರೀಡಾಕೂಟ | • ಇಲಾಖೆಯ ಸೂಚನೆಗಳಿಗನುಗುಣವಾಗಿ ಜಿಲ್ಲಾಹಂತದ ಕ್ರೀಡಾಕೂಟವನ್ನು ಏರ್ಪಡಿಸುವುದು. ವಿಭಾಗಮಟ್ಟಕ್ಕೆ ಅಗತ್ಯ ಸಿದ್ಧತೆ |

| | | |
|---|---|---|
| 1–08–2010 ರಿಂದ 30–08–2010 | ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ ಮಾಸಾಚರಣೆ | • ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಶಾಲೆ ಹಂತದಲ್ಲಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸುವುದು. |
| 29–08–2010 | ರಾಷ್ಟ್ರೀಯ ಕ್ರೀಡಾದಿನ. ಹಾಕಿ ಪಟು ಮೇಜರ್ ಧ್ಯಾನ್‌ಚಂದ್ ಅವರ ಹುಟ್ಟುಹಬ್ಬ. | • ರಾಷ್ಟ್ರಮಟ್ಟದ ಕ್ರೀಡೆಗಳು ಹಾಗೂ ಪುರಸ್ಕಾರಗಳ ಬಗ್ಗೆ ತಿಳುವಳಿಕೆ ನೀಡುವುದು<br>• ನಾನು ಮೆಚ್ಚುವ ಆಟ ಅಥವಾ ಶಿಕ್ಷಕರು ಆಯ್ಕೆ ಮಾಡಿದ ಸೂಕ್ತ ವಿಷಯದ ಬಗ್ಗೆ ಪ್ರಬಂಧ ಸ್ಪರ್ಧೆ ಏರ್ಪಡಿಸುವುದು |
| 04–09–2010 | ಶಿಕ್ಷಕರ ದಿನಾಚರಣೆ ಪೂರ್ವ ತಯಾರಿ | • ಶಿಕ್ಷಕರ ದಿನಾಚರಣೆಗೆ ಪೂರ್ವಸಿದ್ಧತೆ ಮಾಡಿಕೊಳ್ಳುವುದು<br>• ಬಾವುಟಗಳ ವಿತರಣೆ ಮತ್ತು ವಂತಿಗೆ ಸಂಗ್ರಹಣೆ |
| 05–09–2010 | ಶಿಕ್ಷಕರ ದಿನಾಚರಣೆ | • ಶಿಕ್ಷಕರ ದಿನವನ್ನು ಆಚರಿಸುವುದು |
| 08–09–2010 | ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆ | • ಸಾಕ್ಷರತೆಯ ಮಹತ್ವವನ್ನು ಕುರಿತು ಮಕ್ಕಳಿಗೆ ಆಶುಭಾಷಣ, ಚರ್ಚಾಸ್ಪರ್ಧೆ, ಪ್ರಬಂಧಸ್ಪರ್ಧೆ ಇತ್ಯಾದಿ ಏರ್ಪಡಿಸುವ ಮೂಲಕ ಮನವರಿಕೆ ಮಾಡುವುದು |
| 13–09–2010 | ಮೆಟ್ರಿಕ್ ಮೇಳ | • ಇಲಾಖಾ ಸೂಚನೆಗನುಗುಣವಾಗಿ ಹೋಬಳಿಮಟ್ಟದ ಮೆಟ್ರಿಕ್‌ಮೇಳ ಏರ್ಪಡಿಸುವುದು |
| 15–09–2010 | ಸರ್.ಎಂ.ವಿಶ್ವೇಶ್ವರಯ್ಯನವರ ದಿನಾಚರಣೆ(ಇಂಜಿನಿಯರುಗಳ ದಿನ) | • ವಿಶ್ವೇಶ್ವರಯ್ಯನವರು ಹುಟ್ಟಿದ ಈ ದಿನದಂದು ಅವರ ಜೀವನ ಮತ್ತು ಸಾಧನೆಯ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡುವುದು.<br>• ಮಕ್ಕಳಿಗೆ ಭಾಷಣ, ಪ್ರಬಂಧಸ್ಪರ್ಧೆ ಏರ್ಪಡಿಸುವುದು. |
| 15–09–2010 ರಿಂದ 06–10–2010 ರವರೆಗೆ | ವಿಭಾಗ ಮಟ್ಟದ ಕ್ರೀಡಾಕೂಟ | • ಇಲಾಖೆಯ ಸೂಚನೆಗಳಿಗೆ ಅನುಗುಣವಾಗಿ ವಿಭಾಗಮಟ್ಟದ ಪಂದ್ಯಾವಳಿಗಳನ್ನು ನಡೆಸುವುದು. |
| 25–09–2010 ರಿಂದ 26–10–2010 | ಮೊದಲನೇ ಸೆಮಿಸ್ಟರ್ ಪರೀಕ್ಷೆ ಪೂರ್ವತಯಾರಿ | • ಪ್ರಶ್ನೆಪತ್ರಿಕೆ ಸಿದ್ಧಪಡಿಸುವುದು |
| 27–09–2010 ರಿಂದ 04–10–2010 | ಮೊದಲನೇ ಸೆಮಿಸ್ಟರ್ ಪರೀಕ್ಷೆಗಳು | • 2010–11ನೇ ಶೈಕ್ಷಣಿಕ ಸಾಲಿನ ಮೊದಲನೇ ಸೆಮಿಸ್ಟರ್ ಪರೀಕ್ಷೆಯನ್ನು ಅಗತ್ಯ ಪೂರ್ವಸಿದ್ಧತೆಯೊಂದಿಗೆ ನಡೆಸುವುದು. |
| 02–10–2010 | ಗಾಂಧಿಜಯಂತಿ | • ಗಾಂಧೀಜಿ ಜೀವನ ಚರಿತ್ರೆಯನ್ನು ಮಕ್ಕಳಿಗೆ ಪರಿಚಯಿಸುವುದು. ರಸಪ್ರಶ್ನೆ, ಶ್ರಮದಾನ, ಚಿತ್ರಗಳ ಸಂಗ್ರಹ/ಪ್ರದರ್ಶನ, ಸೆಮಿನಾರ್, ಇತ್ಯಾದಿ ಚಟುವಟಿಕೆ ಮಾಡಿಸಬಹುದೆ? ಪ್ರಯತ್ನಿಸಿ, ಅನೂಚಾನವಾಗಿ ನಡೆಯುತ್ತಿರುವ ಸಭೆ ಸಮಾರಂಭವನ್ನು ಕೈ |

| | | |
|---|---|---|
| | | ಬಿಡಬಹುದೆ? ಪ್ರಯತ್ನಿಸಿ.<br>• ಶಾಂತಿ, ಅಹಿಂಸೆ, ಸತ್ಯಾಗ್ರಹ ತತ್ವಗಳ ಕುರಿತು ಮಕ್ಕಳಿಗೆ ಮನದಟ್ಟು ಮಾಡಿಕೊಡುವುದು.<br>• ಗಾಂಧೀಜಿ ಕುರಿತ ಪುಸ್ತಕಗಳ ಅಧ್ಯಯನಕ್ಕೆ ಈ ತಿಂಗಳಲ್ಲಿ ಪ್ರಯತ್ನಿಸಿ. |
| 05–10–2010<br><br>06–10–2010 | **ಮೊದಲನೇ ಸಮುದಾಯದತ್ತ ಶಾಲೆ**<br><br>**ಪ್ರಾಥಮಿಕ ಶಾಲೆಗಳಲ್ಲಿ (ಮಂಗಳವಾರ)**<br><br>**ಪ್ರೌಢಶಾಲೆಗಳಲ್ಲಿ : ಬುಧವಾರ** | • ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಫಲಿತಾಂಶ ಕಲಿಕಾ ಸಾಮರ್ಥ್ಯಗಳ ವಿಶ್ಲೇಷಣೆ ಮಾಡಿ ಪೋಷಕರೊಂದಿಗೆ ಸಂವಾದ ಏರ್ಪಡಿಸುವುದು.<br>• ಎಸ್.ಡಿ.ಎಂ.ಸಿ. ಸದಸ್ಯರು, ಸಮುದಾಯ ಮತ್ತು ಪೋಷಕರು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು<br>• ಮಕ್ಕಳ ನಿರಂತರ ಹಾಜರಾತಿ ಮತ್ತು ಕಲಿಕೆಗೆ ಇರುವ ಸಂಬಂಧವನ್ನು ಪೋಷಕರಿಗೆ ಮನವರಿಕೆ ಮಾಡಿಕೊಡುವುದು.<br>• ಮಕ್ಕಳ ಕಲಿಕೆಯನ್ನು ಸಮುದಾಯಕ್ಕೆ ಪ್ರಸ್ತುತ ಪಡಿಸುವುದು<br>• ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆ ಏರ್ಪಡಿಸಿ, ವಿಜೇತರಿಗೆ ಬಹುಮಾನ ವಿತರಿಸುವುದು. |
| 07–10–2010 ರಿಂದ 24–10–2010 ರವರೆಗೆ **ಮಧ್ಯಂತರ ರಜೆ** | | |
| 31–10–2009 | ರಾಷ್ಟ್ರೀಯ ಸಂಕಲ್ಪ ದಿನ<br>ಎಸ್‌ಡಿಎಂಸಿ ಸಭೆ | • ರಾಷ್ಟ್ರೀಯ ಭಾವೈಕ್ಯತೆ ಗೀತೆ ಹಾಡಿಸುವುದು<br>• ರಾಷ್ಟ್ರೀಯ ಭಾವೈಕ್ಯತೆ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡುವುದು<br>• ಕನ್ನಡ ರಾಜ್ಯೋತ್ಸವಕ್ಕೆ ಪೂರ್ವಸಿದ್ಧತೆ |
| 01.11.2009 | ಕನ್ನಡ ರಾಜ್ಯೋತ್ಸವ | • ಕನ್ನಡ ರಾಜ್ಯೋತ್ಸವದ ಅಂಗವಾಗಿ ಪ್ರಶಸ್ತಿ ನೀಡಲು ಎಲ್ಲಾ ಮಕ್ಕಳಿಗೆ ತರಗತಿವಾರು ಸ್ಪರ್ಧೆ ಏರ್ಪಡಿಸುವುದು.<br>• 2, 3ನೇ ತರಗತಿಗೆ ಓದು ಕನ್ನಡ<br>• 4, 5ನೇ ತರಗತಿಗೆ ಅಂದವಾದ ಬರವಣಿಗೆ, ಉಕ್ತಲೇಖನ ಮತ್ತು ಆಶುಭಾಷಣ<br>• 6,7 ನೇ ತರಗತಿಗೆ ಭಾವಗೀತೆ, ಪ್ರಬಂಧಸ್ಪರ್ಧೆ<br>3ರಿಂದ 7ನೇ ತರಗತಿಗೆ ಅಂದವಾದ ಬರವಣಿಗೆ<br>(ಗಮನಿಸಿ–ಇವು ಸಲಹಾತ್ಮಕ. ಸಂವಾದಿಯಾದ ಮತ್ತು ಯುಕ್ತವಾದ ಇತರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು) |

| | | |
|---|---|---|
| 08-11-2010 ರಿಂದ 09-11-2010 | ಶಾಲಾಮಟ್ಟದಲ್ಲಿ ಪ್ರತಿಭಾ ಕಾರಂಜಿ | • ಶಾಲಾ ಹಂತದಲ್ಲಿ ಇಲಾಖೆ ನೀಡುವ ಸೂಚನೆಗಳಿಗೆ ಅನುಗುಣವಾಗಿ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಏರ್ಪಡಿಸುವುದು. |
| 14.11.2010 | ಮಕ್ಕಳ ದಿನಾಚರಣೆ | • ಮಕ್ಕಳ ಹಕ್ಕುಗಳ ಕ್ಲಬ್‌ನಿಂದ ಕಾರ್ಯಕ್ರಮ ನಡೆಸುವುದು<br>• ಪೋಷಕರು, ಎಸ್.ಡಿ.ಎಂ.ಸಿ ಸದಸ್ಯರ ಸಮ್ಮುಖದಲ್ಲಿ ವೇದಿಕೆಯಲ್ಲಿ ಅಧ್ಯಕರು, ಅತಿಥಿಗಳು ಎಲ್ಲರೂ ಮಕ್ಕಳೇ ಇರುವಂತೆ ಕಾರ್ಯಕ್ರಮ ನಡೆಸುವುದು |
| 18-11-2010 ರಿಂದ 19-11-2010 | ಕ್ಲಸ್ಟರ್‌ಮಟ್ಟದ ಪ್ರತಿಭಾ ಕಾರಂಜಿ | • ಶಾಲಾಮಟ್ಟದಲ್ಲಿ ನಡೆದ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಕ್ಲಸ್ಟರ್ ಮಟ್ಟದಲ್ಲಿ ಸ್ಪರ್ಧೆ ಏರ್ಪಡಿಸುವುದು. |
| 19.11.2010 ರಿಂದ 25.11.2010 | ರಾಷ್ಟ್ರೀಯ ಭಾವೈಕ್ಯತಾ ಸಪ್ತಾಹ | • ಭಾವೈಕ್ಯತಾ ಗೀತಗಾಯನ ಸ್ಪರ್ದೆ, ಚರ್ಚಾಸ್ಪರ್ದೆ, ಕೋಮು ಸೌಹಾರ್ದತೆಯ ಬಗ್ಗೆ ಪ್ರಬಂಧ ಹಾಗೂ ಇತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. |
| 21-11-2010 | ಬ್ಲಾಕ್‌ಹಂತದ ಟಿಎಲ್‌ಎಂ ಮತ್ತು ಮೆಟ್ರಿಕ್ ಮೇಳ | • ಇಲಾಖಾ ಸೂಚನೆಗನುಗುಣವಾಗಿ ಬ್ಲಾಕ್‌ಹಂತದ ಟಿಎಲ್‌ಎಂ ಮತ್ತು ಮೆಟ್ರಿಕ್ ಮೇಳ ಏರ್ಪಡಿಸುವುದು. |
| 23-11-2010 ರಿಂದ 29-11-2010 | ಬ್ಲಾಕ್ ಹಂತದ ವಿಜ್ಞಾನ ವಸ್ತು ಪ್ರದರ್ಶನ | • ಇಲಾಖಾ ಸೂಚನೆಗನುಗುಣವಾಗಿ ಬ್ಲಾಕ್‌ಹಂತದ ವಿಜ್ಞಾನ ವಸ್ತು ಪ್ರದರ್ಶನ ಏರ್ಪಡಿಸುವುದು. |
| 27.11.2010 | ಶಿಕ್ಷಕರ ಸಮಾಲೋಚನಾ ಸಭೆ | • ಪ್ರಾಜೆಕ್ಟ್ ವರ್ಕ್, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಮಕ್ಕಳಲ್ಲಿ ಹೆಚ್ಚುವರಿ ಅರಿವು ಮೂಡಿಸುವುದು |
| 29.11.2010 ರಿಂದ 30.11.2010 | ತಾಲ್ಲೂಕುಮಟ್ಟದ ಪ್ರತಿಭಾ ಕಾರಂಜಿ | • ಕ್ಲಸ್ಟರ್‌ಮಟ್ಟದಲ್ಲಿ ನಡೆದ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ತಾಲ್ಲೂಕುಮಟ್ಟದಲ್ಲಿ ಸ್ಪರ್ಧೆ ಏರ್ಪಡಿಸುವುದು. |
| 03-12-2010<br><br>08-12-2010 ರಿಂದ 09-12-2010 | ವಿಶ್ವ ಅಂಗವಿಕಲರ ದಿನಾಚರಣೆ<br><br>ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ | • ಶಾಲೆಯಲ್ಲಿ ದಾಖಲಾಗಿರುವ ಮತ್ತು ಶಾಲಾ ಜನವಸತಿ ಪ್ರದೇಶದಲ್ಲಿರುವ ವಿಶೇಷ ಅವಶ್ಯಕತೆಯುಳ್ಳ ಮಕ್ಕಳಿಗೆ ಸಹಪಠ್ಯ ಚಟುವಟಿಕೆಗಳನ್ನು ಏರ್ಪಡಿಸಿ ಪ್ರೋತ್ಸಾಹಿಸುವುದು.<br>• ಎಲ್ಲಾ ವಿದ್ಯಾರ್ಥಿಗಳಿಗೆ ವಿಶ್ವ ಅಂಗವಿಕಲರ ದಿನಾಚರಣೆಯ ಪ್ರಯುಕ್ತ ಅರಿವು ಕಾರ್ಯಕ್ರಮ ಭಾಷಣ, ಇತ್ಯಾದಿಗಳನ್ನು ಏರ್ಪಡಿಸುವುದು.<br>• ವಿಶ್ವ ಅಂಗವಿಕಲರ ದಿನಾಚರಣೆಯ ಪ್ರಯುಕ್ತ ಮಕ್ಕಳಿಂದ ಜಾಥಾ ನಡೆಸುವುದು<br>• ತಾಲ್ಲೂಕುಮಟ್ಟದಲ್ಲಿ ನಡೆದ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಜಿಲ್ಲಾಮಟ್ಟದಲ್ಲಿ ಸ್ಪರ್ಧೆ ಏರ್ಪಡಿಸುವುದು. |

| | | |
|---|---|---|
| 14–12–2010<br>ರಿಂದ<br>15–12–2010 | ಎರಡನೇ ಕಿರುಪರೀಕ್ಷೆ | • ವಿಷಯವಾರು ಹಾಗೂ ತರಗತಿವಾರು |
| 07–12–2010<br>ರಿಂದ<br>31–12–2010 | ಶೈಕ್ಷಣಿಕ ಪ್ರವಾಸ | • ಪ್ರತಿ ಶಾಲೆಯಲ್ಲಿ ಶಾಲೆಗೆ ಸಮೀಪವಿರುವ ಪ್ರಸಿದ್ಧ ಸ್ಥಳಗಳಿಗೆ ಹೊರಸಂಚಾರ<br>• ಪಠ್ಯವಸ್ತುವಿಗೆ ಪೂರಕವಾದ ಸ್ಥಳಗಳಿಗೆ ಪ್ರವಾಸ ಕೈಗೊಂಡು ಭಾರತೀಯ ಸಂಸ್ಕೃತಿ, ಪರಂಪರೆ, ಇತಿಹಾಸದ ಪರಿಚಯ ಮಾಡಿಸುವುದು.<br>• ಪ್ರವಾಸದಿಂದ ಹಿಂತಿರುಗಿದ ನಂತರ ಪ್ರತಿ ಮಗುವಿನ ಅನುಭವವನ್ನು ಮಕ್ಕಳಿಂದಲೇ ಬರೆಸಿ ಕಾಗುಣಿತ ದೋಷ ತಿದ್ದಿ ಮಕ್ಕಳ ಪ್ರವಾಸ ಕಥನ ಪುಸ್ತಿಕೆ ಸಿದ್ಧಪಡಿಸುವುದು<br>• ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮದಡಿ " ಚಿಣ್ಣರ ಕರ್ನಾಟಕ" ಶೈಕ್ಷಣಿಕ ಪ್ರವಾಸಕ್ಕೆ ಇಲಾಖೆಯ ಸುತ್ತೋಲೆಗಳಿಗನುಗುಣವಾಗಿ ಮಕ್ಕಳನ್ನು ಆಯ್ಕೆ ಮಾಡಿ ಅಗತ್ಯ ಕ್ರಮ ಕೈಗೊಳ್ಳುವುದು. |
| 10.12.2010 | ಮಾನವ ಹಕ್ಕುಗಳ ದಿನಾಚರಣೆ | • ಮಾನವ ಹಕ್ಕುಗಳ ಕುರಿತು ಉಪನ್ಯಾಸ, ಪ್ರಬಂಧ ಸ್ಪರ್ಧೆ, ಚರ್ಚಾಸ್ಪರ್ಧೆ, ರಸಪ್ರಶ್ನೆ ಕಾರ್ಯಕ್ರಮಗಳನ್ನು ಏರ್ಪಡಿಸುವುದು. |
| 11–12–2010 | ಜಿಲ್ಲಾಮಟ್ಟದ ಟಿಎಲ್ಎಂ ಮತ್ತು ಮೆಟ್ರಿಕ್ ಮೇಳ ಹಾಗೂ ವಿಜ್ಞಾನ ವಸ್ತು ಪ್ರದರ್ಶನ | • ಇಲಾಖಾ ಸೂಚನೆಗನುಗುಣವಾಗಿ ಏಕಕಾಲದಲ್ಲಿ ಜಿಲ್ಲಾಮಟ್ಟದ ಟಿಎಲ್ಎಂ ಮತ್ತು ಮೆಟ್ರಿಕ್ ಮೇಳ ಹಾಗೂ ವಿಜ್ಞಾನ ವಸ್ತು ಪ್ರದರ್ಶನ ಏರ್ಪಡಿಸುವುದು.<br>• ಆಯ್ಕೆಯಾದ ವಿದ್ಯಾರ್ಥಿಗಳ ಪಟ್ಟಿಯನ್ನು ರಾಜ್ಯಮಟ್ಟದ ಸಮನ್ವಯ ಅಧಿಕಾರಿಗಳಿಗೆ ಕಳುಹಿಸಿಕೊಡುವುದು. |
| 23–12–2010 | ವಿಶ್ವ ರೈತರ ದಿನ | • ಪೋಷಕರು ಹಾಗೂ ಸ್ಥಳೀಯ ರೈತರಿಗೆ ಮಕ್ಕಳ ಸಮ್ಮುಖದಲ್ಲಿ ಜಾಗತೀಕರಣದ ಪ್ರಭಾವದ ಬಗ್ಗೆ ಮಾಹಿತಿ ನೀಡುವುದು ಸ್ಥಳೀಯ ಬೆಳೆಗಳು, ಬೆಳೆಗಳಲ್ಲಿ ಕಂಡುಬರುವ ರೋಗಗಳ ಬಗ್ಗೆ, ಅಂತರ್ಜಲ, ಮಳೆ ನೀರು ಕೊಯ್ಲು, ಮಾರುಕಟ್ಟೆ ಇತ್ಯಾದಿ ವಿಚಾರಗಳ ಬಗ್ಗೆ ಸಂವಾದ ಏರ್ಪಡಿಸುವುದು |
| 27–12–2010<br>ರಿಂದ<br>31–12–2010 | ಶಾಲಾ ವಾರ್ಷಿಕೋತ್ಸವ ಹಾಗೂ ಶಾಲಾ ಮ್ಯಾಗಜೈನ್ (ಶಾಲಾ ಮಕ್ಕಳ ಕೈಬರಹದ ಪತ್ರಿಕೆ) | • ಶಾಲಾ ವಾರ್ಷಿಕೋತ್ಸವಗಳನ್ನು ನಡೆಸಿ ಪೋಷಕರಿಗೆ ಮಕ್ಕಳ ಕಲಿಕೆಯನ್ನು ಪಠ್ಯ ಮತ್ತು ಸಹಪಠ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಪ್ರಸ್ತುತ ಪಡಿಸುವುದು.<br>• ಪ್ರತಿ ಶಾಲೆಯಲ್ಲಿ ಮಕ್ಕಳಿಂದಲೇ ಬರೆಸಿದ ಚುಟುಕ, ಲೇಖನ, ಸಂಗ್ರಹ, ಚಿತ್ರಗಳು, ಸುಭಾಷಿತ ಇತ್ಯಾದಿ |

| | | |
|---|---|---|
| | | ಒಳಗೊಂಡ ಶಾಲಾ ಮ್ಯಾಗಜ಼ಿನ್ ಬಿಡುಗಡೆ ಮಾಡಿಸುವುದು. |
| 12–01–2011 | ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ ಹಾಗೂ ರಾಷ್ಟ್ರೀಯ ಯುವ ದಿನಾಚರಣೆ | • ಸ್ವಾಮಿ ವಿವೇಕಾನಂದರ ಜೀವನ ಆದರ್ಶ ಕುರಿತು ಉಪನ್ಯಾಸ<br>• ಜಾಗತೀಕರಣದ ಹಿನ್ನೆಲೆಯಲ್ಲಿ ಬದಲಾಗುತ್ತಿರುವ ಭಾರತದ ಚಿತ್ರಣದ ಬಗ್ಗೆ ಸ್ಥಳೀಯ ಯುವಕರೊಂದಿಗೆ ಸಂವಾದ |
| 23–01–2011 | ನೇತಾಜಿ ಸುಭಾಷ್‌ಚಂದ್ರ ಬೋಸ್ ಜನ್ಮ ದಿನಾಚರಣೆ | • ವಿದ್ಯಾರ್ಥಿಗಳಿಗೆ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸ್‌ರವರ ಪಾತ್ರದ ಕಿರುಪರಿಚಯ ನೀಡುವುದು. |
| 26–01–2011 | ಗಣರಾಜ್ಯೋತ್ಸವ ದಿನಾಚರಣೆ | • ಹೆಚ್ಚಿನ ಸಂಖ್ಯೆಯ ಪೋಷಕರು ಹಾಗೂ ಸಮುದಾಯದ ಗಣ್ಯರ ಹಾಜರಿಯಲ್ಲಿ ಗಣರಾಜ್ಯೋತ್ಸವ ಆಚರಿಸುವುದು |
| 30–01–2011 | ಹುತಾತ್ಮರ ದಿನಾಚರಣೆ | • ಮಹಾತ್ಮ ಗಾಂಧೀಜಿಯವರ ಮೌಲ್ಯಗಳನ್ನು ಮಕ್ಕಳಿಗೆ ಮನನ ಮಾಡಿಕೊಡುವುದು.<br>• ದೇಶದ ಸ್ವಾತಂತ್ರ್ಯಕ್ಕಾಗಿ ಹುತಾತ್ಮರಾದವರನ್ನು ನೆನಪಿಸಿಕೊಳ್ಳುವುದು.<br>• ಸಾಮೂಹಿಕ ಭಜನೆ ಕಾರ್ಯಕ್ರಮ ಹಮ್ಮಿಕೊಳ್ಳುವುದು |
| 19–02–2011 ಮತ್ತು 20–02–2011 | ರಾಜ್ಯಮಟ್ಟದ ಟಿಎಲ್‌ಎಂ ಮತ್ತು ಮೆಟ್ರಿಕ್ ಮೇಳ ಹಾಗೂ ವಿಜ್ಞಾನ ವಸ್ತು ಪ್ರದರ್ಶನ | • ಇಲಾಖಾ ಸೂಚನೆಗನುಗುಣವಾಗಿ ಜಿಲ್ಲಾಸಮಟ್ಟದ ಮೇಳಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಸಿದ್ಧಪಡಿಸಿದ ಉತ್ತಮ ಸಾಮಗ್ರಿಗಳ ಪ್ರದರ್ಶನ |
| 28–02–2011 | ರಾಷ್ಟ್ರೀಯ ವಿಜ್ಞಾನ ದಿನಾಚರಣೆ | • ಪ್ರತಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಜ್ಞಾನದ ಕ್ಲಬ್ ಮೂಲಕ ಆಯ್ದ ಮಕ್ಕಳಿಂದ ನೆಲ, ಜಲ, ಮಳೆ, ವಿಕಿರಣಗಳ ಪರಿಣಾಮ ಹಾಗೂ ಓಜ಼ೋನ್ ಪದರದ ಮಹತ್ವವನ್ನು ಮಕ್ಕಳಿಗೆ ತಿಳಿಸುವುದು.<br>• ಮೊಬೈಲ್ ಬಳಕೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ತಿಳಿವಳಿಕೆ ನೀಡುವುದು.<br>• ಪ್ರತಿ ಶಾಸಕರ ಕ್ಷೇತ್ರದಲ್ಲಿ ವಿಜ್ಞಾನ ಕೇಂದ್ರ ಇರುವ ಆಯ್ದ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿಜ್ಞಾನ ಉಪಕರಣಗಳನ್ನು ಬಳಸಿ ಪ್ರಯೋಗಗಳನ್ನು ಏರ್ಪಡಿಸುವುದು.<br>• ಜಗದ್ವಿಖ್ಯಾತ ವಿಜ್ಞಾನಿಗಳ ಸಾಧನೆಗಳ ಪರಿಚಯ, ಶಾಲಾಮಟ್ಟದಲ್ಲಿ ಮಕ್ಕಳಿಂದ ವಿಜ್ಞಾನ ವಸ್ತು ಪ್ರದರ್ಶನ ಏರ್ಪಡಿಸಿ ಪೋಷಕರು ಹಾಗೂ ಸಮುದಾಯ ವೀಕ್ಷಿಸಲು ಅನುವು ಮಾಡಿಕೊಡುವುದು.<br>• ವಿಜ್ಞಾನದ ರಸಪ್ರಶ್ನೆ ಕಾರ್ಯಕ್ರಮ ಏರ್ಪಡಿಸುವುದು |

| | | |
|---|---|---|
| 08–03–2011 | ವಿಶ್ವ ಮಹಿಳಾ ದಿನಾಚರಣೆ | • ಮಹಿಳಾ ಸಬಲೀಕರಣದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು.<br>• ಲಿಂಗತಾರತಮ್ಯ ನಿವಾರಣೆಗೆ ಪೋಷಕರಿಗೆ ಹಾಗೂ ಮಕ್ಕಳಿಗೆ ತಿಳುವಳಿಕೆ ನೀಡುವುದು.<br>• ಸತಿಪದ್ಧತಿ, ವರದಕ್ಷಿಣೆ, ಬಾಲ್ಯವಿವಾಹದ ನಿರ್ಮೂಲನೆ ಬಗ್ಗೆ ಜಾಗೃತಿ ಮೂಡಿಸುವುದು.<br>• 7ನೇ ತರಗತಿ ಹೆಣ್ಣುಮಕ್ಕಳಿಗೆ ಹದಿಹರಯದ ಶಿಕ್ಷಣದ ಬಗ್ಗೆ ಅರಿವು ಮೂಡಿಸುವುದು |
| 18–03–2011 | ಎರಡನೇ ಸೆಮಿಸ್ಟರ್ ಪರೀಕ್ಷೆಗೆ ಪೂರ್ವಸಿದ್ಧತೆ | • ತರಗತಿವಾರು, ವಿಷಯವಾರು ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿಕೊಳ್ಳುವುದು.<br>• ಪರೀಕ್ಷೆಗೆ ಆಸನ ವ್ಯವಸ್ಥೆ ಮಾಡಿಕೊಳ್ಳುವುದು. |
| 21.03.2011 ರಿಂದ 26.03.2011 ರವರೆಗೆ | ಎರಡನೇ ಸೆಮಿಸ್ಟರ್ ಪರೀಕ್ಷೆ | ಎರಡನೇ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸುವುದು. |
| 02.04.2011 ರಿಂದ 05.04.2011 | ಮುಂಬರುವ ವರ್ಷಕ್ಕೆ ಶಾಲಾ ಅಭಿವೃದ್ಧಿ ಯೋಜನೆ ಸಿದ್ಧಪಡಿಸಿಕೊಳ್ಳುವುದು | • ಶಾಲೆಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಕಾರ್ಯಯೋಜನೆ ಸಿದ್ಧಪಡಿಸುವುದು<br>• ಶಾಲಾ ವೇಳಾಪಟ್ಟಿ ಸಿದ್ಧಪಡಿಸುವುದು<br>• ಶಾಲಾ ಪಂಚಾಂಗ ಸಿದ್ಧಪಡಿಸುವುದು.<br>• ವಾರ್ಷಿಕ ಕಾರ್ಯಕ್ರಮಗಳ ಪಟ್ಟಿಯನ್ನು ಸಿದ್ಧಪಡಿಸುವುದು.<br>• ಸಮುದಾಯದತ್ತ ಶಾಲಾ ಕಾರ್ಯಕ್ರಮದಂದು ಎಸ್.ಡಿ.ಎಂ.ಸಿ ಸದಸ್ಯರು ಹಾಗೂ ಸಮುದಾಯಕ್ಕೆ ಶಾಲಾ ಅಭಿವೃದ್ಧಿ ಯೋಜನೆ ಪ್ರಸ್ತುತಪಡಿಸುವುದು. |
| 05–04–2011 ರಿಂದ 07–04–2011 | ಉತ್ತರ ಪತ್ರಿಕೆಗಳ ಮೌಲ್ಯಮಾಪನ | • 2ನೇ ಸೆಮಿಸ್ಟರ್ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ<br>• ಅಂಕಗಳ ಕ್ರೋಡೀಕರಣ<br>• ಪ್ರಗತಿ ಪತ್ರಗಳಲ್ಲಿ ಅಂಕಗಳ ನಮೂದಿಸುವಿಕೆ<br>• ಸಮುದಾಯದತ್ತ ಶಾಲಾ ಕಾರ್ಯಕ್ರಮಕ್ಕೆ ಎಸ್.ಡಿ.ಎಂ.ಸಿ ಪೂರ್ವಭಾವಿ ಸಭೆ |
| 07–04–2011 | ವಿಶ್ವ ಆರೋಗ್ಯ ದಿನಾಚರಣೆ | • ಆರೋಗ್ಯ ಶಿಕ್ಷಣ ನೀಡುವುದು, ಮಕ್ಕಳ ವೈಯಕ್ತಿಕ ಆರೋಗ್ಯದ ಪರಿಶೀಲನೆ<br>• ಅನಾರೋಗ್ಯದಿಂದ ಬಳಲುತ್ತಿರುವ ಮಕ್ಕಳ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆ<br>• ಎಲ್ಲಾ ಮಕ್ಕಳ ವೈದ್ಯಕೀಯ ತಪಾಸಣೆ,<br>• ಶಾಲಾ ಮಕ್ಕಳ ಹಲ್ಲುಗಳ ತಪಾಸಣೆ |

| | | |
|---|---|---|
| 07.04.2011<br><br>09.04.2011 | **ಎರಡನೇ ಸಮುದಾಯದತ್ತ ಶಾಲೆ**<br>**ಪ್ರಾಥಮಿಕ ಶಾಲೆಗಳಲ್ಲಿ (ಗುರುವಾರ)**<br><br>**ಪ್ರೌಢಶಾಲೆಗಳಲ್ಲಿ (ಶನಿವಾರ)** | • ಜೂನ್ 2010 ರಿಂದ ಶಾಲೆಯಲ್ಲಿ ಸಿದ್ಧಪಡಿಸಿದ ಶಾಲಾ ಶೈಕ್ಷಣಿಕ ಯೋಜನೆ ಹಾಗೂ ಶಾಲಾಭಿವೃದ್ಧಿ ಯೋಜನೆಯ ಅನ್ವಯ ಆಗಿರುವ ಪರಿಶೀಲನೆ<br>• ಮಕ್ಕಳ ಕಲಿಕೆಯನ್ನು ಪೋಷಕರಿಗೆ ಪ್ರಸ್ತುತ ಪಡಿಸುವುದು.<br>• ಉತ್ತರಪತ್ರಿಕೆಗಳನ್ನು ಪೋಷಕರಿಗೆ ತೋರಿಸಿ ಮಗುವಿನ ಕಲಿಕೆಯ ಪ್ರಗತಿಯ ಬಗ್ಗೆ ವಿವರಣೆ ನೀಡುವುದು.<br>• ಪ್ರಗತಿ ಪತ್ರದನ್ವಯ ಮಕ್ಕಳ ಕಲಿಕೆಯು ಆಗಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.<br>• ಪ್ರತಿಭಾ ಪ್ರದರ್ಶನ |
| 10–04–2011 | **ಬೇಸಿಗೆ ರಜೆ ಆರಂಭ** | • ಫಲಿತಾಂಶ ಪ್ರಕಟಣೆ |
| 14.04.2011 | ಡಾ//ಬಿ.ಆರ್.ಅಂಬೇಡ್ಕರ್ ದಿನಾಚರಣೆ | • ಸಂವಿಧಾನಶಿಲ್ಪಿ ಡಾ//ಬಿ.ಆರ್.ಅಂಬೇಡ್ಕರ್ ರವರ ಬಗ್ಗೆ ತಿಳುವಳಿಕೆ ನೀಡುವುದು |

**ವಿಶೇಷ ಸೂಚನೆ:–**

- **ಬೇಸಿಗೆ ರಜೆ ದಿ: 10–04–2011 ರಿಂದ ಪ್ರಾರಂಭವಾಗುತ್ತದೆ. ಆದಾಗ್ಯೂ ಡಾ//ಅಂಬೇಡ್ಕರ್** ದಿನಾಚರಣೆಯನ್ನು **ನಡೆಸುವುದು.**
- **ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಕಾರ್ಯಕ್ರಮಗಳು/ದಿನಾಚರಣೆಗಳನ್ನು ಅದೇ ದಿನ ನಡೆಸುವುದು**

## ಈ ರಜೆಯಲ್ಲಿ ನಾನೇನು ಮಾಡಬಹುದು

- ಬೇಸಿಗೆ ಶಿಬಿರ :– ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಪ್ರೇರಣೆ ನೀಡುವ ಚಟುವಟಿಕೆಗಳನ್ನು ಬೇಸಿಗೆ ಶಿಬಿರದಲ್ಲಿ ಹಮ್ಮಿಕೊಳ್ಳುವುದು.
- ವಿದ್ಯಾರ್ಥಿಗಳು ದಿನಕ್ಕೊಂದು ಉತ್ತಮ ಕಾರ್ಯ ಮಾಡಲಿ. ನಿರ್ವಹಿಸಿದ ಉತ್ತಮ ಕಾರ್ಯದ ಬಗ್ಗೆ ಲಿಖಿತವಾಗಿ ಅಭಿವ್ಯಕ್ತಿಸಲಿ.
- ಅಜ್ಜ – ಅಜ್ಜಿಯವರಿಂದ ಕೇಳಿದ ಕಥೆಗಳನ್ನು ಅವರ ಭಾಷೆಯಲ್ಲಿ ಬರೆದು ಸಾದರಪಡಿಸಲಿ.
- ಒಂದೇ ಒಂದು ಪ್ರಬಂಧ – ವಿದ್ಯಾರ್ಥಿಗಳಿಗೆ ಪ್ರಿಯವಾದ ಒಂದು ವಿಷಯದ ಬಗ್ಗೆ ವಿವರವಾದ ಒಂದು ಪ್ರಬಂಧ ಸಿದ್ದಪಡಿಸಲಿ.

## ಶಾಲೆಯ ದೈನಂದಿನ ಕಾರ್ಯಸೂಚಿ

| ಕ್ರ | ಮುಖ್ಯಶಿಕ್ಷಕರು | ಸಹಶಿಕ್ಷಕರು | ಮಕ್ಕಳು |
|---|---|---|---|
| 1 | ಮುಖ್ಯಶಿಕ್ಷಕರು ಶಾಲೆ ಪ್ರಾರಂಭಕ್ಕೆ 1 ಘಂಟೆ ಮುಂಚೆ ಶಾಲೆಗೆ ಬರಬೇಕು | ಸಹಶಿಕ್ಷಕರು ಕನಿಷ್ಠ 45 ನಿಮಿಷ ಮುಂಚೆ ಶಾಲೆಗೆ ಹಾಜರಾಗಬೇಕು | ಮಕ್ಕಳು 30 ನಿಮಿಷ ಮುಂಚೆ ಶಾಲೆಗೆ ಬರಬೇಕು |
| 2 | ಆ ದಿನದ ಶಾಲೆಯ ಕಾರ್ಯಕ್ರಮಗಳನ್ನು ಆಯೋಜಿಸುವುದು | ದಿನದ ಕೆಲಸವನ್ನು ಹಂಚಿಕೊಳ್ಳುವುದು. ಸ್ವಚ್ಛತೆ ಕಾರ್ಯದ ಉಸ್ತುವಾರಿ | ಗುಂಪುಗಳಲ್ಲಿ ಅಧ್ಯಯನ ಮಾಡುವುದು. ದಿನಕ್ಕೊಂದು ತಂಡದಂತೆ ಸ್ವಚ್ಛತೆ ಕಾರ್ಯ ನಿರ್ವಹಿಸುವುದು. |
| 3 | ರಜೆ ಪಡೆದ ಶಿಕ್ಷಕರ ಬದಲಿ ಕಾರ್ಯ ವ್ಯವಸ್ಥೆ ಮಾಡುವುದು | ಪಾಠಗಳಿಗೆ ಸಂಬಂಧಿಸಿದ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳುವುದು | ತಂಡದ ನಾಯಕ/ಕಿ ಇವರಿಗೆ ಮಾರ್ಗದರ್ಶನ ಮಾಡುವುದು |
| 4 | ಶಿಕ್ಷಕರಿಂದ ದೈನಂದಿನ ಕೆಲಸಗಳನ್ನು ಕ್ರಮವರಿತು ಹಂಚುವುದು. ಅಕ್ಷರ ದಾಸೋಹದ ಬಿಸಿಯೂಟಕ್ಕೆ ಅಗತ್ಯವಾದ ಸ್ವಚ್ಛತೆ ಮತ್ತು ಮಕ್ಕಳ ಹಾಜರಾತಿಯನ್ನು ಮುಖ್ಯ ಅಡಿಗೆಯವರಿಗೆ ನೀಡುವುದು. | ಅಗತ್ಯ ಪಾಠೋಪಕರಣ ಸಿದ್ಧಪಡಿಸುವುದು | ಗೃಹಪಾಠಗಳನ್ನು ತಂಡದ ನಾಯಕ/ಕಿ ನೋಡಿಕೊಳ್ಳುವುದು |
| 5 | ಶಿಕ್ಷಕರಿಂದ ಗೈರು ಹಾಜರಾಗುತ್ತಿರುವ ಮಕ್ಕಳ ಯಾದಿ ಪಡೆಯುವುದು | ನಿರಂತರ ದೀರ್ಘ ಗೈರುಹಾಜರಿ ಆಗುತ್ತಿರುವ ಮಕ್ಕಳನ್ನು ಶಾಲೆಗೆ ಕರೆತರುವ ಬಗ್ಗೆ ಕ್ರಮ | ಅವಶ್ಯವಿದ್ದಲ್ಲಿ ಮಾರ್ಗದರ್ಶಿ ಶಿಕ್ಷಕರ ಸಹಾಯ ಪಡೆಯವುದು |
| 6 | ಪ್ರಾರ್ಥನೆ:– ಸಾಲಾಗಿ ನಿಲ್ಲಿಸಿ, ಆರೋಗ್ಯ ತಪಾಸಣೆ ಪತ್ರಿಕೆಗಳ ವಾಚನ, ವಿವಿಧ ವಿಶೇಷ/ಚಿಂತನಾ ಕಾರ್ಯಕ್ರಮ ನಾಡಗೀತೆ, ರಾಷ್ಟ್ರಗೀತೆ [ನೆರಳಿನಲ್ಲಿ ಮತ್ತು ಹೊರಗೆ ಈ ಚಟುವಟಿಕೆ ನಡೆಯುವುದು ಅಪೇಕ್ಷಣಿಯ] | ದೈಹಿಕ ಶಿಕ್ಷಕರು ಇದಕ್ಕೆಲ್ಲ ಮುಂದಾಳತ್ವ ವಹಿಸುವುದು. ದೈಹಿಕ ಶಿಕ್ಷಕರಿಲ್ಲದಿದ್ದಲ್ಲಿ ಯಾರಾದರೂ ಒಬ್ಬ ಶಿಕ್ಷಕರಿಗೆ ಈ ಜವಾಬ್ದಾರಿಯನ್ನು ಮುಖ್ಯಶಿಕ್ಷಕರು ವಹಿಸುವುದು ಹಾಗೂ ಎಲ್ಲಾ ಶಿಕ್ಷಕರ ಉಪಸ್ಥಿತಿ ಕಡ್ಡಾಯ. | ಪ್ರಾರ್ಥನೆ ಸಮಯದಲ್ಲಿ ಶಾಲಾ ಆವರಣದಲ್ಲಿ ಹಾಜರಿರುವ ಎಲ್ಲರೂ [ಪೋಷಕರು ಸೇರಿದಂತೆ] ಭಾಗವಹಿಸುವುದು. |
| 7 | ವಾರಕ್ಕೊಂದು ದಿನ ಸಾಮೂಹಿಕ ಕವಾಯತು | ಕವಾಯತು ವೀಕ್ಷಣೆ ಹಾಗೂ ಮಾರ್ಗದರ್ಶನ | ಎಲ್ಲಾ ಮಕ್ಕಳು |
| 8 | ಸಾಮಾನ್ಯ ವಿಷಯಗಳನ್ನು ಮಕ್ಕಳಿಗೆ ತಿಳಿಸುವುದು | ಪರಿವೀಕ್ಷಣೆ ಮತ್ತು ಮಾರ್ಗದರ್ಶನ | ಎಲ್ಲಾ ಮಕ್ಕಳು |
| 9 | ಮುಖ್ಯಗುರುಗಳಿಂದ ಮೇಲ್ವಿಚಾರಣೆ ಹಾಗೂ ಪ್ರಮುಖ ವಿಷಯಗಳ ಬೋಧನೆ | ಮುಖ್ಯಗುರುಗಳು ಕೊಟ್ಟ ಸೂಚನೆಯ ಅನುಪಾಲನೆ | ಕಲಿಕಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು |
| 10 | ಶಾಲೆ ಮುಗಿದ ನಂತರ ಶಾಲಾ ಸ್ವಚ್ಛತೆಗೆ ಸಹಕರಿಸಿ, ಕೈತೋಟವಿದ್ದಲ್ಲಿ ನೀರೆರೆಸುವುದು. ಗುಂಪುಗಳಲ್ಲಿ ಚಟುವಟಿಕೆಯನ್ನು ಮಾಡಿಸುವುದು. ಆಸಕ್ತ ಮಕ್ಕಳು ಕ್ರೀಡೆಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವುದು. | ದೈಹಿಕ/ಚಿತ್ರಕಲಾ ಶಿಕ್ಷಕರ ಸಹಯೋಗದೊಂದಿಗೆ ವ್ಯವಸ್ಥೆ ಮಾಡುವುದು<br><br>ಸಂಬಂಧಿಸಿದ ಶಿಕ್ಷಕರು | ಎಲ್ಲಾ ಮಕ್ಕಳು<br><br>ಸಂಬಂಧಿಸಿದ ಮಕ್ಕಳು |

## ದಾಖಲಾತಿ/ಹಾಜರಾತಿ

2010 ರ ಜನವರಿ 5,6,7, ಮತ್ತು 8 ರಂದು ಸಮಗ್ರ ಮಕ್ಕಳ ಗಣತಿ ಮಾಡಲಾಗಿದೆ. ಗಣತಿ ಆದ ಮಕ್ಕಳ ಮಾಹಿತಿಯನ್ನು ಗ್ರಾಮೀಣ ಶಿಕ್ಷಣ ವಹಿಯಲ್ಲಿ ನಿರ್ವಹಿಸಬೇಕಾಗಿದೆ. ಎಲ್ಲಾ ಮಕ್ಕಳು ಶಾಲೆಗೆ ಜೂನ್–01 ರಂದು ಕಡ್ಡಾಯವಾಗಿ ದಾಖಲಾಗಬೇಕು. ದಾಖಲಾಗದಿರುವ ಮಕ್ಕಳನ್ನು ಎಸ್‌ಡಿಎಂಸಿ ಹಾಗೂ ಸ್ಥಳೀಯ ಗಣ್ಯರ ಸಹಕಾರದಿಂದ ಸಂಬಂಧಿಸಿದ ಮಕ್ಕಳ ಮನೆಗೆ ಭೇಟಿ ನೀಡಿ ಶಾಲೆಗೆ ದಾಖಲಾಗದಿರಲು ಅಥವ ದಾಖಲಾಗಿ ಶಾಲೆ ಬಿಡಲು ನಿರ್ದಿಷ್ಟ ಕಾರಣಗಳನ್ನು ಪತ್ತೆ ಹಚ್ಚಿ ಶಿಕ್ಷಣ ಹಕ್ಕಿನ ಕಾಯ್ದೆ ಬಗ್ಗೆ ಪೋಷಕರಿಗೆ ಮನವರಿಕೆ ಮಾಡಿ ಶಾಲೆಗೆ ಮಗು ದಾಖಲಾಗುವಂತೆ ಪೋಷಕರ ಮನವೊಲಿಸಬೇಕು. ಜೂನ್ 25 ರೊಳಗೆ ಮಗು ಶಾಲೆಗೆ ನಿಯಮಿತವಾಗಿ ಬಾರದಿದ್ದಲ್ಲಿ ಜೂನ್–30ರಂದು ದಾಖಲಾತಿ ಆಂದೋಲನ ಹಮ್ಮಿಕೊಂಡು ಶಾಲೆ ಬಿಟ್ಟ ಮಕ್ಕಳು ಶಾಲೆಗೆ ಪ್ರತಿದಿನ ಹಾಜರಾಗುವಂತೆ ಅನುಪಾಲಿಸಲು ಯಾರಾದರೂ ಸ್ಥಳೀಯ ಗಣ್ಯರಿಗೆ ಅಥವಾ ಎಸ್‌ಡಿಎಂಸಿ ಸದಸ್ಯರಿಗೆ ನೆರೆಹೊರೆ ತಾಯಂದಿರಿಗೆ ಮಾಹಿತಿ ಕೊಡಬೇಕು.

ಯಾವ ಕಾರ್ಯತಂತ್ರದಿಂದಲೂ ಮಗುವನ್ನು ಶಾಲೆಗೆ ತರಲು ಸಾಧ್ಯವಾಗದಿದ್ದಾಗ ಶಾಲಾ ಮುಖ್ಯಸ್ಥರು ಅಂತಹ ಮಕ್ಕಳ ಹೆಸರು, ತಂದೆ ಹೆಸರು, ವಿಳಾಸ, ಶಾಲೆಗೆ ಗೈರುಹಾಜರಾದ ಅವಧಿ [ದಿನಾಂಕ ಸಹಿತ] ಶಾಲೆ ಬಿಡಲು ಗುರುತಿಸಿರುವ ಕಾರಣ ಮಗವನ್ನು ಶಾಲೆಗೆ ಕರೆತರಲು ಮಾಡಿರುವ ಪ್ರಯತ್ನಗಳ ದಿನಾಂಕವಾರು ವರದಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಪ್ರತಿಯನ್ನು ಜುಲೈ–5ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಂತಹ ವರದಿಗಳನ್ನು ಆಧರಿಸಿ ತಾಲ್ಲೂಕಿನಲ್ಲಿ ಶಾಲೆ ಬಿಟ್ಟ ಮಕ್ಕಳ ಸಂಪೂರ್ಣ ವಿವರಗಳನ್ನು ಒಳಗೊಂಡ ವರದಿಯನ್ನು ತಾಲ್ಲೂಕು ಹಾಗೂ ತಾಲ್ಲೂಕ್ ಪಂಚಾಯತ್ ಕಾರ್ಯ ನಿರ್ವಹಣಾ ಅಧಿಕಾರಿಗಳಿಗೆ ಸಲ್ಲಿಸುವುದು. ಶಾಲೆ ಬಿಟ್ಟ ಮಕ್ಕಳನ್ನು COHORT ವಿಧಾನದಲ್ಲಿ ಶಾಲೆಗೆ ಸೇರಿ ಬಿಟ್ಟಿರುವ ಮತ್ತು 2 ಬಾರಿ ದಾಖಲಾಗಿರುವ ಮಕ್ಕಳ ವಿವರಗಳನ್ನು ನಿಖರವಾಗಿ ಗುರುತಿಸಿ ಜುಲೈ 30ರೊಳಗೆ ಉಪನಿರ್ದೇಶಕರು[ಆಡಳಿತ] ಇವರು ನಿರ್ದೇಶಕರು[ಪ್ರಾಥಮಿಕ ಶಿಕ್ಷಣ] ಇವರಿಗೆ ಜಿಲ್ಲೆಯ ಕ್ರೋಡೀಕೃತ ವರದಿ ಸಲ್ಲಿಸುವುದು. ಅಲ್ಲದೇ ಶಾಲೆ ಬಿಟ್ಟಿರುವ ಮಕ್ಕಳನ್ನು ಶಾಲೆಗೆ ಕರೆತರಲು ಮಾಡಿರುವ ಪ್ರಯತ್ನಗಳ ವರದಿಯನ್ನು ನಿರ್ದೇಶಕರು[ಪ್ರಾಥಮಿಕ ಶಿಕ್ಷಣ] ಇವರಿಗೆ ತ್ರೈಮಾಸಿಕ ವರದಿಯನ್ನು ಆಗಸ್ಟ್, ನವೆಂಬರ್, ಫೆಬ್ರವರಿ 15ರೊಳಗೆ ಸಲ್ಲಿಸುವುದು.

ಶಿಕ್ಷಕರ ಪ್ರಯತ್ನಗಳಿಂದ ಮಕ್ಕಳ ಗೈರುಹಾಜರಿ ನಿಯಂತ್ರಣ ಮಾಡಲು ಸಾಧ್ಯವಾಗದಿದ್ದರೆ ಅಂತಹ ಶಾಲೆಗಳಿಗೆ ಶಿಕ್ಷಕರು, ಸಿಆರ್‌ಪಿ ಮತ್ತು ಶಿಕ್ಷಣ ಸಂಯೋಜಕರು ಒಟ್ಟಾಗಿ ಹೋಗಿ ಮಗು ಶಾಲೆಗೆ ಬರುವಂತೆ ಮಾಡಲು ಕ್ರಮ ವಹಿಸುವುದು. ತರುವಾಯ ಇಂತಹ ಪ್ರಕರಣಗಳನ್ನು ಬಿಇಓ ಗಮನಕ್ಕೆ ತರುವುದು. ಈ ಹಂತದಲ್ಲಿ ಬಿಇಓ ಯುಕ್ತ ಯೋಜನೆಯೊಂದನ್ನು ರೂಪಿಸಿ, ಬಿಇಓ ಮತ್ತು ಬಿಆರ್‌ಸಿ ನೇತೃತ್ವಗಳಲ್ಲಿ ಗೈರುಹಾಜರಿ ಸಾಂದ್ರವಿರುವ ಜನವಸತಿಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸುವುದು. ಈ ಕುರಿತು ಸವಿವರವಾದ ತ್ರೈಮಾಸಿಕ ವರದಿಯನ್ನು ಮೇಲೆ ತಿಳಿಸಿರುವಂತೆ ಆಗಸ್ಟ್, ನವೆಂಬರ್, ಫೆಬ್ರವರಿ ತಿಂಗಳುಗಳಲ್ಲಿ ಸಲ್ಲಿಸುವುದು.

## ವಿಶೇಷ ದಾಖಲಾತಿ ಆಂದೋಲನ :

ಪ್ರತಿ ಜೂನ್ ತಿಂಗಳಲ್ಲಿ ದಾಖಲಾತಿ ಆಂದೋಲನವನ್ನು ಮಾಡಲಾಗುತ್ತದೆ. ತದನಂತರವೂ ಬಾರದ ಮಕ್ಕಳಿಗೆ ವಿಶೇಷ ದಾಖಲಾತಿ ಆಂದೋಲನ ಕೈಗೊಳ್ಳಬೇಕಾಗುತ್ತದೆ. ಶಾಲೆಯ ಮುಖ್ಯಶಿಕ್ಷಕರು, ಎಸ್.ಡಿ.ಎಮ್.ಸಿ ಸದಸ್ಯರು ಪ್ರತಿ ಮನೆಗೆ ಭೇಟಿ ನೀಡಿ ಮಕ್ಕಳನ್ನು ಶಾಲಾ ವಾಹಿನಿಗೆ ತರುವುದು. ಬಾ ಬಾಲೆ ಶಾಲೆಗೆ, ಬಾ ಮರಳಿ ಶಾಲೆಗೆ, ಕೂಲಿಯಿಂದ ಶಾಲೆಗೆ ಇತ್ಯಾದಿ ಕಾರ್ಯತಂತ್ರಗಳನ್ನು ಬಳಸಿ ಮಕ್ಕಳನ್ನು ಶಾಲಾ ವಾಹಿನಿಗೆ ಕರೆತರುವುದು. ಇವೆಲ್ಲವುಗಳ ಒಟ್ಟು ಪ್ರಯತ್ನವೇ ವಿಶೇಷ ದಾಖಲಾತಿ ಆಂದೋಲನ. ಜೊತೆಗೆ ಪ್ರತಿ ಸೋಮವಾರ ಶಾಲೆಯ ಅಧ್ಯಾಪಕರು, ಎಸ್.ಡಿ.ಎಂ.ಸಿಯವರು, ಶಿಕ್ಷಣಾಸಕ್ತರು–ಶಾಲೆಗೆ ಬಾರದ ಮಗುವಿನ ಮನೆಗೆ ಶಾಲೇತರ ಅವಧಿಯಲ್ಲಿ ಹೋಗಿ ಮಗುವನ್ನು ಕರೆತರುವ ಪ್ರಯತ್ನ ನಡೆಸಬೇಕು. ಅಲ್ಲದೆ ಕಿತ್ತೂರು ಕರ್ನಾಟಕ ಪ್ರಾಂತ್ಯದಲ್ಲಿ ಪೂರ್ಣ ಹಾಜರಾತಿ ಪಡೆದ ತರಗತಿಯ ಮುಂದೆ ಹಸಿರು ನಿಶಾನೆ ಇಡುವ ಪರಿಪಾಠವಿದೆ. ಇದಕ್ಕೆ ಉತ್ತಮ ಪ್ರತಿಕ್ರಿಯೆ ಈ ಭಾಗದಲ್ಲಿ ದೊರೆತಿದೆ. ಕರ್ನಾಟಕ ಉಳಿದ ಭಾಗದಲ್ಲಿಯೂ ಇಂತಹ ವ್ಯಾಪಕ ಪ್ರಯತ್ನಗಳು ನಡೆಯುವುದು ಯುಕ್ತ. ಮಿಂಚಿನ ಸಂಚಾರ ಕಾರ್ಯಕ್ರಮ ಕೂಡಾ ಪ್ರಚಲಿತವಿದ್ದು ಇದನ್ನು ಮುಂದುವರೆಸುವ್ಯದು.

Unicef ಮತ್ತು ಜನಶಾಲಾ/DPEP ಕಾರ್ಯಕ್ರಮಗಳು ಜರುಗಿದ ಕೆಲವು ಜಿಲ್ಲೆಗಳಲ್ಲಿ ನೆರೆಹ್ರೆರೆ, ತಾಯಂದಿರು ಮಕ್ಕಳನ್ನು ಶಾಲೆಗೆ ಕಳುಹಿಸುವ ಪ್ರಯತ್ನ ಮಾಡುತ್ತಿದ್ದಾರೆ. ಹಾಗೂ ಇವರ ಸಮಾವೇಶವನ್ನು ಕ್ಲಸ್ಟರ್ ಹಂತದಲ್ಲಿ ಸಂಘಟಿಸಿ ಯುಕ್ತ

ಮಾರ್ಗದರ್ಶನ ನೀಡಿಕೆಯ ಪ್ರಯತ್ನಗಳು ನಡೆಯುತ್ತಿವೆ. ಗುಡಿಬಂಡೆ ಬ್ಲಾಕಿನಲ್ಲಿ ಬೆಳದಿಂಗಳ ಭೇಟಿ ಎಂಬ ವಿನೂತನ ಕಾರ್ಯಕ್ರಮ ಶಾಲೆ ತೊರೆಯುವಿಕೆ ತೀವ್ರವಾಗಿರುವ ಸ್ಥಳಗಳಲ್ಲಿ ಕೈಗೊಂಡಿರುತ್ತಾರೆ. ಇಂತಹ ಪ್ರಯತ್ನಗಳು ಎಲ್ಲಾ ಕಡೆ ನಡೆದು ಮಕ್ಕಳು ಶಾಲೆಗೆ ಬರುವಂತೆ ಆಗಬೇಕು. ವಿವಿಧ ಹಂತದ ಅಧಿಕಾರಿಗಳು ಸೂಕ್ತ ಯೋಜನೆ ರೂಪಿಸಿ ಅನುಷ್ಠಾನಗೊಳಿಸಬೇಕು.

## ನಿರಂತರ ಸಹಪಠ್ಯ ಚಟುವಟಿಕೆಗಳು

ವಿದ್ಯಾರ್ಥಿಗಳ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹಿಸಿ ಮಾರ್ಗದರ್ಶಿಸುವುದು ಮಗುವಿನ ಸರ್ವಾಂಗೀಣ ಬೆಳವಣಿಗೆಯ ಹಿನ್ನೆಲೆಯಲ್ಲಿ ಅಗತ್ಯ. ಶಾಲೆಯ ಶೈಕ್ಷಣಿಕ ಪ್ರಕ್ರಿಯೆಗಳನ್ನು ಕೇವಲ ಓದು ಬರಹಕ್ಕೆ ಸೀಮಿತಗೊಳಿಸದೆ ಸಹಪಠ್ಯ ಚಟುವಟಿಕೆಗಳಿಗೂ ಒತ್ತು ನೀಡಿ ಕಲಿಕೆಯನ್ನು ಸಂತಸದಾಯಕ ಮತ್ತು ಆಕರ್ಷಣೀಯವಾಗಿಸಬೇಕಾಗಿದೆ. ಸಹಪಠ್ಯ ಚಟುವಟಿಕೆಗಳನ್ನು ಕೇವಲ ಕೆಲವೇ ತಿಂಗಳಿಗೆ ಅಥವಾ ಸಮಯ / ಅವಧಿಗೆ ಸೀಮಿತಗೊಳಿಸದೆ ಶೈಕ್ಷಣಿಕ ವರ್ಷದಾದ್ಯಂತ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಿದೆ.

**ಶಾಲಾ ಹಂತದ ಚಟುವಟಿಕೆಗಳು:**

ವಿದ್ಯಾರ್ಥಿ ಸ್ವಯಂಸರ್ಕಾರದಡಿ ಅನೇಕ ಕ್ಲಬ್‌ಗಳನ್ನು ಸ್ಥಾಪಿಸಲಾಗುವುದು. ಇವುಗಳ ನೆರವಿನಿಂದ ಪ್ರತಿವಾರ ಸುಮಾರು 80 ನಿಮಿಷಗಳ ಅವಧಿಗೆ ವಿವಿಧ ಸಹಪಠ್ಯ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತದೆ.

**ಕ್ಲಸ್ಟರ್ ಹಂತದ ಚಟುವಟಿಕೆಗಳು:**

- ಪ್ರತಿ ತಿಂಗಳು ಒಂದು ಸಹಪಠ್ಯ ಚಟುವಟಿಕೆಯನ್ನು ಕ್ಲಸ್ಟರ್ ಹಂತದಲ್ಲಿ ಆಯೋಜಿಸಲಾಗುತ್ತದೆ.
- ಕ್ಲಸ್ಟರ್ ಹಂತದ ಚಟುವಟಿಕೆಗೆ, ವಾರ್ಷಿಕ ರೂ.5000/-ಗಳನ್ನು ಪ್ರತಿ ಕ್ಲಸ್ಟರ್‌ಗೆ ಸಹಪಠ್ಯ ಚಟುವಟಿಕೆ ನಿರ್ವಹಿಸಲು ವೆಚ್ಚವಾಗಿ ಬಿಡುಗಡೆಗೊಳಿಸಲಾಗುತ್ತದೆ. ಇದನ್ನು ಬಳಸಿ 10 ಕಾರ್ಯಕ್ರಮಗಳನ್ನು ಕ್ಲಸ್ಟರ್ ಹಂತದಲ್ಲಿನ ವಿವಿಧ ಶಾಲೆಗಳಲ್ಲಿ ನಡೆಸಲು ಸಿಆರ್‌ಪಿ ಯವರು ವ್ಯವಸ್ಥೆಗೊಳಿಸುವುದು.
- ಚಟುವಟಿಕೆಗಳ ಯೋಜನೆ & ಅನುಷ್ಠಾನಕ್ಕೆ ಸಿಆರ್‌ಪಿ ನೇತೃತ್ವ ವಹಿಸುವುದು. ಯೋಜನೆಯನ್ನು ಮುಂಗಡವಾಗಿ ಶಾಲೆಗೆ ನೀಡಿ ಸಿದ್ಧತೆಗೆ ನೆರವಾಗುವುದು.
- ಸಮುದಾಯದ ಸಹಭಾಗಿತ್ವವನ್ನು [ಅತಿಥಿ-ಅತಿಥೇಯ] ಪಡೆದು ಕಾರ್ಯಕ್ರಮ ಯಶಸ್ವಿಗೊಳಿಸುವುದು.
- ಈ ಚಟುವಟಿಕೆಗಳನ್ನು ರಚಿಸಿ ಕಾಲಕಾಲಕ್ಕೆ ವರದಿ ಮಾಡುವುದು.

**ಶಾಲೆಯ ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ ಗುರುತಿಸಿಕೊಳ್ಳಬಹುದಾದ ಮಾನಕಗಳು**

1. ಕಲಿಕಾ ಬೋಧನಾ ಸಾಮಗ್ರಿಗಳನ್ನು ವ್ಯವಸ್ಥಿತವಾಗಿ ಜೋಡಿಸುವುದರ ಮೂಲಕ ಶಾಲೆಯನ್ನು ಸ್ವಚ್ಛ ಹಾಗೂ ಆಕರ್ಷಣೀಯವಾಗಿಸುವುದು.
2. ಶಾಲಾ ತರಗತಿ ಕೋಣೆಯಲ್ಲಿ ಉತ್ತಮ ಆಸನ ವ್ಯವಸ್ಥೆ, ಕಪ್ಪು ಹಲಗೆ, ಕಲಿಕೋಪಕರಣಗಳು ಮತ್ತು ವಿದ್ಯಾರ್ಥಿಗಳ ಚಟುವಟಿಕೆಗಳ ಪ್ರದರ್ಶನಕ್ಕೆ ಬೋರ್ಡ್ ನಿರ್ವಹಿಸುವುದು.
3. ಗಣತಿಯಾದ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲು ಮಾಡಿಕೊಳ್ಳುವುದು.
4. ಶಾಲೆಗೆ ದಾಖಲಾದ ಎಲ್ಲಾ ವಿದ್ಯಾರ್ಥಿಗಳು ಶಾಲೆಗೆ ನಿರಂತರವಾಗಿ ಹಾಜರಾಗುವುದು.
5. ಶಾಲೆಗೆ ದಾಖಲಾದ ಯಾವುದಾದರೂ ಮಗು ಶಾಲೆ ಬಿಟ್ಟಲ್ಲಿ ಆ ಮಗುವನ್ನು ಶಾಲೆಗೆ ಮರಳಿ ಕರೆತರುವುದು.
6. 6 ರಿಂದ 14 ವಯಸ್ಸಿನ ಎಲ್ಲಾ ಮಕ್ಕಳು ಶಾಲೆಯಲ್ಲಿ ನಿರಂತರವಾಗಿ ಹಾಜರಿದ್ದು, ಶಾಲೆ ಬಿಟ್ಟ ಮಕ್ಕಳು ಯಾರೂ ಇಲ್ಲವೆಂದು ಘೋಷಿಸುವುದು.
7. ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ದೂರಗಾಮಿ ಯೋಜನೆ ಹಾಗೂ ಮಕ್ಕಳ ಕಲಿಕೆಯ ಗುಣಮಟ್ಟ ಸುಧಾರಣೆಗಾಗಿ ಶಾಲಾ ಶೈಕ್ಷಣಿಕ ಯೋಜನೆ ರೂಪಿಸುವುದು.
8. ವಿಜ್ಞಾನ, ಗಣಿತ ವಿಷಯಗಳಲ್ಲಿ ಕಲಿಕಾ ಬೋಧನಾ ಸಾಮಗ್ರಿಗಳನ್ನು ಸಿದ್ಧಪಡಿಸುವುದು.
9. ಶಾಲೆಯ ಎಲ್ಲಾ ಮಕ್ಕಳು ಮೂಲ ಕೌಶಲಗಳಾದ ಓದುವುದು, ಬರೆಯುವುದು ಹಾಗೂ ಗಣಿತದ ಮೂಲ ಸಾಮರ್ಥ್ಯಗಳನ್ನು ಪ್ರಭುತ್ವಮಟ್ಟದಲ್ಲಿ ಹೊಂದುವಂತೆ ಮಾಡುವುದು.
10. ಶಾಲೆಯಲ್ಲಿ ಬೋಧನೆ ಮಾರ್ಗದರ್ಶನ ಹಾಗೂ ಮಕ್ಕಳ ಕಲಿಕಾ ಸಮಯ ಹೆಚ್ಚಿಸಿ ಕಲಿಕೆಗೆ ಹೆಚ್ಚು ಅವಕಾಶ ನೀಡುವುದು.
11. ಮಕ್ಕಳಲ್ಲಿನ ಕಲಿಕಾ ನ್ಯೂನ್ಯತೆ ಹೋಗಲಾಡಿಸಲು ವಿದ್ಯಾರ್ಥಿವಾರು ಪರಿಹಾರ ಬೋಧನೆ ಮಾಡಿ ಮಗುವಿನ ಕಲಿಕೆಯ ಪ್ರಗತಿ ದಾಖಲೆ ನಿರ್ವಹಿಸುವುದು.
12. ಶಾಲಾ ಶೈಕ್ಷಣಿಕ ಯೋಜನೆಯನ್ನು ಪೋಷಕರು ಹಾಗೂ ಸಮುದಾಯದೊಂದಿಗೆ ವಿನಿಮಯ ಮಾಡಿಕೊಳ್ಳುವ ಮೂಲಕ ಮಕ್ಕಳ ಶೈಕ್ಷಣಿಕ ಪ್ರಗತಿಯ ಮೇಲುಸ್ತುವಾರಿ ನೋಡಿಕೊಳ್ಳುವಂತೆ ಮಾಡುವುದು.

ಮುಖ್ಯಶಿಕ್ಷಕರು ಈ ಮೇಲಿನ ಮಾನಕಗಳನ್ನು ಸೂಚ್ಯಕಗಳಾಗಿ ಇಟ್ಟುಕೊಂಡು ಅವಶ್ಯಬಿದ್ದಲ್ಲಿ ಇತರೆ ಮಾನಕಗಳನ್ನು ರೂಪಿಸಿಕೊಳ್ಳಬಹುದು. ರೂಪಿಸಿಕೊಂಡ ಮಾನಕಗಳ ಬಗ್ಗೆ ಸಿಆರ್‌ಪಿ, ಬಿಆರ್‌ಸಿಗಳಿಗೆ ಮಾಹಿತಿ ನೀಡಿ ಯೋಜನೆಗಳನ್ನು ರೂಪಿಸಿಕೊಳ್ಳುವುದು.

# ಶಾಲಾ ಶೈಕ್ಷಣಿಕ ೋಜನೆ

ರಾಜ್ಯದಲ್ಲಿ ಗುಣಾತ್ಮಕ ಶಿಕ್ಷಣವನ್ನು ದಗಿಸುವ ಸಲುವಾಗಿ ುೇ ಅನೇಕ ಕಾ ುರ್ಕ್ರಮಗಳನ್ನು ಆ ೋಜಿಸಲಾಗುತ್ತಿದೆ. ಇವುಗಳ ಮುಖ್ಯ ಉದ್ದೇಶ, "ಶಾಲಾ ವ ುಸ್ಸಿನ ಎಲ್ಲಾ ಮಕ್ಕಳು ಕಡ್ಡಾ ುವಾಗಿ ಶಾಲೆಗೆ ದಾಖಲಾಗಬೇಕು, ಶಾಲೆಗೆ ನಿ ುಮಿತವಾಗಿ ಹಾಜರಿರಬೇಕು ಮತ್ತು ತೃಪ್ತಿಕರ ಕಲಿಕೆ ುನ್ನು ಪಡೆ ುಬೇಕು" ಎ ಬುದೇ ಆಗಿದೆ. ಆದರೆ ಬಹಳಷ್ಟು ಕಾ ುರ್ಕ್ರಮಗಳು ಕೇವಲ ಆರ್ಥಿಕ ಮತ್ತು ಭೌತಿಕ ಅ ಶಗಳು ಹಾಗೂ ಅವುಗಳ ಪ್ರಗತಿ ು ಕಡೆಗೇ ಪ್ರಾಮುಖ್ಯತೆ ಕೊಡುವ ಕಾರಣ, ಶೈಕ್ಷಣಿಕ ಪ್ರಗತಿ ು ಕಡೆ ಹೆಚ್ಚು ಗಮನ ಹರಿಸುತ್ತಿರಲಿಲ್ಲ. ಈ ಹಿನ್ನೆಲೆ ುಲ್ಲಿ ಶಾಲಾ ಹ ತದಲ್ಲಿ ಪ್ರತಿ ವಿದ್ಯಾರ್ಥಿ ು ಶೈಕ್ಷಣಿಕ ಅಭಿವೃದ್ಧಿಗಾಗಿ ೋಜನೆ ಸಿದ್ಧಪಡಿಸಿ ಅನುಷ್ಠಾನಗೊಳಿಸುವ ಉದ್ದೇಶದಿ ದ 2008-09ರಿಂದ ಶಾಲಾ ಶೈಕ್ಷಣಿಕ ೋಜನೆ ುನ್ನು ಜಾರಿಗೆ ತರಲಾಗಿದೆ.

ಶಾಲಾ ಶೈಕ್ಷಣಿಕ ೋಜನೆ ುಲ್ಲಿ ಹಲವು ನಮೂನೆಗಳಿವೆ. ಅವುಗಳ ಉದ್ದೇಶ ಈ ಕೆಳಕ ಡ ತಿದೆ.

**ನಮೂನೆ 1 : ಶಾಲೆ ು ಸಾಮಾನ್ಯ ಮಾಹಿತಿ**

ಇದರಲ್ಲಿ ಶಾಲೆ ು ಮಾದರಿ, ಭೌತಿಕ ಸವಲತ್ತು ಹಾಗೂ ಕಲಿಕೋಪಕರಣಗಳ ಮಾಹಿತಿ ಭರ್ತಿ ಮಾಡಬಹುದಾಗಿದ್ದು, ಇದರಿ ದ ಶಾಲೆ ು ಸ್ಥಿತಿ ು ಬಗ್ಗೆ ಪೂರ್ಣ ಮಾಹಿತಿ ದೊರೆ ುತ್ತದೆ.

**ನಮೂನೆ 2 ಎ ಮತ್ತು ಬಿ: ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರ ಮಾಹಿತಿ:**

ಈ ನಮೂನೆ ು ಸಹಾ ುದಿ ದ ಶಾಲೆ ುಲ್ಲಿ ಕಾ ುರ್ ನಿರ್ವಹಿಸುವ ಶಿಕ್ಷಕರು ಮತ್ತು ಅವರ ವಿದ್ಯಾರ್ಹತೆ, ಸೇವೆ ಹಾಗೂ ಪಡೆದ ತರಬೇತಿಗಳ ಮಾಹಿತಿ ದೊರಕುವುದರಿ ದ ಶಿಕ್ಷಕರ ಸ ಪೂರ್ಣ ಮಾಹಿತಿ ಸಿಗುತ್ತದೆ.

**ನಮೂನೆ 3 : ಅತೀ ಅಗತ್ಯ/ಬುನಾದಿ ಸಾಮರ್ಥ್ಯ/ಕಲಿಕಾ ಶಗಳ ಪಟ್ಟಿ:**

ಈ ನಮೂನೆ ುಲ್ಲಿ 1ನೇ ತರಗತಿಯಿ ದ 9ನೇ ತರಗತಿ ು ವರೆಗೆ ಅತೀ ಅಗತ್ಯ/ಬುನಾದಿ ವಿಷ ುವಾರು ಪಟ್ಟಿಮಾಡಿ ಸಾಮರ್ಥ್ಯ/ಕಲಿಕಾ ಶಗಳನ್ನು ದಗಿಸಲಾಗಿದೆ. ಇವುಗಳ ಸಹಾ ುದಿ ದ ಪ್ರತಿ ತರಗತಿ ುಲ್ಲಿ ವಿದ್ಯಾರ್ಥಿ ುು ಕಲಿತಿರಬೇಕಾದ ಕಲಿಕಾ ಶಗಳನ್ನು ಗುರುತಿಸುವುದರೊ ದಿಗೆ ಅವುಗಳು ಪ್ರತಿ ವಿದ್ಯಾರ್ಥಿ ುಲ್ಲಿ ಎಷ್ಟರ ಮಟ್ಟಿಗೆ ಕಲಿಕೆ ುಾಗಿದೆ ಎ ಬುದನ್ನು ಗುರುತಿಸಲು ಸಾಧ್ಯವಾಗುತ್ತದೆ.

**ನಮೂನೆ 4ಎ ಮತ್ತು ಬಿ: ನೈದಾನಿಕ ಪರೀಕ್ಷೆ ಮತ್ತು ಸೇತುಬ ಧ ಕಾ ುರ್ದ ಪ್ರಗತಿ ು ದಾಖಲೆ:**

ಈ ನಮೂನೆ ು ಸಹಾ ುದಿ ದ ಮೊದಲ ಹ ತದ ನೈದಾನಿಕ ಪರೀಕ್ಷೆ ುಲ್ಲಿ ುಾವ ವಿದ್ಯಾರ್ಥಿ ುಾವ ವಿಷ ುದ ುಾವ ಸಾಮರ್ಥ್ಯ/ಕಲಿಕಾ ಶದಲ್ಲಿ ಕಲಿಕೆ ಸಾಧಿಸಿದ್ದಾನೆ ಅಥವಾ ಇಲ್ಲ ಎ ಬ ಮಾಹಿತಿ ುನ್ನು ದಾಖಲಿಸಬಹುದಾಗಿದೆ. ಅಲ್ಲದೆ ನ ತರದ ಸೇತುಬ ಧ ಕಾ ುರ್ದಲ್ಲಿನ ಪ್ರಗತಿ ುನ್ನು ಸಹ ದಾಖಲಿಸಿ ಎರಡರ ನಡುವಿನ ವ್ಯತ್ಯಾಸ ಅಥವಾ ಸಾಧನೆ ುನ್ನು ಗಮನಿಸಬಹುದಾಗಿದೆ. ಅ ತ್ಯದಲ್ಲಿ ುಾವ ವಿದ್ಯಾರ್ಥಿಗೆ ುಾವ

ವಿಷ ುದಲ್ಲಿ ೂಾವ ಸಾಮರ್ಥ್ಯಕ್ಕೆ ಹೆಚ್ಚಿನ ಗಮನಹರಿಸಬೇಕು, ವಿಶೇಷ ತರಗತಿ ನಡೆಸಬೇಕು ಎ ದು ಗುರುತಿಸಬಹುದಾಗಿದೆ.

**ನಮೂನೆ 5ಎ ಮತ್ತು ಬಿ: ಪರಿಹಾರಬೋಧನೆ/ವಿಶೇಷ ತರಗತಿಗೆ ಳಪಡುವ ಮಕ್ಕಳ ವಿವರ ಹಾಗೂ ಕಾ ರ್ಯ ೋಜನೆ:**

ಈ ನಮೂನೆ ುಲ್ಲಿ ಪ್ರತಿ ವಿದ್ಯಾರ್ಥಿ ು ಹೆಸರು, ಕಲಿಕೆ ುಲ್ಲಿ ಹಿ ದುಳಿದಿರುವ ವಿಷ ು ಹಾಗೂ ಕಲಿಕಾ ಶವನ್ನು ಗುರುತಿಸುವುದರೊ ದಿಗೆ ಅದನ್ನು ಕಲಿಸಲು ಬಳಸುವ ಚಟುವಟಿಕೆ ು ಸ ಖ್ಯೆ ುನ್ನು ನಮೂದಿಸಿ ಪ್ರತಿ ವಿದ್ಯಾರ್ಥಿ ು ಸಾಧನೆ ುನ್ನು ನಮೂದಿಸಬಹುದಾಗಿದೆ. ಇದರ ಸಹಾ ುದಿ ದ ಶಿಕ್ಷಕರು ತಮ್ಮ ಕಾ ರ್ಯವನ್ನು ುಶಸ್ವಿ ೂಾಗಿ ರೂಪಿಸಲು ಹಾಗೂ ಪ್ರತಿ ವಿದ್ಯಾರ್ಥಿ ುನ್ನು ಗುರುತಿಸಲು ಸಾಧ್ಯವಾಗುತ್ತದೆ. ಮಾತ್ರವಲ್ಲದೆ ಶಿಕ್ಷಕರು ತಾವು ೋಜಿಸಿರುವ ಕ್ರಮ ಸೂಕ್ತವೆ? ಅಲ್ಲವೆ? ಎ ದು ತಿಳಿ ುಲು ಹಾಗೂ ಬದಲಾವಣೆ ಮಾಡಿಕೊಳ್ಳಲು ಅವಕಾಶ ದಗುತ್ತದೆ.

**ನಮೂನೆ 6: ಸಹಪಠ್ಯ ಚಟುವಟಿಕೆಗಳ ಕ್ರಿ ೂಾ ೋಜನೆ.**

ಕೇವಲ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ುನ್ನು ಮಾತ್ರ ಪರಿಗಣಿಸದೆ, ಅವರ ಸ ಪೂರ್ಣ ವ್ಯಕ್ತಿತ್ವ ನಿರ್ಮಾಣಕ್ಕೆ ಸಹಕಾರಿ ೂಾಗುವ ಸಹಪಠ್ಯ ಚಟುವಟಿಕೆಗಳನ್ನು ಶಾಲೆಗಳಲ್ಲಿ ಕಡ್ಡಾ ುವಾಗಿ ಹಮ್ಮಿಕೊಳ್ಳಬೇಕೆ ಬ ನಿಟ್ಟಿನಲ್ಲಿ ಈ ನಮೂನೆ ುನ್ನು ಸಿದ್ಧಪಡಿಸಲಾಗಿದೆ.

ಈ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆ, ಗು ಪು ಚಟುವಟಿಕೆ, ನಾ ುಕತ್ವ, ಸಹಕಾರ ಮನೋಭಾವನೆ ಬೆಳೆ ುುವುದಲ್ಲದೆ, ದುವ ಹವ್ಯಾಸ ಸಹ ಮೂಡಲು ಸಾಧ್ಯವಾಗುತ್ತದೆ. ಇವುಗಳ ಮೂಲಕ ಪರೋಕ್ಷವಾಗಿ ಮಕ್ಕಳಲ್ಲಿ ಮಾನವೀ ು ಮೌಲ್ಯಗಳನ್ನು ಬೆಳೆಸಬಹುದು.

ಹೀಗೆ ಶಾಲಾ ಶೈಕ್ಷಣಿಕ ೋಜನೆ ು ಸಹಾ ುದಿ ದ ಕೇವಲ ಪ.ಜಾ. ಮತ್ತು ಪ.ಪ .ಗಳ ವಿದ್ಯಾರ್ಥಿಗಳನ್ನು ಮಾತ್ರವಲ್ಲದೆ ಎಲ್ಲಾ ವಿದ್ಯಾರ್ಥಿಗಳ ಕಲಿಕಾ ದೋಷಗಳನ್ನು ಪತ್ತೆ ಹಚ್ಚಿ ಅದನ್ನು ಹೋಗಲಾಡಿಸುವ ಪ್ರ ುತ್ನ ಇಲಾಖೆ, ಮಾಡುತ್ತಿದೆ.

ಕಲಿಕೆಯಲ್ಲಿ ಹಿಂದುಳಿದಿರುವ ಪ್ರತಿ ಮಗುವಿನ ಕಲಿಕೆಯನ್ನು ಬೋಧನಾ ಸಮಯದಿಂದ ಗೃಹಪಾಠದ ಕೆಲಸದವರೆಗೆ ಪ್ರತಿ ಶಿಕ್ಷಕರು ವೈಯಕ್ತಿಕ ಗಮನ ನೀಡಿ ಮಗುವಿಗೆ ಅಂದಂದಿಗೆ ಅದರ ಸಾಮರ್ಥ್ಯಕ್ಕನುಗುಣವಾಗಿ ಗೃಹಪಾಠ ನೀಡಿ, ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನ ನೀಡಿ ದಾಖಲೆ ನಿರ್ವಹಿಸಬೇಕಾಗುತ್ತದೆ. ಈ ಅಂಶವನ್ನು ಶಾಲಾ ಶೈಕ್ಷಣಿಕ ಕ್ರಿಯಾ ಯೋಜನೆಯಲ್ಲಿ ಅಂತರ್ಗತವಾಗಿ ಸೇರಿಸಿಕೊಳ್ಳುವುದು.

**ಮನೆಗೆಲಸ ಮತ್ತು ಅಭ್ಯಾಸ ಪುಸ್ತಕಗಳ ಪರಿಶೀಲನೆ:–**

1. ಗೃಹಪಾಠವೆಂದರೆ ಆಯಾ ವಿಷಯವಾರು ಕಲಿಕೆಯ ದೃಢೀಕರಣ.
2. ಗೃಹಪಾಠ ದೈನಂದಿನ ಉಕ್ತಲೇಖನ, ಶುದ್ಧಬರಹ ಮತ್ತು ದೈನಂದಿನ ಬೋಧನೆಯ ಚಟುವಟಿಕೆಯಿಂದ ಹೊರತಾಗಿರುತ್ತದೆ.
3. 1 ಮತ್ತು 2ನೇ ತರಗತಿ ಮಕ್ಕಳಿಗೆ ಗೃಹಪಾಠ ಇರುವುದಿಲ್ಲ. ಆದರೆ ಅಭ್ಯಾಸ ಪುಸ್ತಕದಲ್ಲಿಯ ಚಟುವಟಿಕೆಗಳನ್ನು ಅಭ್ಯಾಸ ಮಾಡಿಸಿ ಪರಿಶೀಲಿಸಿ, ಮಕ್ಕಳಿಗೆ ತಿದ್ದಿ, ತೀಡಿ [ತಿಳಿ ಹೇಳಿ] ದೃಢೀಕರಿಸುವುದು.
4. 5–7ನೇ ತರಗತಿಗಳಿಗೆ ಬೋಧಿಸುವ ಘಟಕ, ಅಧ್ಯಾಯ ಪಾಠಗಳನ್ನಾಧರಿಸಿ ಕಲಿಕೆಯ ದೃಢೀಕರಣಕ್ಕಾಗಿ ವಿಷಯವಾರು ಗೃಹಪಾಠವನ್ನು ನೀಡುವುದು.
5. ಗೃಹಪಾಠವು ಸ್ಪಷ್ಟವಾಗಿದ್ದು, ನಿರ್ದಿಷ್ಟ ಬೋಧನಾ ಕಲಿಕಾ ಉದ್ದೇಶವನ್ನು ಹೊಂದಿರಬೇಕು.

6. ಕೊಟ್ಟ ಗೃಹಪಾಠಗಳನ್ನು ತಿದ್ದಿ, ಸ್ಪಷ್ಟ ನಿರ್ದೇಶನ ನೀಡಬೇಕು ಹಾಗೂ ಮಕ್ಕಳಿಂದ ಅನುಪಾಲನೆಯನ್ನು ಖಚಿತಪಡಿಸಿಕೊಳ್ಳುವುದು.
7. 3–4ನೇ ತರಗತಿಗಳಿಗೆ ವಿಷಯವಾರು ಶಿಕ್ಷಕರು ಬೋಧಿಸಿದ ವಿಷಯದ ದೃಢೀಕರಣದ ಚಟುವಟಿಕೆಯೇ ಗೃಹಪಾಠ, ಪೂರಕ ಅಂಶಗಳನ್ನು ಇದರಲ್ಲಿ ಅಳವಡಿಸಿಕೊಳ್ಳಬಹುದು.
8. ಮುಖ್ಯಗುರುಗಳು ಆಯಾ ವರ್ಗ/ವಿಷಯ ಶಿಕ್ಷಕ/ಶಿಕ್ಷಕಿಯರ ಬೋಧನೆ ಪರಿಶೀಲಿಸಿದ ನಂತರ ಕಡ್ಡಾಯವಾಗಿ ಶಿಕ್ಷಕರಿಗೆ ಸೂಕ್ತ ಸೂಚನೆಗಳನ್ನು ಲಿಖಿತವಾಗಿ ಗೊತ್ತುಪಡಿಸಿದ ನಮೂನೆಯಲ್ಲಿ ನೀಡುವುದು.
9. ವಿಷಯವಾರು ಗೃಹಪಾಠ ಹಾಗೂ ಮಕ್ಕಳ ಅನುಪಾಲನೆ ಒಂದೇ ನೋಟ್ ಪುಸ್ತಕದಲ್ಲಿ ಇರಬೇಕು. ಇವು ಸಂದರ್ಶನ ಕಾಲದಲ್ಲಿ ಪರಿಶೀಲಿಸಲು ದೊರೆಯಬೇಕು.
10. ಮುಖ್ಯಗುರುಗಳು ಪ್ರತಿಯೊಬ್ಬ ಶಿಕ್ಷಕರ ವಿಷಯವಾರು ಕನಿಷ್ಠ ಎರಡು ಪ್ರತಿಶತ ಗೃಹಪಾಠಗಳನ್ನು ತಿದ್ದಿ ಅವುಗಳ ಮೇಲೆ ಪುನಃ ಲಿಖಿತ ಸಲಹೆ ಸೂಚನೆಗಳನ್ನು ಕೊಡಬೇಕು.

| ಕ್ರ ಸಂ | ತರಗತಿ | ಶಿಕ್ಷಕರು | ಪ್ರತಿಯೊಬ್ಬ ಶಿಕ್ಷಕರು ಪ್ರತಿ ವಾರಕ್ಕೆ ಕೊಡಬೇಕಾದ ವಿಷಯವಾರು ಗೃಹ ಪಾಠಗಳು | ಒಟ್ಟು ಗೃಹ ಪಾಠಗಳ ಅಂದಾಜು | ಶಿಕ್ಷಕರು ಬೋಧಿಸುವ ತರಗತಿಯಲ್ಲಿ ಹಾಜರಿದ್ದ ಒಟ್ಟು ಮಕ್ಕಳು | ಒಟ್ಟು ಗೃಹ ಪಾಠಗಳು | ಮುಖ್ಯ ಗುರುಗಳು ಪರಿಶೀಲಿಸಿದ 2% ಗೃಹ ಪಾಠಗಳು | ಷರಾ |
|---|---|---|---|---|---|---|---|---|
| 1 | 1–5 | 2 | 2 | 6 | | | | |
| 2 | 1–5 | 4 | 3 | 9 | | | | |
| 3 | 5–7 | 4–6 | 4 | 24 | | | | |
| 4 | 1–7 | 7ಕ್ಕಿಂತ ಹೆಚ್ಚು | 6 | 36 | | | | |
| 5 | 8–10 | 8ಕ್ಕಿಂತ ಹೆಚ್ಚು | 6 | 36 | | | | |

ವಿಶೇಷ ಸೂಚನೆ:–

1. ಕಾಲಂ ಸಂಖ್ಯೆ: 5ರ ಪ್ರಕಾರ ಒಂದು ಶಾಲೆಯಲ್ಲಿ ಇಬ್ಬರು ಶಿಕ್ಷಕರಿದ್ದರೆ ಪ್ರತಿ ವಿಷಯವಾರು 2ರಂತೆ ಒಟ್ಟು 6 ಗೃಹ ಪಾಠಗಳು ಅದೇ ತರಗತಿಯಲ್ಲಿ 40 ಮಕ್ಕಳಿದ್ದರೆ ಮಕ್ಕಳ ಗೃಹಪಾಠದ ನೋಟ್ ಪುಸ್ತಕಗಳನ್ನು ಶಾಲಾ ಶಿಕ್ಷಕರು ಪರಿಶೀಲಿಸುತ್ತಾರೆ. ಇದರ 2% ಗೃಹಪಾಠಗಳು ಅಂದರೆ 5 ಮಕ್ಕಳ ಗೃಹ ಪಾಠ ತಿದ್ದಿ ತಿಳಿ ಹೇಳಬೇಕಾಗುವುದು. ಮುಖ್ಯ ಗುರುಗಳು ಇದನ್ನು ಸರಿಯಾಗಿ ವಿಶ್ಲೇಷಿಸಿ ಅರ್ಥಪೂರ್ಣವಾದ ಹಾಗೂ ವಸ್ತುನಿಷ್ಠವಾದ ಸಲಹೆಗಳನ್ನು ಲಿಖಿತ ರೂಪದಲ್ಲಿ ಕೊಡಬೇಕು ಹಾಗೂ ದಾಖಲೀಕರಿಸಬೇಕು.
2. ಈ ಅಂಶ ಪ್ರಾಥಮಿಕ/ಪ್ರೌಢಶಾಲಾ ಮುಖ್ಯಗುರುಗಳಿಗೂ ಅನ್ವಯವಾಗುತ್ತದೆ.

## ಸೇತುಬಂಧ ಕಾರ್ಯಕ್ರಮ, ಪೂರಕ ಬೋಧನೆ, ಪರಿಹಾರ ಬೋಧನೆ

ಹಿಂದಿನ ತರಗತಿಯಿಂದ ಉತ್ತೀರ್ಣಳಾ/ನಾಗಿ ಬಂದ ವಿದ್ಯಾರ್ಥಿಯಲ್ಲಿ ಈಗಿನ ತರಗತಿಯ ಕಲಿಕೆಗೆ ಬೇಕಾದ ಕನಿಷ್ಠ ಸಾಮರ್ಥ್ಯ / ಕಲಿಕಾಂಶಗಳು ಎಷ್ಟರಮಟ್ಟಿಗೆ ಇವೆ ಎಂಬುದನ್ನು ದೃಢಪಡಿಸಿಕೊಳ್ಳುವ ಚಟುವಟಿಕೆಯ ಜೊತೆಗೆ ಈಗ ಕಲಿಯುತ್ತಿರುವ ತರಗತಿಗೆ ಬೇಕಾದ ಸಾಮರ್ಥ್ಯ/ ಕಲಿಕಾಂಶಗಳನ್ನು ಗಳಿಸಲು ವಿದ್ಯಾರ್ಥಿಯನ್ನು ಸಿದ್ಧಗೊಳಿಸುವ ಚಟುವಟಿಕೆಯೇ ಸೇತುಬಂಧ ಕಾರ್ಯಕ್ರಮ. ಈ ಕಾರ್ಯಕ್ರಮವನ್ನು ಜೂನ್ 25ರವರೆಗೆ ನಡೆಸುವುದು.

ಹಿಂದಿನ ತರಗತಿಯಲ್ಲಿ ವಿದ್ಯಾರ್ಥಿಯ ಕಲಿಕೆ ಪ್ರಭುತ್ವಮಟ್ಟದಲ್ಲಿ ಆಗದಿದ್ದರೆ ಪ್ರಸಕ್ತ ತರಗತಿಯಲ್ಲಿ ತೊಡಗಿಸಿಕೊಳ್ಳುವುದು ಕಷ್ಟಕರ. ಉದಾಹರಣೆಗೆ ಅಕ್ಷರ ಜ್ಞಾನವಿಲ್ಲದ ವಿದ್ಯಾರ್ಥಿ ಓದುವ, ಬರೆಯುವ, ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕಷ್ಟವಾಗುತ್ತದೆ. ಗಣಿತದ ಮೂಲಕ್ರಿಯೆಗಳನ್ನು ಪ್ರಭುತ್ವ ಮಟ್ಟದಲ್ಲಿ ಕಲಿಯದಿರುವ ವಿದ್ಯಾರ್ಥಿ ಮುಂದಿನ ಹಂತಗಳನ್ನು ಯಶಸ್ವಿಯಾಗಿ ಕಲಿಯಲಾರಳು/ನು. ಆ ದಿಸೆಯಲ್ಲಿ ಸೇತುಬಂಧ ಕಾರ್ಯಕ್ರಮವು ವಿದ್ಯಾರ್ಥಿಗೆ ತಾನು ಕಲಿಯುತ್ತಿರುವ ತರಗತಿಗೆ ಬೇಕಾದ ಕನಿಷ್ಠ ಸಾಮರ್ಥ್ಯ / ಕಲಿಕಾಂಶಗಳನ್ನು ಗಳಿಸಲು ಸಹಕಾರಿಯಾಗುತ್ತದೆ. ಈ ಸೇತುಬಂಧ ಕಾರ್ಯಕ್ರಮವು ನೈದಾನಿಕ ಪರೀಕ್ಷೆ / ಪೂರ್ವ ಪರೀಕ್ಷೆ, ದೋಷನಿದಾನ, ಪರಿಹಾರ ಬೋಧನೆ ಮತ್ತು ಸಾಫಲ್ಯ ಪರೀಕ್ಷೆ ಎಂಬ ನಾಲ್ಕು ಹಂತಗಳನ್ನು ಒಳಗೊಂಡಿರುತ್ತದೆ.

### ನೈದಾನಿಕ ಪರೀಕ್ಷೆ / ಪೂರ್ವ ಪರೀಕ್ಷೆ

ವಿದ್ಯಾರ್ಥಿಯು ಪ್ರಸಕ್ತ ಸಾಲಿನಲ್ಲಿ ಓದುತ್ತಿರುವ ತರಗತಿಯ ಕಲಿಕೆಗೆ ಅವಶ್ಯವಾಗಿ ಬೇಕಾದ ಸಾಮರ್ಥ್ಯ / ಕಲಿಕಾಂಶಗಳು ವಿದ್ಯಾರ್ಥಿಯಲ್ಲಿ ಎಷ್ಟರಮಟ್ಟಿಗೆ ಸಾಧನೆಯಾಗಿವೆ ಎಂಬುದನ್ನು ಪತ್ತೆಹಚ್ಚುವ ಹಂತವಿದು.

### ನೈದಾನಿಕ ಪರೀಕ್ಷೆಗೆ ಮಾಡಿಕೊಳ್ಳಬೇಕಾದ ತಯಾರಿ:–

- ಪ್ರಸಕ್ತ ತರಗತಿಯ ಕಲಿಕೆಗೆ ಪೂರಕವಾಗಿ ವಿದ್ಯಾರ್ಥಿ ಗಳಿಸಿರಬೇಕಾದ ಕನಿಷ್ಠ ಸಾಮರ್ಥ್ಯ / ಕಲಿಕಾಂಶಗಳ ಪಟ್ಟಿ.
- ಈ ಸಾಮರ್ಥ್ಯಗಳ ಗಳಿಕೆಯನ್ನು ಪರೀಕ್ಷಿಸಲು ಬೇಕಾದ ಒಂದು ಪ್ರಶ್ನೆಪತ್ರಿಕೆಯ ರಚನೆ.
- ಮೌಖಿಕ ಪರೀಕ್ಷೆಗೂ ಅವಕಾಶದ ವ್ಯವಸ್ಥೆ.
- ಇಂತಿಷ್ಟೇ ಪ್ರಶ್ನೆಗಳು ಇರಬೇಕೆಂಬ ನಿರ್ಬಂಧವಿಲ್ಲ. ಆದರೆ ನಿಸ್ಸಂದೇಹವಾಗಿ–ಪರೀಕ್ಷಾ ಪ್ರಶ್ನೆ ಪತ್ರಿಕೆಗಿಂತ ಕನಿಷ್ಠ 02/03 ಪಟ್ಟು ದೊಡ್ಡದಿರುತ್ತದೆ. [ಪ್ರತಿಯೊಂದು ಕಲಿಕಾಂಶದ ಮೇಲೆ ನೈದಾನಿಕ ಪರೀಕ್ಷೆ ನಡೆಸುವುದು ಅಪೇಕ್ಷಣೀಯ]
- ಪ್ರಶ್ನೆಪತ್ರಿಕೆಯು ಅಂಕಗಳ ಆಧಾರದಿಂದ ರಚನೆಯಾಗಿರುವುದಿಲ್ಲ.
- ನೈದಾನಿಕ ಪರೀಕ್ಷೆಯ ಪ್ರಶ್ನೆಪತ್ರಿಕೆಯನ್ನು ರಚಿಸುವಾಗಲೇ ಅದೇ ಮಟ್ಟದ ಬೇರೆ ಪ್ರಶ್ನೆಗಳನ್ನು ಒಳಗೊಂಡ ಇನ್ನೊಂದು ಪ್ರಶ್ನೆಪತ್ರಿಕೆಯನ್ನು ರಚಿಸಿಕೊಳ್ಳಬೇಕು.

### <u>ಉತ್ತರಗಳ ವಿಶ್ಲೇಷಣೆ:–</u>

- ಲಿಖಿತ ಮತ್ತು ಮೌಖಿಕವಾಗಿ ನಡೆಸಿದ ನೈದಾನಿಕ ಪರೀಕ್ಷೆಗಳ ಮೌಲ್ಯಮಾಪನ ಮಾಡಿದ ಬಳಿಕ ಉತ್ತರಗಳ ವಿಶ್ಲೇಷಣೆ ಮಾಡಬೇಕು.
- ವಿಶ್ಲೇಷಣೆಯಲ್ಲಿ ಪ್ರತಿ ವಿದ್ಯಾರ್ಥಿಯ ಸರಿ ಉತ್ತರವೆಷ್ಟು, ತಪ್ಪು ಉತ್ತರವೆಷ್ಟು ಎಂಬುದನ್ನು ದಾಖಲಿಸಬೇಕು.

- ವಿಶ್ಲೇಷಣೆಯಲ್ಲಿ ಸರಿ ಉತ್ತರಗಳಿಗೆ **ಎ** ಎಂದು ತಪ್ಪು ಉತ್ತರಗಳಿಗೆ **ಬಿ** ಎಂದೂ ಪ್ರಶ್ನೆಗಳ ಸಂಖ್ಯೆ ಕೆಳಗೆ ನಮೂದಿಸಬೇಕು.

**<u>ನಮೂನೆ</u>**

**<u>ನೈದಾನಿಕ / ಸಾಫಲ್ಯ ಪರೀಕ್ಷೆ</u>**

| ತರಗತಿ | ಉತ್ತರ ವಿಶ್ಲೇಷಣೆ | ವಿಷಯ | | | | | | | |
|---|---|---|---|---|---|---|---|---|---|
| ಕ್ರ.ಸಂ. | ವಿದ್ಯಾರ್ಥಿಯ ಹೆಸರು | ಪ್ರಶ್ನೆಗಳ ಸಂಖ್ಯೆ | | | | | | ಒಟ್ಟು ಸರಿ | ಒಟ್ಟು ತಪ್ಪು |
| | | 1 | 2 | 3 | – | – | – | ಎ | ಬಿ |
| 1. | | | | | | | | | |
| 2 | | | | | | | | | |
| ಒಟ್ಟು ಸರಿ ಉತ್ತರಗಳು | | | | | | | | | |
| ಒಟ್ಟು ತಪ್ಪು ಉತ್ತರಗಳು | | | | | | | | | |

ಮುಖ್ಯ ಶಿಕ್ಷಕರ ಸಹಿ                                        ವಿಷಯ ಶಿಕ್ಷಕರ ಸಹಿ

**<u>ದೋಷನಿದಾನ</u>**

ಉತ್ತರಗಳು ವಿಶ್ಲೇಷಣೆಯ ಆಧಾರದಿಂದ ದೋಷನಿದಾನ ಮಾಡುವುದಕ್ಕೆ ಸಾಧ್ಯವಿದೆ, ಯಾವ ವಿದ್ಯಾರ್ಥಿಯು ಯಾವ ಸಾಮರ್ಥ್ಯ / ಕಲಿಕಾಂಶಗಳನ್ನು ಗಳಿಸಿದ್ದಾನೆ/ಳೆ/ಗಳಿಸಿಲ್ಲ ಎಂಬ ವಿಶ್ಲೇಷಣೆ ಮಾಡಿದ ಬಳಿಕ ಪ್ರತಿ ವಿದ್ಯಾರ್ಥಿಯ ಕಲಿಕಾ ದೋಷಗಳನ್ನು ಅಥವಾ ಕಲಿಕೆಯಲ್ಲಿರುವ ಕೊರತೆಗಳನ್ನು ಪತ್ತೆಹಚ್ಚುವ ಹಂತವೇ ದೋಷನಿದಾನ.

**<u>ಪರಿಹಾರ ಬೋಧನೆ</u>**

ದೋಷ ನಿದಾನದಲ್ಲಿ ದೊರಕಿದ ಮಾಹಿತಿಗನುಸಾರವಾಗಿ ವಿದ್ಯಾರ್ಥಿಗಳಲ್ಲಿರುವ ಕಲಿಕಾಕೊರತೆಯನ್ನು ನೀಗಿಸುವ ಪ್ರಕ್ರಿಯೆಯೇ ಪರಿಹಾರ ಬೋಧನೆ. ಈ ಪರಿಹಾರ ಬೋಧನೆ ಮರು ಬೋಧನೆಯಾಗಬಾರದು. ಇದುವರೆವಿಗೂ ಬಳಸಿದ ಬೋಧನಾ ತಂತ್ರಗಳು ಮಗುವಿನಲ್ಲಿ ಕಲಿಕೆಯನ್ನು ಉಂಟುಮಾಡಿಲ್ಲ. ಆದ್ದರಿಂದ ಬೋಧನಾ ತಂತ್ರಗಳ/ಟಿಎಲ್ಎಂ ಬಳಕೆಯಲ್ಲಿ ಸುಧಾರಣೆ/ಬದಲಾವಣೆ ಇರುತ್ತದೆ. ಉದಾಹರಣೆಗೆ ಸಂಕಲನ ಮಾಡಲು ಮಗುವಿಗೆ ಬಿಡಿ ಮತ್ತು ದಶಕದ ಪರಿಕಲ್ಪನೆ ಇರಬೇಕು. ದಶಕದ ಪರಿಕಲ್ಪನೆ ಇರದ ಮಗು ಸಂಕಲನ ಕಲಿಯುವುದಾದರೂ ಹೇಗೆ? ಹಾಗಾಗಿ ದಶಕ ಪರಿಕಲ್ಪನೆ ಮೂಡಿಸುವಿಕೆ ಪರಿಹಾರ ಬೋಧನೆಯಲ್ಲಿ ನಡೆಯಬೇಕಾದ ಕಾರ್ಯ ತದನಂತರ ಸಂಕಲನ. ಪರಿಹಾರ ಬೋಧನೆ ವಿದ್ಯಾರ್ಥಿಗಳ ಕಲಿಕಾ ಕೊರತೆಯನ್ನು ನಿವಾರಿಸುವ ಮಟ್ಟಿಗೆ ಸೀಮಿತವಾಗಿರುತ್ತದೆಯೇ ಹೊರತು ಇಡೀ ವಿಷಯವನ್ನು ಮರುಬೋಧನೆ ಮಾಡಬೇಕಾಗಿಲ್ಲ. ಸಾಮರ್ಥ್ಯ/ಕಲಿಕಾಂಶವನ್ನು ಗಳಿಸಿರುವ ವಿದ್ಯಾರ್ಥಿಗಳನ್ನು ಈ ಹಂತದಲ್ಲಿ ಬಳಸಿಕೊಳ್ಳಬಹುದು. ಇದರಿಂದ ತರಗತಿಯ ನಿರ್ವಹಣೆಯೂ ಸುಲಭವಾಗುತ್ತದೆ. ತಮ್ಮ ಸಹಪಾಠಿಗಳನ್ನು ಕಲಿಕಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ವಿದ್ಯಾರ್ಥಿಗಳ ಕಲಿಕೆಯೂ ಇದರಿಂದ ಪ್ರಭುತ್ವ ಪಡೆಯುತ್ತದೆ. ಪರಿಹಾರ ಬೋಧನೆಗೆ ಸಂಬಂಧಿಸಿದ ಯೋಜನೆಯನ್ನು ಹೀಗೆ ತಯಾರಿಸಬಹುದು.

**ಉದಾಹರಣೆ:**

| ಕ್ರ.ಸಂ. | ವಿದ್ಯಾರ್ಥಿಯ ಕಲಿಕಾ ದೋಷ | ರೂಪಿಸಿದ ಚಟುವಟಿಕೆ | ಬಳಸುವ ಸಾಮಗ್ರಿ | ಮೌಲ್ಯಮಾಪನ1 |
|---|---|---|---|---|
| 1 | ಸ್ವರಗಳ ರೂಪ ಸಾದೃಶ್ಯದಲ್ಲಿರುವ ವ್ಯತ್ಯಾಸವನ್ನು ಗುರುತಿಸದಿರುವುದು ಉದಾ. ಆನೆ | ಅರ–ಆಸೆ<br>ಉರಗ–ಊರು<br>ಇಲಿ–ಈಶ<br>ಮುಂತಾದ ಪದಗಳ ಸಹಾಯದಿಂದ ಹ್ರಸ್ವ, ದೀರ್ಘಸ್ವರಗಳ ವ್ಯತ್ಯಾಸ ಗುರುತಿಸಲು ಸಹಕರಿಸುವುದು | ಮಿಂಚುಪಟ್ಟಿ ಚಿತ್ರಪಟ | ಹಸ್ವ ಮತ್ತು ದೀರ್ಘ ಸ್ವರಗಳನ್ನು ಒಳಗೊಂಡ ಪದಗಳನ್ನು ಹೇಳಿಸಿ ಬರೆಸುವುದು. |
| 2 | ವಿಜಾತೀಯ ಸಂಯುಕ್ತಾಕ್ಷರಗಳನ್ನು ಗುರುತಿಸದಿರುವುದು ಉದಾ. ಕಲ್ಮಶ | ಒತ್ತಕ್ಷರದ ಮಿಂಚುಪಟ್ಟಿಗಳನ್ನು ಪೂರ್ಣಾಕ್ಷರಕ್ಕೆ ಸೇರಿಸಿ ಹೇಳಿಸುವುದು. | ಮಿಂಚುಪಟ್ಟಿ | ಒತ್ತಕ್ಷರ ಪದಗಳ ಉಕ್ತಲೇಖನ ಕೊಡುವುದು |

**ಸಾಫಲ್ಯ ಪರೀಕ್ಷೆ**

ವಿದ್ಯಾರ್ಥಿಗಳ ಕಲಿಕಾ ಕೊರತೆಗಳ ನಿವಾರಣೆಗೆ ಮಾಡಿದ ಪರಿಹಾರ ಬೋಧನೆ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬುದನ್ನು ತಿಳಿಯುವ ಹಂತವೇ ಸಾಫಲ್ಯ ಪರೀಕ್ಷೆ. ಇದನ್ನು ಈ ರೀತಿ ಯೋಜಿಸಬಹುದು.

- ನೈದಾನಿಕ ಪರೀಕ್ಷೆಗಾಗಿ ಪ್ರಶ್ನೆಪತ್ರಿಕೆ ತಯಾರಿಸುವಾಗ ರಚಿಸಿಕೊಂಡಿರುವ ಇನ್ನೊಂದು ಪ್ರಶ್ನೆ ಪತ್ರಿಕೆಯನ್ನು ಇಲ್ಲಿ ಬಳಸಿಕೊಳ್ಳಬಹುದು.
- ಹೀಗೆ ಬಳಸಿಕೊಳ್ಳುವಾಗ ನೈದಾನಿಕ ಪರೀಕ್ಷೆಯಲ್ಲಿ ಕಲಿಕಾ ಕೊರತೆಯಿರುವ ಅಂಶಗಳ ಮೇಲೆ ಈ ಪರೀಕ್ಷೆ ನಡೆಸಬೇಕು.
- ಗಳಿಸಿರುವ ಸಾಮರ್ಥ್ಯ / ಕಲಿಕಾಂಶಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೈಬಿಡಬೇಕು.
- ಕಲಿಕಾ ಕೊರತೆಯಿಲ್ಲದ ವಿದ್ಯಾರ್ಥಿಗಳಿಗೆ ಈ ಪರೀಕ್ಷೆ ಮಾಡಬಾರದು.
- ಹೆಚ್ಚುವರಿ ಪ್ರಶ್ನೆಪತ್ರಿಕೆಯನ್ನು ತಯಾರಿಸಿಲ್ಲವೆಂದಾದರೆ ಈಗ ಒಂದು ಪ್ರಶ್ನೆಪತ್ರಿಕೆಯನ್ನು ತಯಾರಿಸಿಕೊಳ್ಳಬೇಕು.
- ಈಗ ತಯಾರಿಸುವ ಪ್ರಶ್ನೆಪತ್ರಿಕೆಯು ಮಾದರಿ ಮತ್ತು ಕ್ಲಿಷ್ಟತೆಯ ಮಟ್ಟದಲ್ಲಿ ಸೇತುಬಂಧದ ಆರಂಭದಲ್ಲಿ ಮಾಡಿರುವ ನೈದಾನಿಕ ಪರೀಕ್ಷೆಯ ಪ್ರಶ್ನೆಪತ್ರಿಕೆಗೆ ಸಮಾನವಾಗಿರಬೇಕು.
- ಇಷ್ಟೆಲ್ಲಾ ಮಾಡಿದ ಮೇಲೆಯೂ ಕೆಲವು ಮಕ್ಕಳು ನಿರೀಕ್ಷಿತ ಮಟ್ಟ ತಲುಪದೇ ಇರುವ ಸಾಧ್ಯತೆ ಇದೆ. ಅಂತಹ ಮಕ್ಕಳನ್ನು ಗುರುತಿಸಿ ದೈನಂದಿನ ಕಲಿಕಾ ಚಟುವಟಿಕೆಗಳಲ್ಲಿ ಅವರಿಗೆ ವಿಶೇಷ ಗಮನ ನೀಡಬೇಕು. ಅದಕ್ಕಾಗಿ ಇಲ್ಲಿ ಕೆಲವು ಸೂಚನೆಗಳನ್ನು ನೀಡಲಾಗಿದೆ.

**ಸಾಫಲ್ಯ ಪರೀಕ್ಷೆ ನಂತರ ಪೂರಕ ಬೋಧನೆ:–**

- ಅಂತಹ ಮಕ್ಕಳಿಗೆ ವಿಶೇಷ ತರಗತಿಗಳ ಏರ್ಪಾಡು ಮಾಡುವುದು.
- ಕಲಿಕೆಯ ದೋಷಗಳ ನಿವಾರಣೆಗೆ ಸಹಾಯಕವಾದ ಮತ್ತು ವಿದ್ಯಾರ್ಥಿಗಳಿಗೆ ಇಷ್ಟವಾದ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸಬಹುದು.
- ಪ್ರಭುತ್ವ ಮಟ್ಟದ ಕಲಿಕೆ ಹೊಂದಿರುವ ವಿದ್ಯಾರ್ಥಿಗಳೊಂದಿಗೆ ಈ ವಿದ್ಯಾರ್ಥಿಗಳು ಕಲಿಕಾ ಚಟುವಟಿಕೆಗಳಲ್ಲಿ ಬೆರೆಯುವಂತೆ ಮಾಡಬಹುದು.

- ಕಲಿಕಾ ಕೊರತೆಯಿರುವ ವಿದ್ಯಾರ್ಥಿಗಳಲ್ಲಿ ಇರಬಹುದಾದ ಕೀಳರಿಮೆಯನ್ನು ಹೋಗಲಾಡಿಸಿ ಅವರಲ್ಲಿ ಆತ್ಮವಿಶ್ವಾಸ ತುಂಬುವುದು ಅವಶ್ಯಕ.
- **ಈ ಕ್ರಮವೇ ಪೂರಕ ಬೋಧನೆಯ** [ಪರಿಹಾರ ಬೋಧನೆ ಎಂಬ ಪದ ಬಳಸಬಾರದು] ಮೂಲಕ ನಿರಂತರವಾಗಿ ಬೋಧನೆಯಲ್ಲಿ ವಿಷಯವಾರು ಕೊರತೆಯನ್ನು ಸಂಯೋಜನೆಗೊಳಿಸಬಹುದು. ಹೆಚ್ಚು ವಿದ್ಯಾರ್ಥಿಗಳು ಇದ್ದಲ್ಲಿ ಪ್ರತ್ಯೇಕ ತರಗತಿಗಳನ್ನು ನಡೆಸಬೇಕಾಗುತ್ತದೆ. ಈ ಮೂಲಕ ಕೊರತೆಯನ್ನು ನೀಗಿಸಬಹುದಾಗಿದೆ.

**ಪೂರಕ ಬೋಧನೆಯ ಸಂಘಟನೆ**

- ಪೂರಕ ಬೋಧನೆಯನ್ನು ದಿನದ 06ನೇ ಅವಧಿಯಲ್ಲಿ ನಿರ್ವಹಿಸಿ, ಇದು ಎಲ್ಲಾ ಮಕ್ಕಳಿಗೆ ಅನ್ವಯಿಸುತ್ತದೆ. ಎಲ್ಲಾ ಮಕ್ಕಳಿಗೆ ಅನ್ವಯವಾಗುವ ಕಾರಣ ಇದು ಪೂರಕ ಬೋಧನೆ.
- ಪ್ರಾಥಮಿಕ ಕೌಶಲಗಳಾದ ಓದು, ಬರಹ, ಸರಳಲೆಕ್ಕ ಬಾರದ ಮಕ್ಕಳನ್ನು ಒಂದೆಡೆ ಕೂರಿಸಿ [ತರಗತಿ 4 ರಿಂದ 7/8] ಅವರಿಗೆ ಪ್ರಾಥಮಿಕ ಕೌಶಲಗಳನ್ನು ಕಲಿಸಿ, ಪ್ರಾಥಮಿಕ ಕೌಶಲಗಳನ್ನು ಕಲಿತಿರುವ ಮಕ್ಕಳಿಗೆ ಸೃಜನಶೀಲ ಚಟುವಟಿಕೆಗಳನ್ನು ನೀಡುವುದು. ಉದಾಹರಣೆಗೆ ಕಥೆ–ಕವನ ಬರೆಯುವುದು, ರಸಪ್ರಶ್ನೆ ಏರ್ಪಡಿಸುವುದು, ಗ್ರಂಥಾಲಯದಲ್ಲಿ ಓದುವುದು, ಯೋಜನೆ ಕಾರ್ಯ ಮಾಡುವುದು, ಅನ್ವಯಿಕ ಚಟುವಟಿಕೆ ಮಾಡಿಸುವುದು. ಕೊಠಡಿಯ ಆವರಣದ ಅಳತೆ ಮಾಡಿಸುವುದು, ಲೇಖನ ಬರೆಸುವುದು, ಧ್ವನಿ ಸುರುಳಿ ಕೇಳಿಸುವುದು, ಅಭಿನಯ ಮಾಡಿಸುವುದು. ಇತ್ಯಾದಿ. ಒಂದೇ ಕೆಲಸವನ್ನು ಎಲ್ಲಾ ಮಕ್ಕಳಿಗೆ ನೀಡಬೇಕೆಂದೇನಿಲ್ಲ. ಅವರವರ ಸಾಮರ್ಥ್ಯಕ್ಕನುಗುಣವಾಗಿ ಕೆಲಸ ನೀಡುವುದು.
- ಪ್ರಾಥಮಿಕ ಕೌಶಲಗಳ ಸಂಬಂಧ ಹೆಚ್ಚಿನ ಮಾಹಿತಿಗೆ 2007–08ರಲ್ಲಿ ಹೊರತರಲಾಗಿರುವ ಪರಿಹಾರ ಬೋಧನೆ ಹೊತ್ತಿಗೆ ನೋಡಿ.
- ಪ್ರಾಥಮಿಕ ಕೌಶಲಗಳನ್ನು ಪೂರಕ ಬೋಧನೆಯಲ್ಲಿ ಕಲಿತ ಮಗು ಸೃಜನಶೀಲ ಚಟುವಟಿಕೆ ಮಾಡಲು ಅವಕಾಶ ಮಾಡಿಕೊಡಿ. ಎಲ್ಲಾ ಮಕ್ಕಳು ಪ್ರಾಥಮಿಕ ಕೌಶಲಗಳನ್ನು ಕಲಿತ ನಂತರ ಪೂರಕ ಬೋಧನೆಯ ಕಾರ್ಯವನ್ನು ನಿಲ್ಲಿಸಬಹುದು.
- ಪ್ರಾಥಮಿಕ ಕೌಶಲಗಳನ್ನು ಎಲ್ಲಾ ಮಕ್ಕಳಿಗೆ ಕಲಿಸುವ ಪಣ ತೊಡುವ ಅಗತ್ಯವಿದೆ.
- ಪ್ರಾಥಮಿಕ ಕೌಶಲಗಳನ್ನು ಬೋಧಿಸಲು ವಾರಕ್ಕೆ 3 ಅವಧಿ ಪ್ರಥಮ ಭಾಷೆ, 02 ಅವಧಿ ಗಣಿತ ಮತ್ತು 01 ಅವಧಿ ಪರಿಸರ ಅಧ್ಯಯನ ಬೋಧಿಸಿ, ಸ್ಥಳೀಯ ಸನ್ನಿವೇಶಕ್ಕೆ ಅನುಗುಣವಾಗಿ ಯಾರು, ಯಾವ ದಿನ ಯಾವ ವಿಷಯದ, ಎಷ್ಟು ಗುಂಪುಗಳಲ್ಲಿ ಪ್ರಾಥಮಿಕ ಕೌಶಲ ಕಲಿಸಬೇಕು. ಯಾರು ಸೃಜನಶೀಲ ಚಟುವಟಿಕೆ ಮಾಡಬೇಕು ನಿರ್ಧರಿಸಿ.
- ಮುಂದಿನ ನಮೂನೆಯಲ್ಲಿ ಮಾಹಿತಿಯನ್ನು ಜಿಲ್ಲೆಗಳು ಕೇಂದ್ರ ಕಛೇರಿಗೆ ಕಳುಹಿಸುವುದು.

| ತರಗತಿ | ಪೂರಕ ಬೋಧನೆಯ ಪ್ರಾಥಮಿಕ ಕೌಶಲಗಳ [3ಆರ್] ಕಲಿಕೆಗೆ ಒಳಪಟ್ಟ ಮಕ್ಕಳು | | | | | | | | | | ಪೂರಕ ಬೋಧನೆಯ ಪ್ರಾಥಮಿಕ ಕೌಶಲಗಳನ್ನು ನಿರೀಕ್ಷಿತ ಮಟ್ಟಕ್ಕೆ ಸಾಧಿಸಿದವರು | | | | | | | | | | ಪೂರಕ ಚಟುವಟಿಕೆಯಲ್ಲಿ ಭಾಗವಹಿಸುವ ಮಕ್ಕಳ ಸಂಖ್ಯೆ | | | | | | | | | | ಪೂರಕ ಬೋಧನೆಯ ಸೃಜನಶೀಲ ಚಟುವಟಿಕೆಗಳಲ್ಲಿ ಭಾಗವಹಿಸುವುದು | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | ಎಸ್ ಸಿ | | ಎಸ್ ಟಿ | | ಅಲ್ಪಸಂಖ್ಯಾತ | | ಇತರೆ | | ಒಟ್ಟು | | ಎಸ್ ಸಿ | | ಎಸ್ ಟಿ | | ಅಲ್ಪಸಂಖ್ಯಾತ | | ಇತರೆ | | ಒಟ್ಟು | | ಎಸ್ ಸಿ | | ಎಸ್ ಟಿ | | ಅಲ್ಪಸಂಖ್ಯಾತ | | ಇತರೆ | | ಒಟ್ಟು | | ಎಸ್ ಸಿ | | ಎಸ್ ಟಿ | | ಅಲ್ಪಸಂಖ್ಯಾತ | | ಇತರೆ | | ಒಟ್ಟು | |
| | B | G | B | G | B | G | B | G | B | G | B | G | B | G | B | G | B | G | B | G | B | G | B | G | B | G | B | G | B | G | B | G | B | G | B | G | B | G | B | G |
| 4 | | | | | | | | | | | | | | | | | | | | | | | | | | | | | | | | | | | | | | | | |
| 5 | | | | | | | | | | | | | | | | | | | | | | | | | | | | | | | | | | | | | | | | |
| 6 | | | | | | | | | | | | | | | | | | | | | | | | | | | | | | | | | | | | | | | | |
| 7 | | | | | | | | | | | | | | | | | | | | | | | | | | | | | | | | | | | | | | | | |
| 8 | | | | | | | | | | | | | | | | | | | | | | | | | | | | | | | | | | | | | | | | |
| ಒಟ್ಟು | | | | | | | | | | | | | | | | | | | | | | | | | | | | | | | | | | | | | | | | |

ಟಿಪ್ಪಣಿ:– ಅನ್ವಯಿಸುವ ಅಂಕಣಗಳ ಮಾಹಿತಿಯನ್ನು ಜಿಲ್ಲೆಗಳು ಜುಲೈ 2010 ಅಕ್ಟೋಬರ್ 2010ರೊಳಗೆ ಮತ್ತು ಜನವರಿ 11ರೊಳಗೆ ಕೇಂದ್ರಕಛೇರಿಗೆ ಕಳುಹಿಸುವುದು.

## ಪರಿಹಾರ ಬೋಧನೆ

ಮೇಲೆ ವಿವರಿಸಲಾದ "ಪೂರಕ ಬೋಧನೆ"ಯ ಕಾರ್ಯವನ್ನು ಮಾತ್ರ ಮಾಡಬೇಕೆಂಬ ತಪ್ಪುಕಲ್ಪನೆ ಕೆಲವರಲ್ಲಿ ಇದೆ. ಪೂರಕ ಬೋಧನೆ ಪ್ರಾಥಮಿಕ ಕೌಶಲಗಳನ್ನು ಕಲಿತ ಮತ್ತು ಕಲಿಯದ ಮಕ್ಕಳಿಗೆ ರೂಢಿಸಿರುವ ಕಾರ್ಯಕ್ರಮ, ಪರಿಹಾರ ಬೋಧನೆ ಪ್ರತಿ ಅಧ್ಯಾಯದ ತರುವಾಯ ಪರೀಕ್ಷೆ/ವೀಕ್ಷಣೆ/ಯೋಜನೆಕಾರ್ಯ ವರದಿ ತಯಾರಿಕೆಯಂತಹ ಕಾರ್ಯಗಳನ್ನು ನಡೆಸಿ ಮಕ್ಕಳ ಕಲಿಕೆಯ ಕೊರತೆಯನ್ನು ಗುರುತಿಸಿ ಪರಿಹಾರಾತ್ಮಕ ಚಟುವಟಿಕೆಯನ್ನು ಕೈಗೊಳ್ಳುವುದು ರೂಢಿಯಲ್ಲಿರುವ ಪರಿಹಾರ ಬೋಧನೆಯ ಪರಿಕಲ್ಪನೆ. ಈ ಕುರಿತು ಸೌರಭ ಪುಸ್ತಕದಲ್ಲಿ ವಿವರವಿದೆ. ಇದು ಅಬಾಧಿತವಾಗಿ ಮುಂದುವರೆಯುತ್ತದೆ.

**ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಮಾಲೋಚನಾ ಶಿಬಿರ:**

ಪ್ರಾಥಮಿಕ ಶಾಲೆಯ 6, 7, ಮತ್ತು 8ನೇ ತರಗತಿಯ ಭಿನ್ನ ಮತ್ತು ರಚನಾತ್ಮಕ ಚಿಂತನೆಯನ್ನು ಹೊಂದಿರುವ ವಿದ್ಯಾರ್ಥಿಗಳನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸುವ ಸಲುವಾಗಿ ಈ ಕಾರ್ಯಕ್ರಮವನ್ನು ಆರ್ಇಎಂಎಸ್ ಅಡಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಕೆಲವು ವಿದ್ಯಾರ್ಥಿಗಳು ಪ್ರಶ್ನಿಸುವ ರೀತಿ, ಇವು ಕೆಲವೊಮ್ಮೆ "ತಲೆ ಹರಟೆ" ಎಂದು ಹಣೆಪಟ್ಟಿ ಹಚ್ಚುವಂತೆ ಮಾಡುತ್ತವೆ. ವಾಸ್ತವಿಕವಾಗಿ ಇಂತಹ ಮಕ್ಕಳು ಪ್ರತಿಭಾವಂತರು–ಸೃಜನಶೀಲರು ಆಗಿರುತ್ತಾರೆ. ಇದನ್ನು ಪೋಷಿಸಿ ಸಮಾಜಮುಖಿಯಾಗುವಂತೆ ವ್ಯವಸ್ಥೆಗೊಳಿಸಬೇಕಾದ ಅಗತ್ಯವಿದೆ.

ಈ ಮಕ್ಕಳ ಚಿಂತನಕ್ರಮವನ್ನು ಪೋಷಿಸಲು ಹೋಬಳಿ, ಬ್ಲಾಕ್, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಕಾರ್ಯಾಗಾರಗಳು ಮತ್ತು ರಸಪ್ರಶ್ನೆ ಕಾರ್ಯಕ್ರಮಗಳನ್ನು [ಟಿ.ವಿ.ಕಾರ್ಯಕ್ರಮ] ಏರ್ಪಡಿಸಲಾಗುತ್ತಿದೆ ಹಾಗೂ ಸೂಕ್ತ ಬಹುಮಾನಗಳನ್ನು ನೀಡಲಾಗುತ್ತದೆ.

ಆದ್ದರಿಂದ ನಿಮ್ಮ ಶಾಲೆಯಲ್ಲಿ ಇಂತಹ ಲಕ್ಷಣಗಳುಳ್ಳ ವಿದ್ಯಾರ್ಥಿಗಳನ್ನು ಪಟ್ಟಿ ಮಾಡಿ ಹೋಬಳಿ ಹಂತದಲ್ಲಿ ನಡೆಯುವ ಸಮಾವೇಶಕ್ಕೆ ಭಾಗವಹಿಸುವಂತೆ ಮಾಡಿ, ಈ ಮಕ್ಕಳು ಮುಂದಿನ ವರ್ತನೆಯಂತಹ ಲಕ್ಷಣಗಳನ್ನು ವ್ಯಕ್ತಪಡಿಸಬಹುದು.

- ತಣಿಯದ ಕುತೂಹಲ – ನಿರಂತರ ಪ್ರಶ್ನಿಸುವಿಕೆ – ಉತ್ತರಕ್ಕೆ ಹುಡುಕಾಟ
- 10 ಹಕ್ಕಿಗಳಿರುವ ಗುಂಪಿಗೆ ಒಂದು ಹಕ್ಕಿ ಕಲ್ಲು ತಗಲಿ ಸತ್ತರೆ ಅಲ್ಲಿ ಉಳಿದ ಹಕ್ಕಿಗಳೆಷ್ಟು? ಇಂತಹ ಪ್ರಶ್ನೆಗಳಿಗೆ ಅವರು ಕೊಡುವ ಉತ್ತರ ಭಿನ್ನ – ಅದು ಯಾಂತ್ರಿಕವಲ್ಲ.
- ಇವುಗಳ ಜೊತೆಗೆ ವಿವಿಧ ಕಲೆಗಳಲ್ಲಿ ಪ್ರತಿಭೆಯುಳ್ಳವರು ಆಗಿರಬಹುದು.
- ಅಸಾಧಾರಣಾ ನೆನಪಿನ ಶಕ್ತಿಯುಳ್ಳವರಾಗಿರಬಹುದು. ಇತ್ಯಾದಿ

## ನಲಿ–ಕಲಿ ಕಲಿಕಾ ಬೋಧನಾ ಕ್ರಮ

ಬಹುವರ್ಗ ಕಲಿಕೆ ಸನ್ನಿವೇಶ, ಬಹುಹಂತ ಕಲಿಕೆಯ ಸುಧಾರಣೆ, ಸ್ವವೇಗವನ್ನು ಮಾನ್ಯ ಮಾಡುವ ಸಂದರ್ಭ, ಕಲಿಕೆ ಭಾರವೆನಿಸದೇ, ಆಹ್ಲಾದಕರವಿರುವ ಸಂದರ್ಭ, ಪರೀಕ್ಷಾ ಭಯ, ಒತ್ತಡಗಳಿಲ್ಲದ ಸನ್ನಿವೇಶ, ಶಿಕ್ಷಕ ಸುಗಮಕಾರನಾಗುವ ಸಂದರ್ಭ ಇವುಗಳು ಇರುವ ಸಂದರ್ಭಗಳು ನಮ್ಮ ಶಾಲೆಗಳಲ್ಲಿ ಕಾಣಸಿಗುವುದಾದರೆ ಅದು ನಲಿ–ಕಲಿ ಕಲಿಕಾ ಬೋಧನಾ ಕ್ರಮವನ್ನು ಅನುಸರಿಸುತ್ತಿರುವ ತರಗತಿಗಳಲ್ಲಿ ಮಾತ್ರ. ರಾಷ್ಟ್ರೀಯ ಪಠ್ಯಕ್ರಮ ತರಗತಿಯ ಪ್ರಕ್ರಿಯೆ ಮೇಲೆ ವಿಶೇಷವಾದ ಕಾಳಜಿಯನ್ನು ವ್ಯಕ್ತಪಡಿಸಿದೆ. ಏಕೆಂದರೆ ತರಗತಿ ಪ್ರಕ್ರಿಯೆ ಸುಧಾರಿಸದ ಹೊರತು ಕಲಿಕೆಯ ಗುಣಮಟ್ಟ ಮತ್ತು ಮಗುವಿನ ಸಮಗ್ರ ಬೆಳವಣಿಗೆ ಮತ್ತು ಅಭಿವೃದ್ಧಿ ಆಗಲಾರದು.

ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆಯಲ್ಲಿ 95–96ರಲ್ಲಿ ಜನ್ಮತಾಳಿ ನಂತರ ಜನಶಾಲಾ ಕಾರ್ಯಕ್ರಮಕ್ಕೊಳಪಟ್ಟಿದ್ದ 10 ತಾಲ್ಲೂಕುಗಳು ಮೈಸೂರು ಜಿಲ್ಲೆಯ ಪಟ್ಟಣ ಪ್ರದೇಶ ಹೊರತುಪಡಿಸಿ ಇತರ ಎಲ್ಲಾ ತಾಲ್ಲೂಕುಗಳು ತರುವಾಯ ಯುನಿಸೆಫ್ ನೆರವಿನಿಂದ ಕೆಲವು ಬ್ಲಾಕ್‌ಗಳು ಹಾಗೂ 2007–08ನೇ ಇಸವಿಯಿಂದ ಕಿರಿಯ ಪ್ರಾಥಮಿಕ ಹಂತದ ತರಗತಿಗಳಲ್ಲಿ ದಾಖಲಾತಿ 30ಕ್ಕಿಂತ ಕಡಿಮೆ ಇರುವ ಶಾಲೆಗಳಲ್ಲಿ [13691] ಈ ಕಾರ್ಯಕ್ರಮ ಅಳವಡಿಸಲ್ಪಟ್ಟಿತ್ತು. 2009–10ರಲ್ಲಿ ರಾಜ್ಯದಾದ್ಯಂತ ಎಲ್ಲಾ ಶಾಲೆಗಳಿಗೆ ತರಗತಿ 1 & 2ಕ್ಕೆ ಈ ಕಾರ್ಯಕ್ರಮ ವಿಸ್ತರಿಸಲ್ಪಟ್ಟಿದೆ. ಪ್ರಾರಂಭಿಕ ಅಡೆತಡೆಗಳನ್ನು ಹೊರತುಪಡಿಸಿದರೆ ಕಾರ್ಯಕ್ರಮ ಭದ್ರನೆಲೆಯನ್ನು ಪಡೆದಿದೆ. ಕಾರ್ಯನಿರತ ಸಂಪನ್ಮೂಲ ಶಿಕ್ಷಕರು ಹಾಗೂ ಡಯಟ್‌ಗಳ ಸಹಕಾರದಲ್ಲಿ ಕಲಿಕೆಯ ಸಾಮಗ್ರಿ ಪರಿಷ್ಕರಣೆಗೆ ಒಳಪಟ್ಟಿದೆ. ಈ ವರ್ಷ ಬಣ್ಣ–ಬಣ್ಣದ ಮುದ್ರಣದೊಂದಿಗೆ ಕಲಿಕಾ ಸಾಮಗ್ರಿಗಳು ಎಲ್ಲಾ ಶಾಲೆಗಳನ್ನು ತಲುಪಲಿವೆ. 3ನೇ ತರಗತಿಗೆ ಈ ಕಾರ್ಯಕ್ರಮವನ್ನು ವಿಸ್ತರಿಸುವ ಕುರಿತು ಪ್ರಾರಂಭಿಕ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ. ಇಂಗ್ಲೀಷ್ ಭಾಷೆಯಲ್ಲಿ 1 ಮತ್ತು 2ನೇ ತರಗತಿಗಳಿಗೆ ನಲಿ–ಕಲಿ ಕಲಿಕಾ ಕಾರ್ಯಕ್ರಮ ಸಾಮಗ್ರಿಗಳನ್ನು ಈ ಬಾರಿ ನೀಡಲಾಗುತ್ತಿದೆ. ಉರ್ದು ಮಾಧ್ಯಮದ 1 ಮತ್ತು 2ನೇ ತರಗತಿಗಳಿಗೆ ಈ ವರ್ಷ ನಲಿ–ಕಲಿ ಕಾರ್ಯಕ್ರಮವನ್ನು ವಿಸ್ತರಿಸುವ ಪ್ರಸ್ತಾಪವಿದೆ. ಈ ಸಂಬಂಧ ಎಲ್ಲಾ ಅಗತ್ಯ ಸಿದ್ಧತೆಗಳು ನಡೆದಿವೆ.

## ಶಾಲೆಗಳಿಗೆ ನೀಡಲಾದ ಕಲಿಕಾ ಸಾಮಗ್ರಿಗಳು

- ಪ್ರತಿ ಶಾಲೆಗೆ ವಿಷಯವಾರು ಕಾರ್ಡುಗಳು, ತಟ್ಟೆಗಳು, ಕಲಿಕಾ ಏಣಿ, ಪ್ರಗತಿ ನೋಟ ಹಾಗೂ ಕನ್ನಡ ವಾಚಕಗಳನ್ನು ನೀಡಲಾಗಿದೆ.
- ಪ್ರತಿ ಮಗುವಿಗೆ ಪ್ರತಿ ವಿಷಯಕ್ಕೆ ತಲಾ ಒಂದರಂತೆ ಅಭ್ಯಾಸ ಪುಸ್ತಕವನ್ನು ವಿತರಿಸಲಾಗಿದೆ.
- 2008–09 ನೇ ಸಾಲಿನವರೆಗೆ ಅನುಷ್ಠಾನಗೊಂಡಿದ್ದ 12500 ಶಾಲೆಗಳಿಗೆ ನಲಿ–ಕಲಿ ಕಿಟ್ ಸರಬರಾಜು ಮಾಡಲಾಗಿದ್ದು ಮುಂದೆ ಎಲ್ಲಾ ಶಾಲೆಗಳಿಗೆ ಇವುಗಳನ್ನು ಸರಬರಾಜು ಮಾಡಲಾಗುವುದು.
- ಕಲಿಕಾ ಚಪ್ಪರ, ಕಲಿಕಾ ಸಾಮಗ್ರಿ ಸಿದ್ಧತೆಗಾಗಿ ಅನುದಾನಗಳಲ್ಲಿ ಮೊದಲ ಪ್ರಾಧಾನ್ಯತೆ ನೀಡಿ ಖರ್ಚು ಮಾಡಲು ಅವಕಾಶ ಮಾಡಿಕೊಡಲಾಗಿದೆ.

✔ **ಸಮಯ/ ವೇಳಾಪಟ್ಟಿ ಹಂಚಿಕೆ :**

- ನಲಿ–ಕಲಿ ವಿಧಾನದಲ್ಲಿ ಬೋಧಿಸುವ ಪ್ರತಿ ವಿಷಯಗಳಿಗೆ ತಲಾ 80 ನಿಮಿಷಗಳನ್ನು ನಿಗದಿಪಡಿಸಲಾಗಿದೆ.
- 80 ನಿಮಿಷಗಳನ್ನು ಈ ಕೆಳಕಂಡಂತೆ ಹಂಚಿಕೆ ಮಾಡಿಕೊಳ್ಳಬಹುದು.

| | | |
|---|---|---|
| ಸಾಮೂಹಿಕ ಚಟುವಟಿಕೆಗಳಿಗೆ | – | 15 ನಿಮಿಷ |
| ಮಕ್ಕಳಿಗೆ ಸೂಚನೆ ನೀಡಲು | – | 15 ನಿಮಿಷ |
| ಬೋಧನಾ ಕಲಿಕಾ ಪ್ರಕ್ರಿಯೆಗೆ | – | 40 ನಿಮಿಷ |
| ಕಲಿಕೆಯ ದೃಢೀಕರಣಕ್ಕೆ | – | 10 ನಿಮಿಷ |

---------------------------------

ಒಟ್ಟು – 80 ನಿಮಿಷ

-----------------------------------

* ಬೆಳಗಿನ 2 ಅವಧಿಗಳನ್ನು ಕನ್ನಡ ಮತ್ತು ಗಣಿತ ಹಾಗೂ ಮಧ್ಯಾಹ್ನದ 2 ಅವಧಿಗಳನ್ನು ಇಂಗ್ಲೀಷ್ ಹಾಗೂ ಪರಿಸರ ಅಧ್ಯಯನ ವಿಷಯಗಳಿಗೆ ಮೀಸಲಿಡುವುದು.

* ಶನಿವಾರ 40 ನಿಮಿಷದ ಒಂದು ಅವಧಿಯನ್ನು ಸಾಮೂಹಿಕ ಕವಾಯತಿಗೂ, ನಂತರದ 80 ನಿಮಿಷಗಳ ಎರಡು ಅವಧಿಗಳನ್ನು ಕನ್ನಡ ಮತ್ತು ಗಣಿತಕ್ಕೂ ಮೀಸಲಿಡುವುದು.

**ಈ ವರ್ಷ ಮಾಡಬೇಕಾದ ಸಿದ್ಧತೆಗಳು:**

- ಕಳೆದ ಸಾಲಿನಲ್ಲಿ ಉಳಿದ ಕೊರತೆಗಳನ್ನು ಸರಿಪಡಿಸಿಕೊಳ್ಳುವುದು.

**ಉದಾಹರಣೆಗೆ:** ಕಲಿಕಾ ಚಪ್ಪರ ಪೂರ್ಣಗೊಳ್ಳದಿದ್ದರೆ ಪೂರ್ಣಗೊಳಿಸುವುದು, ಮಕ್ಕಳ ವಾಲ್ ಸ್ಲೇಟನ್ನು ಬಳಕೆಗೆ ಯೋಗ್ಯವಾಗಿರುವಂತೆ ಸಿದ್ಧಪಡಿಸಿಕೊಳ್ಳುವುದು, ಪಪೆಟ್ ಷೋಗೆ ಸೂಕ್ತ ಸಿದ್ಧತೆ ನಡೆಸುವುದು ಹವಾಮಾನದ ನಕ್ಷೆಯನ್ನು ಕ್ರಮವಾಗಿ ಭರ್ತಿ ಮಾಡಲು ಕ್ರಮ ಇತ್ಯಾದಿ.

- ಕಳೆದ ಸಾಲಿನ ಕಲಿಕಾ ಕೊರತೆಗಳನ್ನು ಮಕ್ಕಳು ಹೊಂದಿದ್ದಲ್ಲಿ ಅವುಗಳನ್ನು ನೀಗಿಸಿ ಈ ವರ್ಷದ ಕಲಿಕೆಗೆ ಮಕ್ಕಳನ್ನು ಸಿದ್ಧಗೊಳಿಸುವುದು.
- ಕಲಿಕಾ ಸಾಮಗ್ರಿಗಳು ಸರಬರಾಜಾಗಿರುವುದನ್ನು ಖಾತ್ರಿ ಪಡಿಸಿಕೊಂಡು ಕೊರತೆ ಇದ್ದಲ್ಲಿ ಅವುಗಳನ್ನು ಸ್ವತಃ ಸಿದ್ಧಪಡಿಸಿಕೊಳ್ಳುವುದು. (ಝೆರಾಕ್ಸ್ ಅಥವಾ ಬರೆಯುವ ಮೂಲಕ)
- ಮಕ್ಕಳ ಸಂಖ್ಯೆ 30 ರಿಂದ 40 ದಾಟಿದಲ್ಲಿ ಎರಡು ಕೊಠಡಿಗಳನ್ನು ನಲಿ-ಕಲಿ ಕೊಠಡಿಗಳಾಗಿ ಸಿದ್ಧ ಪಡಿಸಿಕೊಳ್ಳುವುದು.
- ಪ್ರತಿ ಶಾಲೆಯಲ್ಲಿ ನಿಗದಿಗೊಳಿಸಿದ ಪ್ರಕಾರ ಶಿಕ್ಷಕರಿಗೆ ತರಬೇತಿ ಆಗಿರದಿದ್ದಲ್ಲಿ ತರಬೇತಿಗಾಗಿ ಸಂಬಂಧಪಟ್ಟವರ ಗಮನ ಸೆಳೆಯುವುದು.

**ಗಮನಿಸಬೇಕಾದ ಅಂಶಗಳು:**

- ನಲಿಕಲಿ ತರಗತಿಯ ವಾತಾವರಣ ನಿರ್ಮಾಣದ ಜವಾಬ್ದಾರಿಯು ಶಾಲೆಯ ಮುಖ್ಯೋಪಾಧ್ಯಾಯರದು. ಇದಕ್ಕಾಗಿ ಸಹೋಪಾಧ್ಯಾಯರ ಸಹಕಾರ ಪಡೆಯುವುದು.
- ನಲಿ-ಕಲಿ ತರಬೇತಾದ ಎಲ್ಲಾ ಶಿಕ್ಷಕರು (ಮುಖ್ಯಶಿಕ್ಷಕರೂ ಸೇರಿ) ಕನಿಷ್ಠ ಒಂದಾದರೂ ನಲಿ-ಕಲಿ ವಿಷಯವನ್ನು (ಕನ್ನಡ /ಪರಿಸರ ಅಧ್ಯಯನ/ ಗಣಿತ ) ನಿರ್ವಹಿಸುವುದು.
- ಮಾಹೇವಾರು ಮೆಟ್ಟಿಲ ಹಂಚಿಕೆಯನ್ನು ಸರಾಸರಿ ಕಲಿಕೆಯ ವೇಗದ ಮಗುವನ್ನು ಗಣನೆಗೆ ತೆಗೆದುಕೊಂಡು ಸಿದ್ಧಪಡಿಸಲಾಗಿದೆ. ಎಲ್ಲಾ ಮಕ್ಕಳ ಕಲಿಕೆಯ ವೇಗ ಒಂದೇ ಆಗಿಲ್ಲದಿರುವುದರಿಂದ ಈಗಾಗಲೇ ನೀಡಿರುವ ಮಾಹೆವಾರು ಹಂಚಿಕೆಯ ಪ್ರಕಾರ ಮಕ್ಕಳ ಕಲಿಕೆ ಕೆಲವೊಮ್ಮೆ ಸಾಧಿಸಲು ಸಾಧ್ಯವಾಗದಿರಬಹುದು.
- ವರ್ಷದ ಮಧ್ಯದಲ್ಲಿ ಮಗು ನಲಿ-ಕಲಿ ತರಗತಿಗೆ ಬಂದು ಸೇರಿದಲ್ಲಿ ಮಗು ದಾಖಲಾದ ದಿನಾಂಕದವರೆಗೆ ನಿಗದಿ ಪಡಿಸಿರುವ ಕಲಿಕಾ ಹಂತಗಳನ್ನು ಆಧರಿಸಿ ಒಂದು ನೈದಾನಿಕ ಪರೀಕ್ಷೆ ನಡೆಸುವುದು. ಇದರ ಮೂಲಕ ಮಗುವಿನ ಕಲಿಕೆಯನ್ನು ಗುರುತಿಸಿಕೊಂಡು ಆ ಹಂತದಿಂದ ಕಲಿಕೆಯನ್ನು ನಲಿ-ಕಲಿ ವಿಧಾನದಲ್ಲಿ ಮುಂದುವರೆಸುವುದು.
- ವರ್ಷದ ಮಧ್ಯದಲ್ಲಿ ವರ್ಗಾವಣೆ ಚೀಟಿ ನೀಡಬೇಕಾದಲ್ಲಿ ಇಲಾಖೆಯ ವತಿಯಿಂದ ವಿತರಿಸಲಾಗಿರುವ ಪ್ರಗತಿ ಪತ್ರದಲ್ಲಿ ಸೂಕ್ತವಾದ ಮಾಹಿತಿಯನ್ನು ಭರ್ತಿ ಮಾಡಿ ಕಳುಹಿಸುವುದು.
- ಏಕರೀತಿಯಲ್ಲಿ ಕಲಿಕಾ ಸಾಮಗ್ರಿಗಳನ್ನು ಜೋಡಿಸಲು ನಿರ್ದಿಷ್ಟವಾದ ಯಾವುದೇ ಕ್ರಮ ಇರುವುದಿಲ್ಲ. ಶಾಲೆಯವರೇ ಅವರಿಗೆ ಅನುಕೂಲಕರವಾದ ರೀತಿಯಲ್ಲಿ ಕಲಿಕಾ ಸಾಮಗ್ರಿಗಳನ್ನು ಜೋಡಿಸಿಕೊಳ್ಳಬಹುದು. ಮಕ್ಕಳಿಗೆ ಎಟುಕುವಂತೆ ಸಾಮಗ್ರಿಗಳ ಜೋಡಣೆ ಆಗಿರಬೇಕು.

- ವರ್ಷದ ಕೊನೆಯಲ್ಲಿ ಫಲಿತಾಂಶ ಘೋಷಿಸುವಾಗ ಮಗುವಿನ ಪ್ರಗತಿ ನೋಟದಲ್ಲಿ ವರ್ಷದ ಕೊನೆಯ ಕಲಿಕಾ ದಿನದವರೆಗೆ ಗುರುತಿಸಿರುವ ಮೆಟ್ಟಿಲನ್ನು ಆಧರಿಸಿ ಗ್ರೇಡ್ ನೀಡುವುದು.

**ಗ್ರೇಡ್ ನೀಡಲು ಅನುಸರಿಸಬೇಕಾದ ಸೂತ್ರ:**

ವರ್ಷದ ಕೊನೆಯಲ್ಲಿದ್ದಂತೆ ಮಗುವಿನ ಕಲಿಕಾ ಮಟ್ಟದ ಮೆಟ್ಟಿಲು ಸಂಖ್ಯೆ

-------------------------------------------- X 100 =ಶೇಕಡಾ ಅಂಕ

ಗೊತ್ತು ಪಡಿಸಿರುವ ಒಟ್ಟು ಮೆಟ್ಟಿಲು ಸಂಖ್ಯೆ

* ಈ ಶೇಕಡಾ ಅಂಕವನ್ನು ನಿಯಮಾನುಸಾರ ಗ್ರೇಡ್‌ಗೆ ಪರಿವರ್ತಿಸಿ ಕ್ರೋಢೀಕೃತ ಅಂಕವಹಿಯಲ್ಲಿ ದಾಖಲಿಸಿ ಫಲಿತಾಂಶ ಘೋಷಿಸುವುದು.

**ವಿಶೇಷ ಸೂಚನೆ:**

- ವಿಷಯವಾರು ತರಗತಿ ನಿರ್ವಹಣೆ, ಗುಂಪು ಚಲನೆ, ಚಟುವಟಿಕೆಗಳ ಉದ್ದೇಶ ಹಾಗೂ ನಿರ್ವಹಣೆ ಇತ್ಯಾದಿ ವಿಷಯಗಳ ಬಗ್ಗೆ ಬೆಳ್ಳಿ – ಚುಕ್ಕಿ ಸಾಹಿತ್ಯವನ್ನು ಗಮನಿಸುವುದು.

**ಉತ್ತಮ ಮೀನಾ ಚಟುವಟಿಕೆಯ ಸುಗಮಕಾರರಿಗೆ ಪ್ರೋತ್ಸಾಹ:**

**ಮೀನಾ** ಕಾರ್ಯಕ್ರಮವನ್ನು ಉತ್ತಮವಾಗಿ ನಿರ್ವಹಿಸುವ ಸುಗಮಕಾರರಿಗೆ [ಶಿಕ್ಷಕರಿಗೆ] ಈ ಬಾರಿ ಬಹುಮಾನ ನೀಡಲು ಪ್ರಸ್ತಾಪ ಸಲ್ಲಿಸಲಾಗಿದೆ.

**ವಿಶಿಷ್ಠ ಸೇವೆಗೆ ಬಹುಮಾನ:**

ಸಿಆರ್‌ಪಿಯಿಂದ ಹಿಡಿದು ಡಿಡಿಪಿಐ ಹಂತದ ಅಧಿಕಾರಿಗಳವರೆಗೆ ತಮ್ಮ ಕ್ಷೇತ್ರದಲ್ಲಿ ವಿಶಿಷ್ಠ ಸೇವೆ ಸಲ್ಲಿಸಿದವರನ್ನು ಗುರುತಿಸಿ ಗೌರವಿಸುವ ಕಾರ್ಯಕ್ರಮವನ್ನು ಆರ್‌ಇಎಂಎಸ್ ಚಟುವಟಿಕೆಯಡಿ ಹಮ್ಮಿಕೊಂಡಿದೆ.

**ಶಿಕ್ಷಕರ ಗುಂಪು ವಿನಿಮಯ ಕಾರ್ಯಕ್ರಮ [ವಿದೇಶ ಪ್ರವಾಸ]:**

ಶೈಕ್ಷಣಿಕ ಆವಿಷ್ಕೃತ ವಿಧಾನಗಳನ್ನು, ಕ್ರಿಯಾಸಂಶೋಧನೆಗಳನ್ನು ತಮ್ಮ ಬೋಧನೆ–ಕಲಿಕೆ ಪ್ರಕ್ರಿಯೆಯಲ್ಲಿ ಅಳವಡಿಸಿಕೊಂಡು ಯಶಸ್ವಿಯಾದ ಶಿಕ್ಷಕರಿಂದ ಸ್ವವಿವರಗಳ ಹಾಗೂ ವಿಶೇಷ ಸಾಧನೆಗಳನ್ನೊಳಗೊಂಡ ಪ್ರಸ್ತಾವನೆಗಳನ್ನು ಪಡೆಯಲಾಗುವುದು. ಈ ಶಿಕ್ಷಕರಲ್ಲಿ 08–10 ಮಂದಿ ಶಿಕ್ಷಕರನ್ನು ನಿರ್ದಿಷ್ಟ ವಿಧಾನಗಳಿಂದ ಆಯ್ಕೆ ಮಾಡಿ ವಿದೇಶ ಪ್ರವಾಸಕ್ಕೆ ಕಳುಹಿಸಲಾಗುವುದು. ಅವರಿಗೆ ಅಲ್ಲಿನ ಶಿಕ್ಷಣ ವ್ಯವಸ್ಥೆ, ಕಲಿಕೆ–ಬೋಧನೆ, ಟಿಎಲ್‌ಎಂ, ಮೌಲ್ಯಮಾಪನ, ಪಠ್ಯಕ್ರಮ, ವಿದ್ಯಾರ್ಥಿ–ಶಿಕ್ಷಕರ ಸಂಬಂಧ ಇತ್ಯಾದಿಗಳನ್ನು ಅಧ್ಯಯನ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅಧ್ಯಯನ ಪ್ರವಾಸದಿಂದ ಹಿಂತಿರುಗಿದ ನಂತರ ಉತ್ತಮಾಂಶಗಳನ್ನು ಜಿಲ್ಲಾಹಂತದ ಸಮಾಲೋಚನಾ ಕಾರ್ಯಕ್ರಮಗಳಲ್ಲಿ ಹಂಚಿಕೊಂಡು, ಅನುಷ್ಠಾನಗೊಳಿಸುವರೆಂಬ ಆಶಯವನ್ನು ಇಲಾಖೆ ಹೊಂದಿದೆ.

## ಪೂರಕ ಓದು

ಪಠ್ಯವಿಷಯಕ್ಕೆ ಮಾತ್ರ ಮಕ್ಕಳ ಓದುವಿಕೆ ಸೀಮಿತವಾಗಬಾರದು. ಕಥೆ, ಕವನ, ಪ್ರಪಂಚದ ಅದ್ಭುತಗಳು, ಮಹಾ ಪುರುಷರು, ಇತಿಹಾಸ, ವಿಜ್ಞಾನ, ಸಂಶೋಧನೆ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಮಕ್ಕಳು ವಿಷಯವನ್ನು ಸಂಗ್ರಹಿಸಬೇಕು. ವ್ಯಾಪಕ ಓದು ಇಂತಹ ಸಾಮರ್ಥ್ಯಗಳನ್ನು ಮಗುವಿನಲ್ಲಿ ತರುತ್ತದೆ. ವಿಸ್ತಾರವಾಗಿ ಓದಿಕೊಂಡ ವ್ಯಕ್ತಿಯ ಚಿಂತನೆ, ಆಲೋಚನಾ ಕ್ರಮಗಳಲ್ಲಿ ಸುಧಾರಣೆಯನ್ನು ಕಾಣುತ್ತೇವೆ. ಅಂತಹವರ ವ್ಯಕ್ತಿತ್ವ ಸಾಧಾರಣವಾಗಿ ಉತ್ತಮವೇ ಆಗಿರುತ್ತದೆ. ಇದಕ್ಕಾಗಿ ಎಳವೆಯಲ್ಲಿ ಓದುವ ಹವ್ಯಾಸವನ್ನು ಬೆಳೆಸಬೇಕು.

**ಶಾಲೆಗಳು ಕೈಗೊಳ್ಳಬೇಕಾದ ಕ್ರಮಗಳು:-**

- ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ, ವಿಜ್ಞಾನಕ್ಕೆ ಸಂಬಂಧಿಸಿದ ಪತ್ರಿಕೆಗಳು, ಕಥೆಗಳ ಪುಸ್ತಕಗಳು, ಚಿತ್ರಕಥೆಗಳು ಮುಂತಾದ ಸಾಮಗ್ರಿಯನ್ನು ಶಾಲೆಗೆ ನಿಯತವಾಗಿ ತರಿಸುವುದು ಹಾಗೂ ಮಕ್ಕಳು ಒಂದೆಡೆ ಕುಳಿತು ಓದಲು ಅವಕಾಶ ಮಾಡಿಕೊಡುವುದು. ವರ್ಷಕ್ಕೆ ಸುಮಾರು ರೂ.1000/- ದಿಂದ ರೂ.2000/- ರೂಗಳವರೆಗೆ ಶಾಲೆ ಅನುದಾನ ಭರಿಸುವುದು ಅಪೇಕ್ಷಣೀಯ.
- ಗ್ರಂಥಭಂಡಾರದ ಪುಸ್ತಕಗಳನ್ನು ಓರಣವಾಗಿ ಜೋಡಿಸಿ ಮಕ್ಕಳಿಗೆ ಎಟುಕುವಂತೆ ಇಡುವುದು.
- ವಿದ್ಯಾರ್ಥಿಗಳು ತಾವು ಓದಿದ ಕಥೆಗಳ ಸಾರಾಂಶವನ್ನು ಕೈ ಬರಹ ಹೊತ್ತಿಗೆ ರೂಪದಲ್ಲಿ ಪ್ರಕಟಿಸುವುದು.
- ಗೋಡೆಪತ್ರಿಕೆಗಳನ್ನು ಮಕ್ಕಳಿಗೆ ಅನುಕೂಲವಾಗುವಂತೆ ನೇತುಹಾಕಿ ಓದಲು ಅವಕಾಶ ಮಾಡಿಕೊಡುವುದು ಹಾಗೂ ಅಲ್ಲಿನ ವಿಷಯಗಳ ಕುರಿತು ಚರ್ಚೆ ಮಾಡಲು ಅವಕಾಶ ಮಾಡಿಕೊಡುವುದು.
- "ಓದುವೆ ನಾನು" ಕಾರ್ಡುಗಳನ್ನು ವ್ಯವಸ್ಥಿತವಾಗಿ ಜೋಡಿಸಿ ಬೇರೆ ಬೇರೆ ಸಂದರ್ಭಗಳಿಗೆ ಉಪಯೋಗಿಸುವಂತೆ ವ್ಯವಸ್ಥೆಗೊಳಿಸುವುದು.
    - o ಪರಿಹಾರ ಬೋಧನೆಯ ಸಂದರ್ಭಕ್ಕೆ
    - o ನಲಿ-ಕಲಿ ಬೋಧನೆಯಲ್ಲಿ ಪೂರಕ ಸಾಮಗ್ರಿಯಾಗಿ
    - o ಓದುವ ಸಾಮಗ್ರಿಯಾಗಿ
    - o ಶಿಕ್ಷಕರ ಅನುಪಸ್ಥಿತಿಯಲ್ಲಿ ಸ್ವಕಲಿಕೆಯ ಸಾಮಗ್ರಿಯಾಗಿ.
- **ತರಗತಿಗೊಂದು ಫ್ಲಾನಲ್ ಬೋರ್ಡ್:-**

ಪ್ರತಿ ತರಗತಿ ಕೋಣೆಯಲ್ಲಿ 4 X 4 1/2 ಅಡಿಯ ಅಥವಾ ಆಯಾ ತರಗತಿಗೆ ಅನುಕೂಲವೆನಿಸುವ ಅಳತೆಯ ಫ್ಲಾನಲ್ ಬೋರ್ಡ್ ಅನ್ನು ಅಳವಡಿಸಿ - ಮಕ್ಕಳು ಬರೆಯುವ ಕಥೆ-ಕವನ ಲೇಖನ ಸಂಗ್ರಹಿಸುವ ಚಿತ್ರ-ಲೇಖನಗಳನ್ನು ಇಲ್ಲಿ ಪ್ರಕಟಿಸಿ ಮಕ್ಕಳು ಓದುವಂತೆ ವ್ಯವಸ್ಥೆ ಮಾಡುವುದು. ಉತ್ತಮವಾದ ಪ್ರದರ್ಶಿಕೆಗಳನ್ನು ಒಂದೆಡೆ ಸಂಗ್ರಹಿಸಿ ತರಗತಿಗೊಂದು ಹಸ್ತಪ್ರತಿಯನ್ನು ಹೊರತರುವುದು. ಫ್ಲಾನಲ್ ಬೋರ್ಡ್ ತಯಾರಿಕೆಗೆ ಥರ್ಮಾಕೋಲ್ ಬಳಸಿ ಕಡಿಮೆ ಖರ್ಚಿನಲ್ಲಿ ವ್ಯವಸ್ಥೆಗೊಳಿಸಬಹುದು.

- ಈ ಚಟುವಟಿಕೆಗಳು ವ್ಯವಸ್ಥಿತವಾಗಿ ನಡೆಯುವಂತೆ ಮಾಡಲು ಅಧ್ಯಾಪಕರು ಶಾಲೆಯ ಅವಧಿಯ ಮುನ್ನ ಮತ್ತು ನಂತರದ ಅವಧಿಯಲ್ಲಿ ಮತ್ತು ಬಿಡುವಿನ ವೇಳೆಯಲ್ಲಿ ಗ್ರಂಥಭಂಡಾರವನ್ನು ತೆರೆದಿಡುವ ಕೆಲಸವನ್ನು ಅನೂಚಾನವಾಗಿ ಮಾಡುವುದು.

**ಓದುವೆ ನಾನು**

ಓದುವೆ ನಾನು ಕಾರ್ಯಕ್ರಮಕ್ಕಾಗಿ 60 ಕಾರ್ಡುಗಳನ್ನು ಸರ್ವ ಶಿಕ್ಷಣ ಅಭಿಯಾನ ಅಕ್ಷರ ಪ್ರತಿಷ್ಠಾನದ ಸಹಯೋಗದೊಂದಿಗೆ ಹೊರತಂದಿದೆ. 2008-09ರಲ್ಲಿ ರಾಜ್ಯದ 11 ಹಿಂದುಳಿದ ಜಿಲ್ಲೆಗಳ ಶಾಲೆಗಳಿಗೆ ಕಾರ್ಡುಗಳನ್ನು ನೀಡಿದೆ. ಆ ವರ್ಷ ಮಕ್ಕಳಿಗೆ ಈ ಕಾರ್ಡುಗಳನ್ನು ನೀಡಲಾಗಿತ್ತು ಹಾಗೂ ಓದುವೆ ನಾನು ಕಾರ್ಯಕ್ರಮವನ್ನು ಓದಲು ಬಾರದ ಮಕ್ಕಳಿಗೆ ಪ್ರತ್ಯೇಕವಾಗಿ ಹಮ್ಮಿಕೊಳ್ಳಲಾಗಿತ್ತು.

ಆದರೆ 2009-10ನೇ ಸಾಲಿನಲ್ಲಿ ಎಲ್ಲಾ ಶಾಲೆಗಳಿಗೆ 07 ಮತ್ತು 15 ಸೆಟ್‌ಗಳಂತೆ ಅನುಕ್ರಮವಾಗಿ ಎಲ್‌ಪಿಎಸ್ ಮತ್ತು ಹೆಚ್‌ಪಿಎಸ್‌ಗಳಿಗೆ ನೀಡಿದೆ. ಇವು ಶಾಲೆಯಲ್ಲಿಯೇ ಇದ್ದು, ಮೇಲೆ ತಿಳಿಸಿರುವಂತೆ ಬೇರೆ ಬೇರೆ ಸಂದರ್ಭಗಳಿಗೆ ಈ ಕಾರ್ಡುಗಳನ್ನು ಬಳಸಿಕೊಳ್ಳುವಂತೆ ತಿಳಿಸಲಾಗಿದೆ.

## ಮುಖ್ಯಶಿಕ್ಷಕರ ಶೈಕ್ಷಣಿಕ ಕರ್ತವ್ಯಗಳು

ಶೈಕ್ಷಣಿಕ ವ್ಯವಸ್ಥೆಯ, ಮೊದಲನೆಯ ಉಸ್ತುವಾರಿದಾರ ಶಾಲೆಯ/ಸಂಸ್ಥೆಯ ಮುಖ್ಯಸ್ಥ ಗುಣಾತ್ಮಕ ಶಿಕ್ಷಣದ ಬಹುಪಾಲು ಆಯಾಮಗಳು, ಆಶಯಗಳು ಈಡೇರುವುದು, ಆಯಾ ಶಾಲೆಯ/ಸಂಸ್ಥೆಯ ಮುಖ್ಯಸ್ಥರ ಕಾಳಜಿ, ಬದ್ಧತೆ ಮತ್ತು ಕಾರ್ಯಶೈಲಿಯಿಂದ. ಬೋಧನಾ ಕಲಿಕಾ ಚಟುವಟಿಕೆಯ ಸಮರ್ಥತೆ ಮುಖ್ಯಶಿಕ್ಷಕರ ಉಪಸ್ಥಿತಿ, ಅವರ ಕಾರ್ಯಯೋಜನೆ, ಪೂರ್ವಸಿದ್ಧತೆ, ಕಲಿಸುವ ಪದ್ಧತಿ, ಮೌಲ್ಯಮಾಪನದ ಕಾರ್ಯತಂತ್ರಗಳ ಬಳಕೆ, ಎಲ್ಲಾ ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸುವ, ಕಲಿಕಾ ವಾತಾವರಣ ಕಲ್ಪಿಸುವ ಸಾಮರ್ಥ್ಯ, ಪಠ್ಯವಿಷಯ ಜ್ಞಾನ, ವ್ಯಕ್ತಿತ್ವ, ಇತ್ಯಾದಿ ಅಂಶಗಳನ್ನು ಒಳಗೊಂಡಿರುತ್ತದೆ. ಇವುಗಳನ್ನು ಮುಖ್ಯಶಿಕ್ಷಕರು [ಇತರ ಶಿಕ್ಷಕರು] ಸಮರ್ಪಕವಾಗಿ ನಿರ್ವಹಿಸಿದರೆ ನಿರೀಕ್ಷಿತ ಗುಣಮಟ್ಟವನ್ನು ಸಾಧಿಸಲು ಸಾಧ್ಯವಾಗುತ್ತದೆ.

ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಥಮ ಮೇಲ್ವಿಚಾರಕ ಮತ್ತು ಪ್ರತಿದಿನ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಅತಿ ಹತ್ತಿರದಿಂದ ಗಮನಿಸಿ ಮಾರ್ಗದರ್ಶನ ನೀಡಬಹುದಾದ ತತ್‌ಕ್ಷಣದ ಅಧಿಕಾರಿ ಮುಖ್ಯಶಿಕ್ಷಕರಾಗಿರುತ್ತಾರೆ. ಇವರು ಶಾಲಾ ಚಟುವಟಿಕೆಯ ಮೂಲ ಸೆಲೆ. "ಮುಖ್ಯಶಿಕ್ಷಕರಿದ್ದಂತೆ ಶಾಲೆ" ಎಂಬ ಮಾತು ಅತಿಶಯೋಕ್ತಿಯಲ್ಲ. ಮುಖ್ಯಶಿಕ್ಷಕರು ಶಾಲಾ ಆಡಳಿತದಲ್ಲಿ ಮತ್ತು ಶೈಕ್ಷಣಿಕ ಮೇಲ್ವಿಚಾರಣೆಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಾ ಶಿಕ್ಷಕರಾಗಿ, ಸಲಹೆಗಾರರಾಗಿ, ಮಾರ್ಗದರ್ಶಕರಾಗಿ, ಸಂಯೋಜಕರಾಗಿ, ಸ್ನೇಹಿತರಾಗಿ ಕಾರ್ಯನಿರ್ವಹಿಸಿ ಶಿಕ್ಷಣದ ಗುರಿ ಮುಟ್ಟುವುದು ಅಪೇಕ್ಷಣೀಯ.

"ಶಾಲೆಗಳಿಗೆ ಶೈಕ್ಷಣಿಕ ನಾಯಕತ್ವ ವಹಿಸುವಲ್ಲಿ ಮುಖ್ಯಶಿಕ್ಷಕರ ಪಾತ್ರ ಇನ್ನೂ ಮನನಗೊಂಡಿಲ್ಲ. ಶಾಲೆಯ ಮತ್ತು ಶಿಕ್ಷಕರ ಶೈಕ್ಷಣಿಕ ಅಗತ್ಯಗಳನ್ನು ಅರಿತು ಮೇಲ್ಮಟ್ಟದ ಸಂಪನ್ಮೂಲ ಸಿಬ್ಬಂದಿಯಿಂದ ನಿರ್ದಿಷ್ಟ ಶೈಕ್ಷಣಿಕ ನೆರವನ್ನು ಪಡೆಯುವ ಸಾಮರ್ಥ್ಯ ಹೊಂದಬೇಕಿದೆ. ಮೇಲ್ವಿಚಾರಣೆ ಮತ್ತು ಪ್ರಗತಿ ಪ್ರಕ್ರಿಯೆಯಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುವ ಅವಶ್ಯಕತೆ ಇದೆ. ಈ ದಿಸೆಯಲ್ಲಿ ಮುಖ್ಯಶಿಕ್ಷಕರ ಸಾಮರ್ಥ್ಯ ವರ್ಧನೆಗೆ ಹೆಚ್ಚಿನ ಗಮನ ಹರಿಸಬೇಕಿದೆ". (ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು – 2005)

**ಮುಖ್ಯಶಿಕ್ಷಕರ ಕರ್ತವ್ಯಗಳು:–**

ಮುಖ್ಯಶಿಕ್ಷಕರು ಹಲವು ಆಡಳಿತಾತ್ಮಕ ಕಾರ್ಯಗಳನ್ನು ಮತ್ತು ಶಾಲಾ ಕ್ರಿಯಾಯೋಜನೆಯನ್ವಯ ಹಲವು ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ. ಮುಖ್ಯಶಿಕ್ಷಕರು ಪ್ರಥಮವಾಗಿ ಶಿಕ್ಷಕರಾಗಿದ್ದು ಮೂಲತಃ ತರಗತಿ ಬೋಧನೆ ಮಾಡಬೇಕು. ಆದರೆ ಇಲ್ಲಿ ಶೈಕ್ಷಣಿಕ ಮೇಲ್ವಿಚಾರಣೆಯನ್ನು ಮಾತ್ರ ಪ್ರಧಾನ ಅಂಶವಾಗಿ ಪ್ರಸ್ತಾಪಿಸಲಾಗಿದೆ

- ತರಗತಿ ಬೋಧನೆ ಮಾಡುವುದು.
- ಯೋಜನೆಗಳ ತಯಾರಿ/ಅವಲೋಕನ.
- ಶಿಕ್ಷಕರ ಪೂರ್ವಸಿದ್ಧತೆಯ ಅವಲೋಕನ
- ಶಿಕ್ಷಕರ ಬೋಧನೆಯ ಅವಲೋಕನ ಮತ್ತು ಹಿಮ್ಮಾಹಿತಿ – ತರಗತಿಯ ಮೇಲ್ವಿಚಾರಣೆ
- ತರಗತಿಯ ಭೇಟಿ ಮತ್ತು ಕಲಿಕೆಯ ಪ್ರಗತಿ ಪರಿಶೀಲನೆ, ಮೇಲ್ವಿಚಾರಣೆ
- ಮೌಲ್ಯಮಾಪನ ಕಾರ್ಯದ ಅವಲೋಕನ ಮತ್ತು ಹಿಮ್ಮಾಹಿತಿ
- ಬೋಧಕವರ್ಗದ ಸಭೆ ನಡೆಸುವಿಕೆ
- ಎಸ್‌ಡಿಎಂಸಿ ಸಭೆಗಳು
- ಸಹಪಠ್ಯ ಚಟುವಟಿಕೆಗಳ ಸಂಘಟನೆ

**ವಾರ್ಷಿಕ ಯೋಜನೆಗಳ ತಯಾರಿ/ಅವಲೋಕನ**

ಮುಖ್ಯಶಿಕ್ಷಕರು ಅವರ ಸಹೋದ್ಯೋಗಿಗಳ ಸಹಭಾಗಿತ್ವದಲ್ಲಿ ವಿವಿಧ ಶೈಕ್ಷಣಿಕ ಯೋಜನೆಗಳನ್ನು ಮೇ ಅಂತ್ಯದೊಳಗೆ ತಯಾರಿಸುವುದು ಅಪೇಕ್ಷಣೀಯ. ವರ್ಷವಿಡೀ ದೊರೆಯುವ ಕೆಲಸದ ದಿನ, ಅವಧಿಗಳು, ರಜೆಗಳು ಇತ್ಯಾದಿಗಳನ್ನು ಗಮನಿಸಿ ಇಲಾಖಾ ಮಾರ್ಗಸೂಚಿಯನ್ನು ಅನುಸರಿಸಿ ಶಿಕ್ಷಕರಿಗೆ ತರಗತಿ, ವಿಷಯಗಳನ್ನು ಹಂಚಿ ವಾರ್ಷಿಕ ಶೈಕ್ಷಣಿಕ ಯೋಜನೆಯನ್ನು ಅವರವರ ತರಗತಿ / ವಿಷಯಗಳಲ್ಲಿ ರಚಿಸಲು ಕ್ರಮವಹಿಸುವುದು ಮುಖ್ಯ ಶಿಕ್ಷಕರ ಜವಾಬ್ದಾರಿ ಆಗಿರುತ್ತದೆ. ಈ ಸಂಬಂಧ ಬಹುವರ್ಗ ಬೋಧನೆ, ವಿವಿಧ ಕಲಿಕಾ ಪದ್ಧತಿಗಳನ್ನು ಗಮನಿಸಿ ಅಗತ್ಯವಿದ್ದಲ್ಲಿ ತಕ್ಷಣ ಸಂಪನ್ಮೂಲ ವ್ಯಕ್ತಿಗಳನ್ನು ಸಂಪರ್ಕಿಸಿ ಸಲಹೆ ಪಡೆಯುವುದು. ಈ ಕಾರ್ಯವನ್ನು ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಪೂರ್ಣಗೊಳಿಸಿ ಜೂನ್ ಮೊದಲನೆ ದಿನ ಮೊದಲ ಅವಧಿಯಿಂದಲೇ ಕ್ರಮಬದ್ಧವಾಗಿ ತರಗತಿಗಳನ್ನು ನಡೆಯಲು ಅವಕಾಶ ಮಾಡಿಕೊಡಬೇಕು.

ವಾರ್ಷಿಕ ಶೈಕ್ಷಣಿಕ ಯೋಜನೆಯನ್ನು ಪ್ರತಿನಿತ್ಯ ಜಾರಿಗೆ ತರಲು ವೇಳಾಪಟ್ಟಿಯನ್ನು ರಚಿಸಬೇಕು. ಇದನ್ನು ರಚಿಸುವಾಗ ಬಹುವರ್ಗಬೋಧನೆ, ವಿಷಯಗಳು, ಪಠ್ಯವಸ್ತುವಿನ ಅನುಸಾರ ಬಂದಿರುವ ಅವಧಿಗಳ ಹಂಚಿಕೆ, ಮನೋವೈಜ್ಞಾನಿಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಕರ ಸಹಭಾಗಿತ್ವದೊಡನೆ ವೇಳಾಪಟ್ಟಿಯನ್ನು ರಚಿಸುವುದು.

ಮೇಲ್ಕಂಡಂತೆ ಶಿಕ್ಷಕರು ಮತ್ತು ಅವರವರಿಗೆ ದೊರೆತಿರುವ ವಿಷಯಗಳ ಪಠ್ಯಕ್ರಮವನ್ನು ಅಧ್ಯಯನ ಮಾಡಿ ಇದಕ್ಕೆ ಅನುಗುಣವಾಗಿ ವಾರ್ಷಿಕ / ಮಾಸಿಕ ಪಠ್ಯಯೋಜನೆಯನ್ನು ತಯಾರಿಸುವುದು.

| ಕ್ರ ಸಂ | ಯೋಜನೆಯ ಹೆಸರು | ಗಡವು | ತಯಾರಿಕೆಯಲ್ಲಿ ಪಾಲ್ಗೊಳ್ಳುವವರು | ಅವಲೋಕನ ಮಾಡುವವರು | ಷರಾ |
|---|---|---|---|---|---|
| 1) | ಶಾಲೆಯ ವಾರ್ಷಿಕ ಯೋಜನೆ/ ಮಾರ್ಗದರ್ಶಿ [ಶಾಲಾ ಪಂಚಾಂಗ] ಶಾಲಾ ಶೈಕ್ಷಣಿಕ ಯೋಜನೆ | 31–05–2010 | ಶಾಲಾ ಮುಖ್ಯಸ್ಥರು ಸಹೋಪಾಧ್ಯಾಯರು ಎಸ್‌ಡಿಎಂಸಿ | ಮುಖ್ಯೋಪಾಧ್ಯಾಯರು ಎಸ್‌ಡಿಎಂಸಿ | |
| 2) | ಶಾಲೆಯ ದೀರ್ಘಕಾಲಿಕ ಯೋಜನೆ [ಸಂಸ್ಥಾ ಯೋಜನೆ] | 30–06–2010 | ಶಾಲಾ ಮುಖ್ಯಸ್ಥರು ಸಹೋಪಾಧ್ಯಾಯರು ಎಸ್‌ಡಿಎಂಸಿ | ಮುಖ್ಯೋಪಾಧ್ಯಾಯರು ಎಸ್‌ಡಿಎಂಸಿ | 2, 3 ಅಥವಾ 5 ವರ್ಷಗಳ ಅವಧಿಗೆ ಯೋಜಿಸಬಹುದು |
| 3) | ವಾರ್ಷಿಕ ಕ್ರಿಯಾ ಯೋಜನೆ | 31–05–2010 | ಆಯಾ ಶಿಕ್ಷಕರು | ಮುಖ್ಯೋಪಾಧ್ಯಾಯರು | |
| 4) | ವೇಳಾಪಟ್ಟಿ | 31–05–2010 | ಶಾಲಾ ಮುಖ್ಯಸ್ಥರು ಸಹೋಪಾಧ್ಯಾಯರು | ಮುಖ್ಯೋಪಾಧ್ಯಾಯರು | |

ಟಿಪ್ಪಣಿ:– ಪೂರಕ ಕಲಿಕೆ– ಮಕ್ಕಳ ಮತ್ತು ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿರುವ ಸಂದರ್ಭ

**ಶಿಕ್ಷಕರ ಪೂರ್ವಸಿದ್ಧತೆಯ ಅವಲೋಕನ:**

ಶಿಕ್ಷಕರು ತರಗತಿಗೆ ಹೋಗುವ ಮುನ್ನ ನಡೆಸಿರುವ ಸಿದ್ಧತೆ ಅರ್ಥಾತ್ ಪಾಠಯೋಜನೆ ಮತ್ತು ಬೋಧನೋಪಕರಣ ಇತ್ಯಾದಿಗಳನ್ನು ನಿಯಮಿತವಾಗಿ [ವಾರಕ್ಕೊಮ್ಮೆ] ಪರಿಶೀಲಿಸಿ ಸಲಹೆಗಳನ್ನು ನೀಡಬೇಕು.

ಅಧ್ಯಾಪಕರ ಸೂಕ್ತ ಪೂರ್ವಸಿದ್ಧತೆ ಲಭ್ಯ ಅವಧಿಯಲ್ಲಿ ಗರಿಷ್ಠಮಿತಿಯ ಮಾರ್ಗದರ್ಶನವನ್ನು ಮಗುವಿಗೆ ನೀಡಲು ಸಾಧ್ಯವಾಗುತ್ತದೆ. ಪಾಠಯೋಜನೆ – ಏಕೆ? ಏನನ್ನು? ಹೇಗೆ? ಕಲಿಸಬೇಕೆಂಬ ಅಂಶಗಳನ್ನು ಹೊಂದಿರುತ್ತದೆ. ಮಕ್ಕಳಿಗೆ ಹೊರೆಯಾಗದ, ಚಟುವಟಿಕೆಯುಕ್ತ ಗೃಹಪಾಠ, ಕಲಿಕೆಯ ವಿಧಾನಗಳ ಅಳವಡಿಕೆ ಬೋಧನಾ ಕಲಿಕಾ ಸಾಮಗ್ರಿಗಳ ಬಳಕೆ, ಇತ್ಯಾದಿಗಳ ಪೂರ್ವಸಿದ್ಧತೆಯ ಕುರಿತು ಮುಖ್ಯಶಿಕ್ಷಕರ ಪರಿಶೀಲನೆ ಅಗತ್ಯವಾಗಿದೆ.

**ತರಗತಿಯಲ್ಲಿ ಶಿಕ್ಷಕರ ಬೋಧನೆಯ ಅವಲೋಕನ ಮತ್ತು ಹಿಮ್ಮಾಹಿತಿ:**

ಶಿಕ್ಷಕರ ಬೋಧನಾ ಸಾಮರ್ಥ್ಯ, ವಿಷಯದ ಪ್ರಭುತ್ವ, ಬೋಧನೋಪಕರಣಗಳ ಬಳಕೆ, ಕಲಿಸುವ ತಂತ್ರಗಳು ಎಲ್ಲಾ ಮಕ್ಕಳಿಗೂ ಕಲ್ಪಿಸಲಾಗುವ ಅವಕಾಶ, ಗೃಹಪಾಠ ನೀಡಿಕೆ, ಕಪ್ಪುಹಲಗೆ ಉಪಯೋಗ, ಕಲಿಕಾ ಫಲಗಳನ್ನು ಮೌಲ್ಯಮಾಪನ ಮಾಡುವ ತಂತ್ರಗಾರಿಕೆ, ಪ್ರತಿ ಬೋಧನೆಯ ಉತ್ತಮ ಅಂಶಗಳು, ಕೊರತೆಯ ಅಂಶಗಳು ಮತ್ತು ಅವುಗಳನ್ನು ಹೇಗೆ ತಿದ್ದಿಕೊಳ್ಳಬೇಕು ಎಂಬ ಕುರಿತು ಖಚಿತ ಮಾರ್ಗದರ್ಶನ ನೀಡುವುದು. ಶಿಕ್ಷಕರ ಪಾಠ ವೀಕ್ಷಿಸಿ ನಿರ್ದಿಷ್ಟ ಸಲಹೆ, ಸೂಚನೆ ನೀಡುವುದು.

**ಮೌಲ್ಯಮಾಪನ ಕಾರ್ಯದ ಅವಲೋಕನ ಮತ್ತು ಹಿಮ್ಮಾಹಿತಿ:**

ಘಟಕ ಪರೀಕ್ಷೆ, ಸೆಮಿಸ್ಟರ್ ಪರೀಕ್ಷೆಗಳನ್ನು ಇಲಾಖೆ ನೀಡಿರುವ ಸೂಚನೆಗಳಂತೆ ನಡೆಸಿ ಮಕ್ಕಳ ಕಲಿಕೆಯನ್ನು ದೃಢೀಕರಣಗೊಳಿಸಲು ಶಿಕ್ಷಕರು ಅನುಸರಿಸುತ್ತಿರುವ ಕ್ರಮಗಳನ್ನು ಕೆಳಕಂಡಂತೆ ಮುಖ್ಯಶಿಕ್ಷಕರು ಖಚಿತಪಡಿಸಿಕೊಳ್ಳಬೇಕು. [ಪ್ರಾತಿನಿಧಿಕವಾಗಿ ಪಾಟೀಸವಾಲು(cross examination) ಮಾಡಿ ತಿಳಿಯಬಹುದು].

- ಪ್ರಶ್ನೆಪತ್ರಿಕೆ ತಯಾರಿಕೆಯು ನೀಲ ನಕಾಶೆಯನ್ವಯ ಇದೆಯೇ?
- ಮೌಲ್ಯಮಾಪನವನ್ನು ಸಮರ್ಪಕವಾಗಿ ನಿರ್ವಹಿಸಲಾಗಿದೆಯೇ
- ಉತ್ತರಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ಪೋಷಕರಿಗೆ ನೀಡಲಾಗಿದೆಯೇ?
- ವೈಯಕ್ತಿಕ ಅಂಕಪುಸ್ತಕ [ಶ್ರೇಣಿ] ಮತ್ತು ಕ್ರೋಢೀಕೃತ ಅಂಕಪುಸ್ತಕಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿದ್ದಾರೆಯೇ?
- ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಲಾಗಿದೆಯೇ? ಅವರಿಗೆ ಪರಿಹಾರ ಬೋಧನೆ ಮಾಡಲಾಗಿದೆಯೇ?
- ಪ್ರಗತಿಪತ್ರಗಳನ್ನು ಭರ್ತಿ ಮಾಡಿ ಪೋಷಕರಿಗೆ ನೀಡಲಾಗುತ್ತಿದೆಯೇ?
- ಪ್ರಗತಿಪತ್ರಗಳಲ್ಲಿ ಭರ್ತಿ ಮಾಡಿರುವ ಸಾಮರ್ಥ್ಯವನ್ನು ಮಗು ವಾಸ್ತವವಾಗಿ ಗಳಿಸಿದೆಯೇ?

**ಬೋಧಕರ ಸಭೆ ನಡೆಸುವಿಕೆ:**

ಶೈಕ್ಷಣಿಕ ಪ್ರಗತಿಯನ್ನು ಪರಿಶೀಲಿಸಲು ಶಾಲಾ ಹಂತದಲ್ಲಿ ತಿಂಗಳಿಗೊಮ್ಮೆ ಶಿಕ್ಷಕರ ಸಭೆ ನಡೆಸುವುದು. ನಡೆದ ಶೈಕ್ಷಣಿಕ ಚಟುವಟಿಕೆಗಳ ಅವಲೋಕನ–ಸಲಹೆ ನೀಡುವಿಕೆ, ಮುಂದಿನ ತಿಂಗಳಿನಲ್ಲಿ ನಡೆಯುವ ಕಾರ್ಯಗಳ ಹಂಚಿಕೆ – ನಿರ್ವಹಣೆಯ ಕುರಿತು ಸಲಹೆ ಸೂಚನೆಗಳು ಈ ಸಭೆಯಲ್ಲಿ ಚರ್ಚಿತವಾಗುವ ಮುಖ್ಯ ಅಂಶಗಳಾಗಬೇಕು. ಮುಂದಿನ ಅಂಶಗಳು ಕೇವಲ ಸಲಹಾತ್ಮಕ – ಈ ನೇರದಲ್ಲಿ ವಿಷಯಗಳ ಚರ್ಚೆ/ಕ್ರಮಕ್ಕೆ ಯೋಜಿಸಿಕೊಳ್ಳಬಹುದು.

- ಬೋಧನಾ ಕಲಿಕಾ ತಂತ್ರಗಳ ಕುರಿತು ವಿಚಾರ ವಿನಿಮಯ
- ಮೌಲ್ಯಮಾಪನದ ವಿಶ್ಲೇಷಣೆ ಮತ್ತು ಹಿಂದುಳಿದ ಮಕ್ಕಳ ಕಲಿಕೆಗೆ ಕ್ರಮ.
- ಮಕ್ಕಳ ಹಾಜರಾತಿ, ಗೈರುಹಾಜರಿ ಮಕ್ಕಳ ಬಗ್ಗೆ ಕೈಗೊಳ್ಳಬೇಕಾದ ಕ್ರಮ.
- ಮುಖ್ಯಶಿಕ್ಷಕರು ಅಥವಾ ಶಿಕ್ಷಕರು ಹಿಂದಿನ ತಿಂಗಳಲ್ಲಿ ಹೋಗಿದ್ದ ತರಬೇತಿ/ಕಾನ್ಫರೆನ್ಸ್/ಸಭೆಗಳ ಮುಖ್ಯಾಂಶಗಳನ್ನು ಹಂಚಿಕೊಳ್ಳುವುದು.
- ಅಳವಡಿಸಿಕೊಂಡ ನಾವೀನ್ಯ ತಂತ್ರ/ತರಬೇತಿಯ ಮುಖ್ಯಾಂಶಗಳಿಂದಾದ ಪರಿಣಾಮಗಳ ಬಗ್ಗೆ ವಿಚಾರ ವಿನಿಯಮ.
- ಬದಲಾದ ಪದ್ಧತಿಯಿಂದ ನಕಾರಾತಾತ್ಮಕ ಪರಿಣಾಮಗಳಾಗಿದ್ದರೆ, ಆ ಬಗ್ಗೆ ಮೇಲಧಿಕಾರಿಗಳಿಗೆ ನಿಖರ ಮಾಹಿತಿಯ ವರದಿ ಸಲ್ಲಿಕೆ.
- ಹೊಸ ಪುಸ್ತಕಗಳ ಪರಾಮರ್ಶೆ [Book Review]
- ಗ್ರಂಥಾಲಯ, ಇಂಟರ್‌ನೆಟ್, ದಿನಪತ್ರಿಕೆ, ಮಾಸಪತ್ರಿಕೆಗಳಲ್ಲಿ ವರದಿಯಾಗುವ ಬೋಧನಾ ವಿಧಾನದ ಹೊಸ ಅವಿಷ್ಕಾರಗಳ ಬಗ್ಗೆ ಚರ್ಚೆ.

**ತರಗತಿಯ ಭೇಟಿ**

- **ಮಕ್ಕಳ ಕಲಿಕೆಯ ಪ್ರಗತಿ ಪರಿಶೀಲನೆ**

ಸತತವಾಗಿ ತರಗತಿಗೆ ಭೇಟಿ ನೀಡಿ ಮಕ್ಕಳ ಕಲಿಕೆಯ ಪ್ರಗತಿಯನ್ನು ಪರಿಶೀಲಿಸುವುದು. ಶಿಕ್ಷಣ ಹಕ್ಕು ಕಾಯ್ದೆ ಆಶಯದಂತೆ ಮಕ್ಕಳು ಕಲಿಕೆಯಲ್ಲಿ ಸಂತಸದಿಂದ ಭಾಗವಹಿಸುತ್ತಿರುವರೇ; ಶಿಕ್ಷಕರು, ಮಕ್ಕಳನ್ನು ತಾರತಮ್ಯದಿಂದ ಕಾಣುವ ಪ್ರಕರಣ ಇವೆಯೇ; ಲಿಂಗ, ಜಾತಿ, ವರ್ಣ, ವರ್ಗ ಮಗುವಿನ ನೈಸರ್ಗಿಕ ಮಿತಿ ಇತ್ಯಾದಿ ಅಂಶಗಳನ್ನು ಆಧರಿಸಿ ಮಗುವನ್ನು ಹೀಯಾಳಿಸುವಿಕೆ, ದೈಹಿಕ – ಮಾನಸಿಕ ಹಿಂಸೆಯನ್ನು ನೀಡುತ್ತಿರುವರೇ, ವಿಕಲಚೇತನ ಮಕ್ಕಳನ್ನು ಸರಿಯಾಗಿ ನಡೆಸಿಕೊಳ್ಳಲಾಗುತ್ತಿದೆಯೇ–ಕಲಿಕೆಗೆ ಪೂರಕವಾದ ವಾತಾವರಣ ತರಗತಿಯಲ್ಲಿ ಇದೆಯೇ ಎಂಬುದನ್ನು ಪರಿಶೀಲಿಸಿ ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು.

**ಎಸ್‌ಡಿಎಂಸಿ ಸಭೆಗಳು:**

ಎಸ್‌ಡಿಎಂಸಿ ಸಭೆಗಳನ್ನು ತಿಂಗಳಿಗೊಮ್ಮೆ ನಡೆಸುವುದು. ಕಲಿಕೆಗೆ ಪೂರಕ ವಾತಾವರಣ ನಿರ್ಮಾಣ, ಕಲಿಕೆಯ ಪ್ರಗತಿ, ಸಹಪಠ್ಯ ಚಟುವಟಿಕೆಗಳಲ್ಲಿ ಮಕ್ಕಳು ಮತ್ತು ಶಿಕ್ಷಕರ ಹಾಜರಾತಿ, ಮಕ್ಕಳ ಗೈರುಹಾಜರಿಯನ್ನು ನಿಯಂತ್ರಿಸುವುದು, ಬಿಸಿಯೂಟ ಮುಂತಾದ ಶೈಕ್ಷಣಿಕ ವಿಷಯಗಳನ್ನು ಚರ್ಚಿಸಿ ಅನುಪಾಲನೆ ಮಾಡುವುದು. ಈಗಾಗಲೇ ತ್ರೈಮಾಸಿಕ ಶಾಲಾ ಹಂತದ ನಮೂನೆಗಳನ್ನು ಶಾಲೆಗಳಿಗೆ ನೀಡಲಾಗಿದೆ. ಇಲ್ಲಿನ ಅಂಶಗಳು ಚರ್ಚೆಯಾಗಿ ಅವು ಅನುಪಾಲನೆಯಾಗುವಂತೆ ಗಮನಹರಿಸಬೇಕು.

**ಸಹಪಠ್ಯ ಚಟುವಟಿಕೆಗಳು:**

ಪಠ್ಯ ಚಟುವಟಿಕೆಯಂತೆ ಸಹಪಠ್ಯ ಚಟುವಟಿಕೆಗಳು ಮಕ್ಕಳ ಬೌದ್ಧಿಕ, ಭೌತಿಕ ಬೆಳವಣಿಗೆ ಮತ್ತು ಸರ್ವಾಂಗೀಣ ಪ್ರಗತಿಗೆ ಸಹಕಾರಿ. ಪ್ರತಿ ವಾರದಲ್ಲಿ 80 ನಿಮಿಷಗಳ ಅವಧಿಯನ್ನು ಇದಕ್ಕಾಗಿ ಮೀಸಲಿಡುವುದು. ವಾರದ ಬೇರೆ ಬೇರೆ ದಿನಗಳಲ್ಲಿ ಮತ್ತು ಬೇರೆ ಬೇರೆ ಅವಧಿಗಳಲ್ಲಿ ನಡೆಸುವುದರಿಂದ ವಿಷಯ ಬೋಧನೆಗೆ ಅವಧಿಗಳು ಕೊರತೆಯಾಗುವುದನ್ನು ತಪ್ಪಿಸಬಹುದು. ಈ ವೇದಿಕೆಯಲ್ಲಿ ಎಲ್ಲಾ ಮಕ್ಕಳಿಗೆ ಸಮಾನ ಅವಕಾಶ ಕಲ್ಪಿಸಿ, ಕೆಲವರಿಗೆ ಮಾತ್ರ ಅವಕಾಶ ನೀಡುವ ಕ್ರಮ ಅಕ್ಷಮ್ಯ. ಅದು ಇತರ ಮಕ್ಕಳ ಅಭಿವೃದ್ಧಿಯ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತದೆ. ಮಕ್ಕಳಲ್ಲಿ ಹುದುಗಿರುವ ವಿವಿಧ ಸಾಮರ್ಥ್ಯಗಳ ಅಭಿವ್ಯಕ್ತಿಗೆ ಇದು ವೇದಿಕೆಯಾಗಬೇಕು.

**ಮುಖ್ಯಶಿಕ್ಷಕರ ಆಡಳಿತಾತ್ಮಕ ಕರ್ತವ್ಯಗಳು:**

ದಿನಾಂಕ:–02–03–2009 ರ ಸರ್ಕಾರದ ಆದೇಶದಲ್ಲಿ ಸೂಚಿಸಿರುವ ಕರ್ತವ್ಯಗಳ ಜೊತೆ ಈ ಕೆಳಕಾಣಿಸಿದ ಕರ್ತವ್ಯಗಳನ್ನು ನಿರ್ವಹಿಸುವುದು

- ಮಧ್ಯಾಹ್ನ ಉಪಾಹಾರ ಯೋಜನೆಯ ಮೇಲ್ವಿಚಾರಣೆ
- ಸರ್ವ ಶಿಕ್ಷಣ ಅಭಿಯಾನ ವತಿಯಿಂದ ಬರುವ ಅನುದಾನದ ಸದ್ಬಳಕೆ
- ನಿರ್ಮಾಣ ಕಾರ್ಯದ ಗುಣಮಟ್ಟ ಅವಲೋಕನ

**ಸರ್ಕಾರಿ ಆದೇಶ ಸಂಖ್ಯೆ:–ಇಡಿ 93 ಎಲ್‌ಐಬಿ 2008 ದಿನಾಂಕ:–02–03–2009 ರ ಅನುಬಂಧ "ಅ" ನಲ್ಲಿ ನಮೂದಿಸಿರುವಂತೆ ಸರ್ಕಾರಿ ಸಂಯುಕ್ತ ಪ್ರೌಢಶಾಲೆಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕರ ಕಾರ್ಯ ವ್ಯಾಪ್ತಿಗಳು**

1) ಪ್ರಾಥಮಿಕ ಶಾಲಾ ಶಿಕ್ಷಕರ ಸಾಂದರ್ಭಿಕ ರಜೆ ಮತ್ತು ನಿರ್ಬಂಧಿತ ರಜೆ ಮಂಜೂರು ಮಾಡಲು ಅಧಿಕಾರ ಹೊಂದಿರುತ್ತಾರೆ.
2) ಈ ವಿಭಾಗದ ವೇಳಾಪಟ್ಟಿ ಸಿದ್ಧಪಡಿಸುವುದು.
3) ಈ ವಿಭಾಗದ ಮುಖ್ಯಸ್ಥರು ಶಿಕ್ಷಕರ ಬೋಧನೆ, ಪರಿಹಾರ ಬೋಧನೆ, ನಲಿ–ಕಲಿ ಹಾಗೂ ಇನ್ನಿತರೆ ಶೈಕ್ಷಣಿಕ ಕಾರ್ಯಕ್ರಮಗಳ ಮೇಲ್ವಿಚಾರಣೆ ಮಾರ್ಗದರ್ಶನ ನಿಯಮಿತವಾಗಿ ಮಾಡುವ ಅಧಿಕಾರ ಹೊಂದಿರುತ್ತಾರೆ.
4) ಸರ್ಕಾರಿ ಸರ್ಕಾರೇತರ ಖರೀದಿ ಪುಸ್ತಕ ನಿರ್ವಹಣೆ ಇವರದ್ದಾಗಿರುತ್ತದೆ.
5) ಪ್ರಾಥಮಿಕ ಶಾಲೆಯ ಎಸ್.ಡಿ.ಎಂ.ಸಿ ರಚನೆಯಂತೆ, ಮುಖ್ಯಗುರುಗಳು ಎಸ್.ಡಿ.ಎಂ.ಸಿ ಕಾರ್ಯದರ್ಶಿಯಾಗಿರುವುದರಿಂದ ತತ್ಪರಿಣಾಮವಾದ/ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿರುತ್ತಾರೆ.

6) ಪ್ರತಿ ವಾರಕ್ಕೆ ಕನಿಷ್ಠ ಇಬ್ಬರು ಶಿಕ್ಷಕರ ಪಾಠ ಬೋಧನಾ ಟಿಪ್ಪಣಿಯಂತೆ ಮೇಲ್ವಿಚಾರಣೆ ಮಾಡಿ ಮಾರ್ಗದರ್ಶನ ನೀಡುವುದು. ಈ ಅಂಶವನ್ನು ಮೇಲ್ವಿಚಾರಣೆ ವಹಿಯಲ್ಲಿ ದಾಖಲಿಸುವುದು.

7) ವಾರಕ್ಕೆ ನಿಗದಿತ 25 ಅವಧಿಗಳಂತೆ ಪ್ರಾಥಮಿಕ ಮುಖ್ಯಶಿಕ್ಷಕರ ನಿಗದಿತ ಬೋಧನಾ ಅವಧಿಯಂತೆ ಬೋಧನಾ ವಿಷಯಗಳನ್ನು ಬೋಧಿಸುವುದು ಕಡ್ಡಾಯವಾಗಿರುತ್ತದೆ.

8) ಇಲಾಖೆಯಿಂದ ದೊರೆಯುವ ಪ್ರೋತ್ಸಾಹದಾಯಕ ಸೌಕರ್ಯಗಳಾದ ವಿದ್ಯಾರ್ಥಿವೇತನ, ಸಮವಸ್ತ್ರ, ಪಠ್ಯಪುಸ್ತಕ, ಶಾಲಾಬ್ಯಾಗು, ನೋಟ್‌ಪುಸ್ತಕ, ಜ್ಯಾಮಿಟ್ರಿ ಬಾಕ್ಸ್ ಇತ್ಯಾದಿಗಳನ್ನು ಗುರುತಿಸಲ್ಪಟ್ಟ ಫಲಾನುಭವಿ ವಿದ್ಯಾರ್ಥಿಗಳಿಗೆ ನೀಡಿ ದಾಖಲೆ ನಿರ್ವಹಿಸುವುದು.

9) ಎಸ್‌ಡಿಎಂಸಿ ರಚನೆಯಂತೆ ಪ್ರದತ್ತವಾದ ಅಧಿಕಾರದಂತೆ ಶಾಲೆಯಲ್ಲಿನ ಅನುಪಯುಕ್ತ ವಸ್ತುಗಳನ್ನು ವಿಲೇ ಮಾಡಿ ಬಂದ ಹಣವನ್ನು ಶಾಲೆಯ ಶೈಕ್ಷಣಿಕ ಅಭಿವೃದ್ಧಿಗೆ ಬಳಸಿಕೊಳ್ಳುವುದು.

10) ಮಕ್ಕಳಿಗೆ ನೀಡಿದ ಗೃಹಪಾಠವನ್ನು ಮುಖ್ಯ ಗುರುಗಳು ಆಯಾ ತರಗತಿಯ ವಿಷಯ ಬೋಧಕ ಶಿಕ್ಷಕರುಗಳ ಕನಿಷ್ಠ ಒಂದು ಪ್ರತಿಶತ ಪುನರ್‌ಪರಿಶೀಲನೆ ಮಾಡುವುದು ಹಾಗೂ ದಾಖಲೀಕರಿಸುವುದು.

11) ಮಕ್ಕಳ ಕಲಿಕಾ ಪ್ರಗತಿಗೆ ಉತ್ತರದಾಯಿತ್ವ ಹೊಂದಿರುತ್ತಾರೆ.

**ಸಹಶಿಕ್ಷಕರ ಕಾರ್ಯನಿರ್ವಹಣೆ**

- ಎಲ್ಲಾ ಶಿಕ್ಷಕರು ವಿವಿಧ ತರಬೇತಿಗಳಲ್ಲಿ ಪಾಲ್ಗೊಂಡು ಅವುಗಳನ್ನು ತರಗತಿಯಲ್ಲಿ ಅನುಪಾಲನೆ ಮಾಡುವುದು.
- ಶಿಕ್ಷಕರ ಅನುದಾನ ಸದ್ಬಳಕೆ, ಕ್ರಿಯಾಸಂಶೋಧನೆ ಮತ್ತು ಆವಿಷ್ಕೃತ ಚಟುವಟಿಕೆಗಳ ಅಳವಡಿಕೆ.
- ಶಿಕ್ಷಕರು ಗಳಿಸಿದ ಪ್ರಶಸ್ತಿ ಮತ್ತು ಸ್ಥಳೀಯ ಸನ್ನಿವೇಶದಲ್ಲಿ ಧನಾತ್ಮಕವಾಗಿ ಗುರುತಿಸಿಕೊಂಡಿರುವುದು.
- ಶಿಕ್ಷಕರು ವಿಶೇಷ ಸಾಮರ್ಥ್ಯಗಳನ್ನು ಶಾಲಾ ಕೆಲಸಗಳಲ್ಲಿ ಬಳಸುವುದು.
- ಪೂರ್ವಸಿದ್ಧತೆ, ಮೌಲ್ಯಮಾಪನ ಆಯಾಮಗಳಾದ ಸಾಮರ್ಥ್ಯಾಧಾರಿತ ಪರೀಕ್ಷೆ, ಘಟಕ ಪರೀಕ್ಷೆ ಮತ್ತು ಸೆಮಿಸ್ಟರ್ ಪರೀಕ್ಷೆಗಳೊಂದಿಗೆ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಿಹಾರ ಬೋಧನೆಯ ಅನುಷ್ಠಾನ.
- ಪಠ್ಯವಿಷಯಗಳನ್ನು ಸ್ಥಳೀಯ ಸನ್ನಿವೇಶ, ಸಂಪನ್ಮೂಲ ಸೌಲಭ್ಯಗಳಿಗೆ ಸಮೀಕರಿಸಿ ವಿದ್ಯಾರ್ಥಿಗಳಿಗೆ ಕಲಿಸಿರುವುದು
- ಮಗು ತರಗತಿಯಲ್ಲಿ ಸಂತಸದಿಂದ ಕಲಿಕೆಯಲ್ಲಿ ಭಾಗವಹಿಸುವಂತೆ ಮಾಡುವುದು.
- ಮಗುವಿಗೆ ಹೆದರಿಕೆ, ಹಿಂಜರಿಕೆ ಬಾರದಂತೆ ಶಿಕ್ಷಕರು ವರ್ತಿಸುವುದು [ಒಂದೇ ಪದ, ವಾಕ್ಯ ಮತ್ತು ವಿಚಾರವನ್ನು ಹಲವು ಬಾರಿ ಬರೆಸುವುದು ಒಂದು ಶಿಕ್ಷೆ–ಎಂಬುದನ್ನು ಗಮನಿಸಿ]
- ಕಲಿಕೆಯ ವೇಳೆ ಮಗು ಇತರರೊಂದಿಗೆ ಮಾತನಾಡಿ ನಿರ್ಣಯಕ್ಕೆ ಬರುವುದನ್ನು – ಪ್ರಶ್ನೆ ಕೇಳುವುದನ್ನು ಸ್ವಾಗತಿಸುವುದು.
- ಗೃಹಪಾಠವನ್ನು ಚಟುವಟಿಕೆಯುಕ್ತವಿರುವಂತೆ ಮಾಡುವುದು.

**ಚಿತ್ರಕಲಾ ಶಿಕ್ಷಕರಿಗೆ ವಿಶೇಷ ಸೂಚನೆಗಳು**

**ಚಿತ್ರಕಲಾ ಶಿಕ್ಷಕರು ಶಾಲೆಗಳಲ್ಲಿ ತರಗತಿಯೇತರ ಚಟುವಟಿಕೆಗಳನ್ನು ಈ ಕೆಳಕಂಡಂತೆ ಮಾಡಲು ಸೂಚಿಸಿದೆ.**

ಶಾಲೆಯ ಹೊರಾಂಗಣದಲ್ಲಿ ಹೂದೋಟದ ಮಧ್ಯೆ (ಸ್ಥಳಾವಕಾಶವಿದ್ದಂತೆ) ಪಠ್ಯಚಟುವಟಿಕೆಗೆ ಸಂಬಂಧಿಸಿದಂತೆ ಪ್ರಾಣಿ, ಪಕ್ಷಿ ಇತ್ಯಾದಿ ಸಣ್ಣ ಸಣ್ಣ ಮಾಡೆಲ್ ತಯಾರಿಸಬಹುದು. ಹಾಗೂ ಶಾಲೆಗಳ ಗೋಡೆಗಳ ಮೇಲೆ ಲಭ್ಯ ಸೌಲಭ್ಯಕ್ಕನುಗುಣವಾಗಿ ಮೊದಲ ನೋಟಕ್ಕೆ ಸಿಗುವ ಹಾಗೆ ಅಥವಾ ದೂರಕ್ಕೆ ಎದ್ದು ಕಾಣುವ ಹಾಗೆ. ಶೈಕ್ಷಣಿಕ ಅಂಶಗಳನ್ನೊಳಗೊಂಡ ಮ್ಯೂರಲ್. ಮಾಡಬಹುದು. ಇದರಿಂದ ಶಾಲಾ ಆವರಣದಲ್ಲಿ ಶೈಕ್ಷಣಿಕ ಮಹತ್ವಗಳನ್ನೊಳಗೊಂಡ ಕಲಾತ್ಮಕ ವಾತಾವರಣ ನಿರ್ಮಾಣವಾಗುತ್ತದೆ.

ಒಳಾಂಗಣದಲ್ಲಿ ಶಾಲಾ ಕೊಠಡಿಗಳಿಗನುಗುಣವಾಗಿ ಒಂದು ಕೊಠಡಿಯಲ್ಲಿ ಶಾಲೆಯಿರುವ ಊರು, ಗ್ರಾಮಗಳ ಹಿನ್ನೆಲೆ, ಸ್ಥಳ ಪುರಾಣ ಆಧರಿಸಿ ಕೆಲವು ಚಿತ್ರ / ಫೋಟೋ ತಯಾರಿಸಿ ಅಲಂಕರಿಸಬೇಕು. ಅದಕ್ಕೆ ನನ್ನ ಊರು ಎಂದು ಹೆಸರಿಡಬಹುದು. ಅಲ್ಲಿನ ಸ್ಥಳೀಯ ಐತಿಹಾಸಿಕ ಸ್ಥಳಗಳ ಕಲೆ/ಕಲಾವಿದ/ಸಂಗೀತಗಾರರು ಇತ್ಯಾದಿ ಪ್ರಸಿದ್ಧ ವ್ಯಕ್ತಿಗಳ ಚಿತ್ರಗಳನ್ನು ಹಾಕಬೇಕು. ಆಗ ಆ ಗ್ರಾಮದ ಪ್ರಾಮುಖ್ಯತೆ ಮಗುವಿಗೆ ಮನವರಿಕೆಯಾಗುತ್ತದೆ. ನಂತರ ಮುಂದಿನ ಹಂತದಲ್ಲಿ ಆ ಜಿಲ್ಲೆಯ ಐತಿಹಾಸಿಕ ಸ್ಥಳಗಳು ಅಲ್ಲಿ ಹರಿಯುವ ನದಿ, ಸರೋವರ ಪ್ರಸಿದ್ಧ ಸ್ಥಳಗಳು,

ಪ್ರಸಿದ್ಧ ವ್ಯಕ್ತಿಗಳ ಭಾವಚಿತ್ರಗಳು  ಸಣ್ಣ ವಿವರದೊಂದಿಗೆ ಕೊಠಡಿಗಳ ಗಾತ್ರಕ್ಕನುಗುಣವಾಗಿ ಅಲಂಕರಿಸಿ ಅದಕ್ಕೆ ನನ್ನ ಜಿಲ್ಲೆ ಎಂದು ಹೆಸರಿಡಬಹುದು.  ಇದರಿಂದ ಅಲ್ಲಿನ ಮಕ್ಕಳಿಗೆ ತನ್ನ ಜಿಲ್ಲೆಯ ಮಹತ್ವದ ಅಂಶಗಳ ಮನವರಿಕೆ ಜೊತೆಗೆ ಅಭಿಮಾನ ಮೂಡುತ್ತದೆ.  ಅದೇ ರೀತಿ ನನ್ನ ರಾಜ್ಯ ಎಂದು ಹೆಸರಿಟ್ಟ ಕೋಣೆಯಲ್ಲಿ ರಾಜ್ಯದ ಹೆಸರಾಂತ ವ್ಯಕ್ತಿಗಳು, ಕವಿಗಳು, ಕಲಾವಿದರು, ವಿಜ್ಞಾನಿಗಳು, ಐತಿಹಾಸಿಕ ಸ್ಥಳಗಳು ಹಾಗೂ ಪ್ರೇಕ್ಷಣೀಯ ಸ್ಥಳಗಳು, ನಮ್ಮ ರಾಜ್ಯದಲ್ಲಿ ಕಂಡು ಬರುವ ಹಕ್ಕಿಗಳು, ಪ್ರಾಣಿಗಳು, ಹೂವುಗಳು, ಔಷಧೀಯ ಸಸ್ಯಗಳು, ಮುಂತಾದ ಚಿತ್ರಗಳನ್ನು ಹಾಕಿ ಅಲಂಕರಿಸಿ. ಇದರಿಂದ ನಾಡಿನ ಸಾಂಸ್ಕೃತಿಕ ಹಾಗು ಐತಿಹಾಸಿಕ ಮಹತ್ವ ಮಕ್ಕಳಿಗೆ ದೃಶ್ಯ ರೂಪಗಳೊಂದಿಗೆ ದೊರೆತು ಮುಂದೆ ಅವರ ಬದುಕಿನಲ್ಲಿ ತನ್ನ ಊರು, ಜಿಲ್ಲೆ, ರಾಜ್ಯಗಳ ಬಗೆಗೆ ಆದರ, ಅಭಿಮಾನ ನಿರಂತರವಾಗಿ ಉಳಿಯಲು ಸಹಕಾರಿಯಾಗುತ್ತದೆ.

ಶಾಲೆಯ ಹೊರಗೋಡೆಯ ಮೇಲೆ 8 X 10 ಗಾತ್ರದ ಪಿನ್‌ಬೋರ್ಡನ್ನು ತಯಾರಿಸಿ ಪ್ರತಿದಿನ ಮಕ್ಕಳ ಕಡೆಯಿಂದ ಆಯಾ ದಿನ ಹಾಗು ವಾರಪತ್ರಿಕೆಗಳಲ್ಲಿ ಪ್ರಕಟವಾದ ವಿಶೇಷ ಲೇಖನಗಳನ್ನು ಸಂಗ್ರಹಿಸಿ ಅವುಗಳನ್ನು ಅಂದವಾಗಿ ಕತ್ತರಿಸಿ, ಮೌಂಟ್ ಅಂಟಿಸಿ ಪಿನ್ ಬೋರ್ಡ್ ಮೇಲೆ ಪಿನ್ ಮಾಡಿಸಿ.  ಚೆನ್ನಾಗಿ ಮಾಡಿದ ವಿದ್ಯಾರ್ಥಿಗಳಿಗೆ ಮೆಚ್ಚುಗೆ ಸೂಚಿಸಿ ಇದರಿಂದ ಮಕ್ಕಳಲ್ಲಿ ವಿಷಯ ಸಂಗ್ರಹ ಜ್ಞಾನದ ಜೊತೆಗೆ ದೃಶ್ಯದ ಸೌಂದರ್ಯಪ್ರಜ್ಞೆ ಹಾಗು ಪ್ರದರ್ಶನ ಜ್ಞಾನ ಬೆಳೆಯುತ್ತದೆ.

ಬಿಡುವಿನ ವೇಳೆಯಲ್ಲಿ ಸ್ಥಳೀಯವಾಗಿ ದೊರೆಯುವ ಬಿದಿರು / ರೇಷ್ಮೆ ಕಡ್ಡಿಗಳಂತಹ ಗಟ್ಟಿಕಡ್ಡಿಗಳನ್ನು ಚಪ್ಪಟೆಯಾಗಿ ಕೆತ್ತಿ ಬಣ್ಣಗಳಲ್ಲಿ ಅದ್ದಿ ಅಕ್ಷರಗಳನ್ನು ವಿವಿಧ ವಿನ್ಯಾಸಗಳಲ್ಲಿ ರಚಿಸುವಂತೆ ಮಕ್ಕಳಿಗೆ ತಿಳಿಸಬೇಕು. ಇದಲ್ಲದೆ ಇವೇ ಕಡ್ಡಿಗಳಿಂದ ಬೇರೆ ಬೇರೆ ಗಾತ್ರದ ವಿನ್ಯಾಸದ ಗೆರೆಗಳನ್ನು ರಚಿಸಲು ಕಲಿಸಬೇಕು.  ಇದರಿಂದ ಮಕ್ಕಳಲ್ಲಿ ಸೃಜನಶೀಲ ಹಿನ್ನೆಲೆಯಲ್ಲಿ ಅಕ್ಷರ ರಚನಾಭ್ಯಾಸದ ಜೊತೆ ಸೌಂದರ್ಯಪ್ರಜ್ಞೆ ಬೆಳೆಯುತ್ತದೆ.  ಅಕ್ಷರ ಕಲಿಕೆಗೆ ಅಥವಾ ಬರವಣಿಗೆಯಲ್ಲಿ ನಿರಾಸಕ್ತಿ ಹೊಂದಿರುವ ಮಕ್ಕಳು ಇಂತಹ ಪ್ರಯೋಗಗಳಿಂದ ಬರವಣಿಗೆಯಲ್ಲಿ ಆಸಕ್ತಿ ತಳೆಯುತ್ತಾರೆ.

ಪಠ್ಯವಿಷಯಗಳನ್ನು ಆಧರಿಸಿದ ರೂಪಕಗಳನ್ನು ನಟಿಸುವ ಮೂಲಕ ಪಠ್ಯಕ್ಕೆ ಹೊಸರೂಪ ಕೊಡಬಹುದು. ಹಾಗು ಪಠ್ಯ ಹೆಚ್ಚು ಆಕರ್ಷಣೀಯವಾಗುವಂತೆ ಮಾಡಬಹುದು.  ಈ ಹಿನ್ನೆಲೆಯಲ್ಲಿ ಚಿತ್ರಕಲಾ ಶಿಕ್ಷಕರು / ಕ್ರಾಫ್ಟ್ ಶಿಕ್ಷಕರು ಸಣ್ಣ ಸಣ್ಣ ವೇದಿಕೆ ಪರಿಕರಗಳು ಹಾಗು ಪಾತ್ರಕ್ಕೆ ಬೇಕಾದ ಆಭರಣ ಹಾಗು ಆಯುಧಗಳನ್ನು ಸ್ಥಳೀಯವಾಗಿ ದೊರೆಯುವ ಪಲ್ಪ್ ಬೋರ್ಡ್, ಥರ್ಮಾಕೋಲ್, ಸ್ಪಾಂಜ್, ಫೋಮ್ ಶೀಟುಗಳನ್ನು ಬಳಸಿ ಮಾಡಬಹುದು. ಅಗತ್ಯವಿದ್ದಲ್ಲಿ ಅವಕ್ಕೆ ಬಂಗಾರದ ಲೇಪನದಂತಹ ಮಣಿ ಅಥವಾ ಶೀಟ್‌ಗಳ ಮೂಲಕ ಅಲಂಕರಿಸಬಹುದು. ಇವುಗಳನ್ನು ಒಂದೆಡೆ ಸಂಗ್ರಹಿಸಿಟ್ಟಲ್ಲಿ ಆಗಾಗ ಬಳಸಲು ಸಾಧ್ಯವಾಗುತ್ತದೆ.  ಅಲ್ಲದೆ, ಮಕ್ಕಳು ಇವುಗಳನ್ನು ತಯಾರಿಸುವಾಗ ತಯಾರಿಕ ಕೌಶಲ ಹಾಗು ವಿನ್ಯಾಸದ ಅರಿವು ಮತ್ತು ವಸ್ತುಪರಿಚಯಗಳನ್ನು ಮಾಡಿಕೊಳ್ಳುತ್ತಾರೆ.

ಈ ಮೂಲಕ ಚಿತ್ರಕಲಾ ಶಿಕ್ಷಕರು ಹಾಗು ಕ್ರಾಫ್ಟ್ ಶಿಕ್ಷಕರಿರುವ ಕಡೆ ಶಾಲೆಗಳಲ್ಲಿ ಶೈಕ್ಷಣಿಕ ಉದ್ದೇಶಗಳನ್ನು ಇಟ್ಟುಕೊಂಡು ಕಲಾತ್ಮಕವಾಗಿ ಹೊಸ ಹೊಸ ಪ್ರಯೋಗಗಳನ್ನು ಮಾಡುವುದರ ಮೂಲಕ ಶಿಕ್ಷಣಕ್ಷೇತ್ರಕ್ಕೆ ಹೊಸ ಆಯಾಮ ನೀಡಬಹುದು.

## ಸಮುದಾಯದತ್ತ ಶಾಲೆ

ಮಾನವ ಸಂಪತ್ತು ಸದೃಢವಾಗಿರಬೇಕು. ಅದಕ್ಕಾಗಿ ಬೇಕು ಸರ್ವರಿಗೂ ಶಿಕ್ಷಣ, ಸಕಲ ಸಮಸ್ಯೆಗಳಿಗೂ ಸಿದ್ಧೌಷದ ಶಿಕ್ಷಣ. ಎಲ್ಲಾ ಮಕ್ಕಳು ಶಾಲೆಯಲ್ಲಿರಬೇಕು ಮತ್ತು ನಿಗದಿತ ಕಲಿಕಾ ಸಾಮರ್ಥ್ಯಗಳನ್ನು ಹೊಂದಿರಬೇಕು. ಪ್ರತಿ ಶಿಕ್ಷಕರು ಕಲಿಸುವ ಅಗತ್ಯ ಸಾಮರ್ಥ್ಯಗಳನ್ನು ಹೊಂದಿ ಕಲಿಸುವುದರಲ್ಲಿ ತೊಡಗಬೇಕು ಮತ್ತು ಶಿಕ್ಷಣವು ಒಂದು ಜನಾಂದೋಲನವಾಗಬೇಕು. ಶಿಕ್ಷಣದ ಸಾರ್ವತ್ರೀಕರಣ ಮತ್ತು ಶಾಲೆಯ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣದ ಪ್ರಕ್ರಿಯೆಯಲ್ಲಿ ಪೋಷಕರು ಮತ್ತು ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಲು, ಶೈಕ್ಷಣಿಕ ಚಟುವಟಿಕೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಸಂಘಟಿಸಲು ಕರ್ನಾಟಕ ಸರ್ಕಾರ ಶಿಕ್ಷಣ ಇಲಾಖೆಯಲ್ಲಿ ಹಮ್ಮಿಕೊಂಡಿರುವ ಒಂದು ವಿನೂತನ ಕಾರ್ಯಕ್ರಮ ಸಮುದಾಯದತ್ತ ಶಾಲೆ. ಒಂದು ಅರ್ಥದಲ್ಲಿ ಪೋಷಕರು, ಸಾರ್ವಜನಿಕರು, ದಾನಿಗಳು, ಎಸ್‌ಡಿಎಂಸಿ ಹಾಗೂ ಇತರ ಭಾಗೀದಾರರು ಸರ್ಕಾರಿ ಶಾಲೆಯ ಕಾರ್ಯನಿರ್ವಹಣೆಯನ್ನು ಸಾಮಾಜಿಕ ಮೌಲ್ಯಮಾಪನ ಮಾಡಲು ಇರುವ ಪಾರದರ್ಶಕ ವ್ಯವಸ್ಥೆಯೇ ಸಮುದಾಯದತ್ತ ಶಾಲಾ ಕಾರ್ಯಕ್ರಮ.

### ➢ ಕಾರ್ಯಕ್ರಮದ ವ್ಯಾಪ್ತಿ:–

"ಸಮುದಾಯದತ್ತ ಶಾಲೆ" ಕಾರ್ಯಕ್ರಮದನ್ವಯ ನಿಗದಿತ ದಿನಾಂಕಗಳಂದು ಪ್ರತಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಎಲ್ಲಾ ಪಾಲಕರು ಹಾಗೂ ಎಸ್.ಡಿ.ಎಂ.ಸಿ ಸದಸ್ಯರು ಭಾಗವಹಿಸುವಂತೆ ಎಲ್ಲಾ ಕ್ರಮಗಳನ್ನು ಮುಖ್ಯಶಿಕ್ಷಕರು ಹಾಗೂ ಶಿಕ್ಷಕರು ತೆಗೆದುಕೊಳ್ಳಬೇಕು. ಈ ದಿನಾಂಕದಂದು, ಮಾರ್ಗದರ್ಶಕರು, ಮತ್ತು ಶಿಕ್ಷಕರು ಕಡ್ಡಾಯವಾಗಿ ಭಾಗವಹಿಸಿ ನಿಯೋಜಿತ ಕಾರ್ಯವನ್ನು ನಿರ್ವಹಿಸುವುದು.

### ➢ ಮಾರ್ಗದರ್ಶಕರು:–

ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸರ್ಕಾರಿ/ಅನುದಾನಿತ/ಅನುದಾನರಹಿತ ಪ್ರೌಢಶಾಲೆಗಳ ಬೋಧಕ ಸಿಬ್ಬಂದಿ ಸಮುದಾಯದತ್ತ ಶಾಲಾ ಕಾರ್ಯಕ್ರಮಕ್ಕೆ ಮಾರ್ಗದರ್ಶಕರಾಗಿ ಭಾಗವಹಿಸತಕ್ಕದ್ದು.

ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ನಡೆಯುವ ಈ ಕಾರ್ಯಕ್ರಮಕ್ಕೆ ಸರ್ಕಾರಿ ಮತ್ತು ಅನುದಾನಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು ಭಾಗವಹಿಸತಕ್ಕದ್ದು.

ಅನುಪಾಲನೆ ದೃಷ್ಟಿಯಿಂದ ಒಂದು ಶಾಲೆಗೆ ನಿಗದಿಪಡಿಸಿದ ಮಾರ್ಗದರ್ಶಕರು, ಮುಂದೆ ನಡೆಯುವ ಎಲ್ಲಾ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಶಾಲೆಯ ಪ್ರಗತಿಗೆ ನೆರವಾಗುವುದು.

### ➢ ಅಧಿಕಾರಿಗಳ ಭಾಗವಹಿಸುವಿಕೆ:–

ಸಮುದಾಯದತ್ತ ಶಾಲೆ ಕಾರ್ಯಕ್ರಮದ ಉಸ್ತುವಾರಿಗಾಗಿ ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳು, ಶಿಕ್ಷಣ ಸಂಯೋಜಕರು, ಬಿಆರ್‌ಸಿ ಹಾಗೂ ಸಿಆರ್‌ಸಿ ಸಿಬ್ಬಂದಿ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಒಂದೊಂದು ಶಾಲೆಯನ್ನು ಆಯ್ಕೆ ಮಾಡಿಕೊಂಡು ಕಾರ್ಯಕ್ರಮದಲ್ಲಿ ಭಾಗವಹಿಸತಕ್ಕದ್ದು. ಈ ರೀತಿ ಆಯ್ಕೆ ಮಾಡಿಕೊಂಡ ಶಾಲೆಗೆ ಕಾರ್ಯಕ್ರಮದ ದಿನದಂದು ಭೇಟಿ ನೀಡಿ ಕಾರ್ಯಕ್ರಮ ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿರುವ ಬಗ್ಗೆ ಪರಿಶೀಲಿಸಿ ವರದಿ ಮಾಡಲು ತಿಳಿಸಿದೆ.

ಕಾರ್ಯಕ್ರಮ ನಡೆಯುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಉಪನಿರ್ದೇಶಕರು, ಸಹನಿರ್ದೇಶಕರು ಹಾಗೂ ನಿರ್ದೇಶಕರು ಕಾರ್ಯಕ್ರಮದ ದಿನದಂದು ಅವರವರ ವ್ಯಾಪ್ತಿಯಲ್ಲಿ ಪ್ರವಾಸ ಮಾಡಿ ದಿನದ ಕೊನೆಯಲ್ಲಿ ಯಾವುದಾದರೂ ಒಂದು ಶಾಲೆಯ ಕಾರ್ಯಕ್ರಮದಲ್ಲಿ ಭಾಗವಹಿಸತಕ್ಕದ್ದು.

- **ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ನಿರ್ವಹಿಸಬೇಕಾದ ಕಾರ್ಯಗಳು:**

| ಸಮಯ | ನಿರ್ವಹಿಸಬೇಕಾದ ಕಾರ್ಯಕ್ರಮಗಳು |
|---|---|
| ಶಾಲೆಯ ಸಮಯದಲ್ಲಿ<br>ಬೆಳಿಗ್ಗೆ 10.00 ರಿಂದ 10.30<br><br>ಮಧ್ಯಾಹ್ನ 2.30 ರಿಂದ | ಶಿಕ್ಷಕರ ಕಲಿಸುವಿಕೆಯ ಹಾಗೂ ಮಕ್ಕಳ ಕಲಿಕೆಯ ಅವಲೋಕನ ಮೌಲ್ಯಮಾಪನ ದಾಖಲೆಗಳ ಪರಿಶೀಲನೆ, ಶಿಕ್ಷಕರೊಡನೆ ಸಮಾಲೋಚನೆ.<br>• ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆ ತರಗತಿವಾರು ಉತ್ತರ ಪತ್ರಿಕೆ ಮತ್ತು ಪ್ರಗತಿ ಪತ್ರಗಳ ಸಮೇತ ಪೋಷಕರೊಡನೆ ಸಮಾಲೋಚನೆ ಮಾಡಲು ಶಾಲಾಹಂತದಲ್ಲಿ ತರಗತಿವಾರು ವೇಳಾಪಟ್ಟಿ ಸಿದ್ಧಪಡಿಸಿಕೊಳ್ಳುವುದು.<br>• ಮಕ್ಕಳು ಕಲಿತಿರುವ ವಿಷಯದ ಮೇಲೆ ಪ್ರಶ್ನಿಸಿ ಉತ್ತರ ಪಡೆಯುವುದು. ಪಾಠ ಓದಿಸುವ ಕೆಲಸವನ್ನು ಮಾಡುವುದು.<br>• ಶಾಲೆಯಿಂದ ಹೊರಗುಳಿದ ಮಕ್ಕಳ ಪೋಷಕರೊಡನೆ ಸಮಾಲೋಚನೆ.<br>• ಮಕ್ಕಳ ಪ್ರತಿಭೆಗಳಿಗೆ ಅವಕಾಶ ನೀಡುವ ಮನರಂಜನಾ ಕಾರ್ಯಕ್ರಮ |

- **ಕಾರ್ಯಕ್ರಮ ನಡೆಸಬೇಕಾದ ದಿನಾಂಕಗಳು:-**

| ಕ್ರ ಸಂ | ಪ್ರಾಥಮಿಕ ಶಾಲೆಗಳಿಗೆ | ಪ್ರೌಢಶಾಲೆಗಳಿಗೆ |
|---|---|---|
| 1. | 05-10-2010 | 06-10-2010 |
| 2. | 07-04-2011 | 09-04-2011 |

**ವಿಶೇಷ ಸೂಚನೆ:-**

ಮೇಲೆ ನಿಗದಿಪಡಿಸಿದ ದಿನಗಳಲ್ಲಿ ಅನಿವಾರ್ಯ ಕಾರ್ಯಗಳಿಂದ ರಜೆ ಘೋಷಣೆಯಾದಲ್ಲಿ ಮುಂದಿನ ಕೆಲಸದ ದಿನದಂದು ಕಾರ್ಯಕ್ರಮ ನಡೆಸತಕ್ಕದ್ದು.

- **ವರದಿ ಮತ್ತು ಅನುಪಾಲನೆ:-**

ಪ್ರತಿ ಸಮುದಾಯದತ್ತ ಶಾಲೆ ಕಾರ್ಯಕ್ರಮ ನಡೆದ ನಂತರ ವರದಿಯನ್ನು ತಯಾರಿಸಿ ಮಾರ್ಗದರ್ಶಕರು ಹಾಗೂ ಅಧಿಕಾರಿಗಳು ತಕ್ಷಣ ಮೇಲಾಧಿಕಾರಿಗಳಿಗೆ/ಶಿಕ್ಷಣ ಸಂಯೋಜಕರಿಗೆ/ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನೀಡತಕ್ಕದ್ದು.

ಕಾರ್ಯಕ್ರಮ ನಡೆದ ಎಂಟು ದಿನಗಳೊಳಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಬ್ಲಾಕ್ ಮಟ್ಟದಲ್ಲಿ ವರದಿಗಳನ್ನು ಕ್ರೋಢೀಕರಿಸಿ ವಿಶ್ಲೇಷಿಸಿ ಅವರ ಹಂತದಲ್ಲಿ ಕೈಗೊಳ್ಳಬಹುದಾದ ಎಲ್ಲಾ ಕ್ರಮಗಳನ್ನು ಕೈಗೊಂಡು ಕ್ರೋಢೀಕೃತ ವರದಿಯನ್ನು ಜಿಲ್ಲಾ ಉಪನಿರ್ದೇಶಕರು[ಆಡಳಿತ] ಮತ್ತು ಉಪನಿರ್ದೇಶಕರು[ಅಭಿವೃದ್ಧಿ] ಇವರಿಗೆ ಕಳುಹಿಸತಕ್ಕದ್ದು.

ಕಾರ್ಯಕ್ರಮ ನಡೆದ 15 ದಿನಗಳೊಳಗಾಗಿ ಜಿಲ್ಲಾಮಟ್ಟದಲ್ಲಿ ಉಪನಿರ್ದೇಶಕರು[ಅಭಿವೃದ್ಧಿ] ರವರು ಕ್ರೋಢೀಕರಿಸಿ ಅವರವರ ವ್ಯಾಪ್ತಿಗೆ ಬರುವ ಸಮಸ್ಯೆಗಳ ಬಗ್ಗೆ ಕ್ರಮ ಕೈಗೊಂಡು ಕ್ರೋಢೀಕೃತ ಜಿಲ್ಲಾ ವರದಿಯನ್ನು ಆಯುಕ್ತರಿಗೆ ಕಳುಹಿಸತಕ್ಕದ್ದು.

## ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ

ದಿ: 14-06-2006ರ ರಾಜ್ಯಪತ್ರದಲ್ಲಿ ಪುನರೂಪಿತ ಎಸ್‌ಡಿಎಂಸಿಯನ್ನು ಪಂಚಾಯತ್ ರಾಜ್ ಅಧಿನಿಯಮದಡಿಯಲ್ಲಿ ಕರ್ನಾಟಕ ಸರ್ಕಾರವು ರಚನೆ ಮಾಡಿದೆ.

ಎಸ್‌ಡಿಎಂಸಿ ಈ ಕೆಳಕಂಡ ಸದಸ್ಯರನ್ನು ಒಳಗೊಂಡಿದೆ.

1] ತಂದೆ-ತಾಯಿಯರ ಪರಿಷತ್ತು

2] ಪದನಿಮಿತ್ತ ಸದಸ್ಯರು

3] ನಾಮ ನಿರ್ದೇಶಿತ ಸದಸ್ಯರು

ಎಸ್‌ಡಿಎಂಸಿಯ ಉಪವಿಧಿಗಳಿಗೆ ಸಂಬಂಧಿಸಿದಂತೆ, ಪ್ರತಿಯೊಂದು ಪಂಚಾಯಿತಿ ವ್ಯಾಪ್ತಿಯಲ್ಲಿನ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದ ಜವಾಬ್ದಾರಿ ನಾಗರಿಕ ಸೌಲಭ್ಯ ಸಮಿತಿಯ ಅಡಿಯಲ್ಲಿರುವುದರಿಂದ ಎಸ್‌ಡಿಎಂಸಿಗಳನ್ನು ರಚಿಸಿ ಆ ಮೂಲಕ ಎಸ್‌ಡಿಎಂಸಿಗಳಿಗೆ ಶಾಸನಬದ್ಧ ಸ್ಥಾನಮಾನಗಳನ್ನು ಕಲ್ಪಿಸಲಾಗಿದೆ.

**ಎಸ್‌ಡಿಎಂಸಿಯ ಪ್ರಮುಖ ಅಧಿಕಾರ ಮತ್ತು ಕರ್ತವ್ಯಗಳು**

- ಶಿಕ್ಷಕರು, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಕ್ರಮಬದ್ಧ ಹಾಗೂ ಸಕಾಲಿಕ ಹಾಜರಾತಿಯನ್ನು ನಿಯತವಾಗಿ ಮೇಲ್ವಿಚಾರಣೆ ಮಾಡುವುದು ಹಾಗೂ ಪರಿಶೀಲಿಸುವುದು.
- ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣವನ್ನು ನಿಯತಕಾಲಿಕವಾಗಿ ಮೇಲ್ವಿಚಾರಣೆ ಮಾಡುವುದು ಮತ್ತು ಶಾಲೆಯಲ್ಲಿರುವ ಎಲ್ಲಾ ಮಕ್ಕಳ ಹಾಜರಾತಿಯ ಬಗ್ಗೆ ಹಾಗೂ ಅವರನ್ನು ಶಾಲೆಯಲ್ಲೇ ಉಳಿಸಿಕೊಳ್ಳುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ಶಾಲೆ ಬಿಟ್ಟ ಮಕ್ಕಳ ಪೋಷಕರ ಮನೆಗೆ ಭೇಟಿ ನೀಡಿ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮನವೊಲಿಸುವುದು. ಸದರಿ ಮಗು ಶಾಲೆಗೆ ನಿಯಮಿತವಾಗಿ ಹಾಜರಾಗುವಂತೆ ಕ್ರಮವಹಿಸುವುದು.
- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಸರ್ಕಾರದ ಉತ್ತೇಜಕಗಳಾದ, ಉಚಿತ ಪಠ್ಯಪುಸ್ತಕ, ಉಚಿತ ಸಮವಸ್ತ್ರ, ವಿದ್ಯಾರ್ಥಿವೇತನ, ಅಕ್ಷರ ದಾಸೋಹ ಮುಂತಾದ ಪ್ರೋತ್ಸಾಹದಾಯಕ ಕಾರ್ಯಕ್ರಮಗಳ ಮೇಲ್ವಿಚಾರಣೆ ಮಾಡುವುದು.
- ಕನಿಷ್ಠ ಮೂರು ತಿಂಗಳಿಗೊಮ್ಮೆ ತಂದೆ-ತಾಯಿಯರ ಪರಿಷತ್ತಿನ ಸಭೆಗಳನ್ನು ಕರೆಯುವುದು.
- ಆಟದ ಮೈದಾನ, ಕಾಂಪೌಂಡ್, ಶಾಲಾಕೊಠಡಿ, ಶೌಚಾಲಯ, ಕುಡಿಯುವ ನೀರು, ಪೀಠೋಪಕರಣ ಮುಂತಾದ ಮೂಲ ಸೌಕರ್ಯಗಳು ಹಾಗೂ ಶಾಲೆಗೆ ಅವಶ್ಯವಿರುವ ಇತರೆ ಸೌಲಭ್ಯಗಳನ್ನು ಹೆಚ್ಚಿಸಲು ನೆರವು ನೀಡುವುದು.
- ವರ್ಷದಲ್ಲಿ ಕನಿಷ್ಠ 220 ಬೋಧನಾ ದಿನಗಳನ್ನು ಖಚಿತಪಡಿಸಿಕೊಳ್ಳುವುದು.
- ಶಿಕ್ಷಣದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು.
- ವಿದ್ಯಾರ್ಥಿಗಳ, ತಂದೆ-ತಾಯಿಯರ, ಶಿಕ್ಷಕರ ಮತ್ತು ಶಾಲೆಯ ಬೋಧಕೇತರ ಸಿಬ್ಬಂದಿ ವರ್ಗದವರ ಕುಂದು ಕೊರತೆಗಳನ್ನು ಹಾಗೂ ದೂರುಗಳನ್ನು ಬಗೆಹರಿಸುವುದು.
- ಪ್ರಾಸಂಗಿಕವಾದಂತಹ ಇತರೆ ಎಲ್ಲಾ ಕಾನೂನುಬದ್ಧ ಕಾರ್ಯಗಳು, ಕೃತ್ಯಗಳು ಮತ್ತು ಕೆಲಸಗಳನ್ನು ಮಾಡುವುದು.

**ಕಲಿಕೆಯ ಗುಣಮಟ್ಟ:**

ತ್ರೈಮಾಸಿಕ ವರದಿಗಳ ಸೂಚನೆಗಳ ಅನುಸಾರ ಎಸ್‌ಡಿಎಂಸಿ ಯು ಮಕ್ಕಳ ದಾಖಲಾತಿ-ಹಾಜರಾತಿ ಕಲಿಕೆಯ ಗುಣಮಟ್ಟ ಅಧ್ಯಾಪಕರಿಗೆ ಸಲಹೆ ನೀಡಿಕೆಯ ಕಾರ್ಯವನ್ನು ನಿರ್ವಹಿಸಬೇಕಾಗಿದೆ ಹಾಗೂ ಅಧ್ಯಾಪಕರು ಈ ಕಾರ್ಯಗಳನ್ನು ನಿರ್ವಹಿಸಲು ಅನುಕೂಲವಾಗುವ ಪೂರಕ ವಾತಾವರಣ ನಿರ್ಮಿಸುವ ಜವಾಬ್ದಾರಿಯನ್ನು ಎಸ್‌ಡಿಎಂಸಿ ಹೊಂದಿದೆ.

## 2010–11ನೇ ಸಾಲಿನಲ್ಲಿ ನಿಗದಿಪಡಿಸಿರುವ ಶುಲ್ಕ ವಿವರ

| ಕ್ರ ಸಂ | ಶುಲ್ಕದ ವಿವರಗಳು | 6 ರಿಂದ 7ನೇ ತರಗತಿ | 8 ರಿಂದ 10ನೇ ತರಗತಿ |
|---|---|---|---|
| 1 | ದಾಖಲಾತಿ ಶುಲ್ಕ | 5.00 | 10.00 |
| 2 | ಕ್ರೀಡಾ ಶುಲ್ಕ | 20.00 | 25.00 |
| 3 | ರೀಡಿಂಗ್ ರೂಂ ಶುಲ್ಕ | 05.00 | 20.00 |
| 4 | ಪ್ರಯೋಗಾಲಯ ಶುಲ್ಕ | – | 20.00 |
| 5 | ದೃಕ್ ಶ್ರವಣ [ಎವಿಇ] ಶುಲ್ಕ | – | 10.00 |
| 6 | ಡ್ರಾಯಿಂಗ್ ಶುಲ್ಕ | – | 10.00 |
| 7 | ವೈದ್ಯಕೀಯ ಶುಲ್ಕ | 03.00 | 05.00 |
| 8 | ವೃತ್ತಿ ಶಿಕ್ಷಣ ಶುಲ್ಕ | – | 10.00 |
| 9 | ಶಾಲಾ ಸ್ವಚ್ಛತಾ ಶುಲ್ಕ | – | 15.00 |
| 10 | ವಿದ್ಯಾರ್ಥಿ ಕ್ರೀಡಾ ನಿಧಿ | 15.00 | 15.00 |
| 11 | ವಿದ್ಯಾರ್ಥಿ ಕಲ್ಯಾಣ [ಟಿಡಬ್ಲ್ಯೂಎಫ್] ನಿಧಿ | – | 10.00 |
| 12 | ಶಿಕ್ಷಕರ ಕಲ್ಯಾಣ ನಿಧಿ [ಎಸ್‌ಡಬ್ಲ್ಯೂಎಫ್] | – | 10.00 |
| 13 | ಶಾಲಾಭಿವೃದ್ಧಿ ಶುಲ್ಕ | – | 20.00 |
| 14 | ಶಿಕ್ಷಕರ ದಿನಾಚರಣೆ, ಬಾವುಟ | – | 05.00 |
| ಒಟ್ಟು | | 48.00 | 185.00 |

**ಶುಲ್ಕ ರಿಯಾಯಿತಿ:–**

1] ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಎಲ್ಲಾ ಮಕ್ಕಳಿಗೆ 2] ಎಲ್ಲಾ ಹೆಣ್ಣುಮಕ್ಕಳಿಗೆ

**ವಿಶೇಷ ಸೂಚನೆ:–**

**1.** ಸೇವಾದಳ, ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳು ಇರುವ ಶಾಲೆಗಳಲ್ಲಿ ಪ್ರತಿ ಘಟಕಕ್ಕೆ ತಲಾ 5.00 ರೂ ಸಂಗ್ರಹಿಸುವುದು

**2.** ಕ್ರಮಸಂಖ್ಯೆ: 10, 11 ಮತ್ತು 12 ಈ ನಿಧಿಗಳಿಗೆ ಶುಲ್ಕ ರಿಯಾಯಿತಿ ಇರುವುದಿಲ್ಲ. ಎಲ್ಲಾ ವಿದ್ಯಾರ್ಥಿಗಳು ಶುಲ್ಕ ಪಾವತಿಸುವುದು ಕಡ್ಡಾಯವಾಗಿದೆ.

**3.** ಹಿರಿಯ ಪ್ರಾಥಮಿಕ ಶಾಲೆ 5ನೇ ತರಗತಿಯಿಂದ 7ನೇ ತರಗತಿಯವರೆಗೆ ನಡೆಯುತ್ತಿರುವ ಶಾಲೆಗಳಲ್ಲಿ 5ನೇ ತರಗತಿ ವಿದ್ಯಾರ್ಥಿಗಳು ವಿದ್ಯಾರ್ಥಿ ಕ್ರೀಡಾನಿಧಿ ಶುಲ್ಕ ಪಾವತಿಸುವುದು ಕಡ್ಡಾಯವಾಗಿದೆ.

## ವಿದ್ಯಾರ್ಥಿ ಸ್ವಯಂಸರ್ಕಾರ

ಶಾಲೆಯ ಹಂತದಿಂದಲೇ ಪ್ರಜಾಪ್ರಭುತ್ವ ತತ್ವಗಳ ಕಲ್ಪನೆಗೆ ಒತ್ತು ನೀಡುವ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿ ಸ್ವಯಂಸರ್ಕಾರವು ಒಂದಾಗಿದೆ. ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಬೆಳೆಸುವುದರ ಜೊತೆಗೆ ತಮ್ಮ ಕಾರ್ಯಗಳನ್ನು ತಾವೇ ಮಾಡಿಕೊಳ್ಳುವ ವಿವಿಧ ಜವಾಬ್ದಾರಿಗಳ ಹಂಚಿಕೆ ಮತ್ತು ಅವುಗಳ ಕಾರ್ಯಪಾಲನೆ ಬಗ್ಗೆ ಪರಿಶೀಲಿಸುವುದು. ವಿದ್ಯಾರ್ಥಿಗಳು ಯೋಜನಾ ಕಾರ್ಯಗಳನ್ನು ಮತ್ತು ಸ್ಥಳೀಯ ಸನ್ನಿವೇಶಗಳನ್ನು ಅರ್ಥೈಸಿಕೊಂಡು ಇತರರೊಂದಿಗೆ ಮಾಹಿತಿ ಹಂಚಿಕೊಳ್ಳಲು ಅನುವಾಗುವಂತೆ ಕ್ರಮವಹಿಸುವುದು. ವಿದ್ಯಾರ್ಥಿ ಸ್ವಯಂಸರ್ಕಾರದ ಅಡಿ ಕೆಲವು ಕ್ಲಬ್/ಸಂಘಗಳನ್ನು ರಚಿಸಿ ಶಾಲೆಯಲ್ಲಿ ವಿವಿಧ ಚಟುವಟಿಕೆಗಳನ್ನು ನಡೆಸಲು ಕ್ರಮ ಕೈಗೊಳ್ಳಬೇಕು. ಇಂತಹ ವ್ಯವಸ್ಥೆಯು 2010–11ನೇ ಸಾಲಿನಿಂದ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಯ ಹಂತದಲ್ಲಿ ಜಾರಿಗೆ ಬರುತ್ತದೆ. ಪ್ರತಿ ಕ್ಲಬ್ಬಿನಲ್ಲಿ ಆಸಕ್ತಿ ಇರುವ 10–15 ಮಕ್ಕಳು [ಗಂಡು–ಹೆಣ್ಣು] ಇರುತ್ತಾರೆ. ಮಾರ್ಗದರ್ಶಕರಾಗಿ ಒಬ್ಬ ಶಿಕ್ಷಕರು ಇರುತ್ತಾರೆ. ಶಾಲೆಯಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳನ್ನು ಇವರು ಸಂಘಟಿಸುತ್ತಾರೆ. ಪ್ರತಿ ಸಂಘವು ಕನಿಷ್ಠ ಆರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಿರ್ವಹಿಸುವುದು. ಆರೋಗ್ಯ ಮತ್ತು ನೈರ್ಮಲ್ಯ ಸಂಘಕ್ಕೆ ಮಕ್ಕಳು ಆವರ್ತಕವಾಗಿ ಕೆಲಸ ಮಾಡಲು ವ್ಯವಸ್ಥೆಗೊಳಿಸುವುದು. ಪ್ರಾತಿನಿಧಿಕವಾಗಿ ಕೆಲವು ಸಂಘಗಳ ಹೆಸರು ಮತ್ತು ವಿವರ ನೀಡಿದೆ. ಪೂರಕವಾಗಿ ಇತರೆ ಸಂಘಗಳನ್ನು ರಚಿಸಿಕೊಳ್ಳಬಹುದು.

- ಕಲಾಸಂಘ ಏಕಪಾತ್ರಾಭಿನಯ, ನಾಟಕ, ನಿರ್ಮಿತ ಸನ್ನಿವೇಶಗಳ ಅಭಿನಯ, ಬೀದಿನಾಟಕ, ಚಿತ್ರಕಲೆ, ಮಾದರಿಗಳ ತಯಾರಿಕೆಯಂತಹ ಕಾರ್ಯಗಳನ್ನು ಈ ಸಂಘದ ಚಟುವಟಿಕೆಯಾಗಿಸಬಹುದು.
- ವಿಜ್ಞಾನ/ಹಸಿರು/ಪರಿಸರ ಕ್ಲಬ್ – ವೈಜ್ಞಾನಿಕವಾಗಿ ಮುಖ್ಯವೆನಿಸುವ ಕಾರ್ಯಕ್ರಮ ಉಪನ್ಯಾಸ, ಸಮೀಕ್ಷೆ, ಯೋಜನೆಕಾರ್ಯ, ಪರಿಸರ ಸ್ವಚ್ಛತೆ/ಜಾಗೃತಿ ಕಾರ್ಯಕ್ರಮಗಳು ಮುಂತಾದ ಕಾರ್ಯಗಳನ್ನು ಈ ಸಂಘದಿಂದ ನಡೆಸಬಹುದು.
- ಸಾಹಿತ್ಯಕ/ಸಾಂಸ್ಕೃತಿಕ ಕ್ಲಬ್ – ಹಾಡು, ನೃತ್ಯ, ಕೋಲಾಟ, ಸ್ಥಳೀಯ ಆಟಗಳು, ಪ್ರಬಂಧ, ರಸಪ್ರಶ್ನೆ ಆಶುಭಾಷಣ ಇತ್ಯಾದಿಗಳನ್ನು ಸಂಘಟಿಸುವುದು.
- ಮೀನಾ ಸಂಘ/ಮಕ್ಕಳ ಹಕ್ಕುಗಳ ಸಂಘ – ವಿದ್ಯಾರ್ಥಿಗಳಿಗೆ ಸಮುದಾಯಕ್ಕೆ ಹೆಣ್ಣು ಮಕ್ಕಳ ಶಿಕ್ಷಣ, ಮೂಲಭೂತ ಹಕ್ಕುಗಳ, ಸ್ವಚ್ಛತೆ, ಮುಂತಾದ ವಿಷಯಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಡೆಸುವುದು.
- ಕ್ರೀಡಾಸಂಘ – ಸ್ಥಳೀಯ ಆಟಗಳು, ಸಾಮೂಹಿಕ ಕವಾಯತು, ಕಾಲ್ಚೆಂಡು, ಥ್ರೋಬಾಲ್, ಕೊಕ್ಕೊ ಮುಂತಾದ ಆಟಗಳನ್ನು ಆಡಿಸಲು ವ್ಯವಸ್ಥೆ ಮಾಡಿಕೊಳ್ಳಬಹುದು.
- ಆರೋಗ್ಯ/ನೈರ್ಮಲ್ಯ ಸಂಘ ಇತ್ಯಾದಿ – ಅನುಕ್ರಮವಾಗಿ ಪಾಳಿಯ ಮೇಲೆ ಮಕ್ಕಳು ಶಾಲೆಯ ಆವರಣ, ಕೋಣೆ ಇವುಗಳನ್ನು ಶುದ್ಧವಾಗಿಡಲು ಈ ಸಂಘ ಪ್ರಯತ್ನಿಸುವುದು.

ಈ ಸಂಘಗಳ ಚಟುವಟಿಕೆಗೆ ಶಾಲಾ ಅನುದಾನವನ್ನು ಬಳಸಬಹುದು.

## ಸರ್ವ ಶಿಕ್ಷಣ ಅಭಿಯಾನದ ಮಧ್ಯವರ್ತನೆಗಳು:

ಮುಖ್ಯವಾದ ಮಧ್ಯವರ್ತನೆಗಳ ವಿವರವನ್ನು ಸಾರ್ವತ್ರಿಕ ದಾಖಲಾತಿ/ಉಳಿಕೆ ಮತ್ತು ಕಲಿಕೆಯ ಸಾಧನೆ ಎಂಬ ಶೀರ್ಷಿಕೆಗಳಲ್ಲಿ –ಮುಂದೆ ಚರ್ಚಿಸಲಾಗಿದೆ. ಈ ಕಾರ್ಯತಂತ್ರಗಳನ್ನು ವಾರ್ಷಿಕ ಕಾರ್ಯಯೋಜನೆ: 2010–11ರಲ್ಲಿ ಪ್ರಸ್ತಾಪ ಮಾಡಿ ಕೇಂದ್ರ ಸರ್ಕಾರಕ್ಕೆ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. ಗಣತಿಯಾದ ಪ್ರತಿ ಮಗುವು ಪ್ರಾಥಮಿಕ ಶಿಕ್ಷಣ ಪೂರೈಸುವವರಗೆ ಸದರಿ ಮಗುವು ಶಾಲೆಯಲ್ಲಿ ಉಳಿದಿರುವುದನ್ನು ದೃಢಪಡಿಸಲು ಅನುಕೂಲವಾಗುವಂತೆ ಈ ಹಿಂದೆ ಇದ್ದಂತಹ ಕಡ್ಡಾಯ ಪ್ರಾಥಮಿಕ ಶಿಕ್ಷಣ ವಹಿಯ ಮಾಹಿತಿಯನ್ನು ಗ್ರಾಮಶಿಕ್ಷಣ ವಹಿಯಲ್ಲಿ ನಮೂದಿಸುವುದು. ಶಾಲೆಯಿಂದ ಹೊರಗುಳಿದ ಮಗುವಿನ ಮಾಹಿತಿಯನ್ನು ಗ್ರಾಮ ಪಂಚಾಯ್ತಿಗೆ 3 ತಿಂಗಳಿಗೊಮ್ಮೆ ಕಳಿಸುವುದು.

## ಸಾರ್ವತ್ರಿಕ ದಾಖಲಾತಿ ಮತ್ತು ಉಳಿಕೆ:

❖ ***ಶಾಲೆಯಿಂದ ಹೊರಗುಳಿದ ಮಕ್ಕಳು:***

1) **12 ತಿಂಗಳ ವಸತಿ ರಹಿತಬ್ರಿಡ್ಜ್‌ಕೋರ್ಸ್ (12 ಎನ್.ಆರ್.ಬಿ.ಸಿ):**

ಎನ್.ಆರ್.ಬಿ.ಸಿ ಕಾರ್ಯತಂತ್ರದಡಿಯಲ್ಲಿ 03 ಉಪಕಾರ್ಯ ತಂತ್ರಗಳನ್ನು ರೂಪಿಸಲಾಗಿದೆ.

- **ಪೂರಕ ಶಾಲೆ:–** ಶಾಲೆ ದೂರ ಇರುವ ಕಾರಣದಿಂದ ಶಾಲಾ ವಯಸ್ಸಿನ ಮಕ್ಕಳು ಶಾಲೆಯಿಂದ ಹೊರಗೆ ಇದ್ದಲ್ಲಿ ಇಂತಹ ಮಕ್ಕಳನ್ನು ಕ್ರಮೇಣ ಔಪಚಾರಿಕ ಶಾಲಾ ಪರಿಧಿಗೆ ತರಲು ಪೂರಕ ಶಾಲೆ ತೆರೆಯಲಾಗುವುದು. ಜನವಸತಿ ಪ್ರದೇಶದಿಂದ 1 ಕಿ.ಮೀ ವ್ಯಾಪ್ತಿಯಲ್ಲಿ ಪ್ರಾಥಮಿಕ ಶಾಲೆ, 3 ಕಿ.ಮೀ ವ್ಯಾಪ್ತಿಯಲ್ಲಿ ಹಿರಿಯ ಪ್ರಾಥಮಿಕ ಶಾಲಾ ಸೌಲಭ್ಯವಿಲ್ಲದಿದ್ದು ಶಾಲೆ ಪಡೆಯಲು ಅರ್ಹತೆ ಹೊಂದದೆ ಇರುವ ಜನವಸತಿಗಳು ಈ ಕಾರ್ಯತಂತ್ರಕ್ಕೆ ಒಳಪಡುತ್ತಾರೆ.
- **12 ತಿಂಗಳ ಎನ್.ಆರ್.ಬಿ.ಸಿ:–** ಹಿರಿಯ ವಯಸ್ಸಿನ ಶಾಲೆಯಿಂದ ಹೊರಗುಳಿದ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು ಪೂರೈಸಲು ಬೇಕಾದ ಸೇತುಬಂಧ ಶಿಕ್ಷಣವನ್ನು ನೀಡುವುದು. ಈ ಕಾರ್ಯತಂತ್ರದ ಉದ್ದೇಶವಾಗಿದೆ.
- **ಸಾರಿಗೆ ಸೌಲಭ್ಯ:–** ಜನವಸತಿ ಸ್ಥಳವು ಸಮೀಪದ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗೆ ಅನುಕ್ರಮವಾಗಿ ಒಂದು ಅಥವಾ ಮೂರು ಕಿ.ಮೀ ಗಿಂತ ಅಧಿಕವಾಗಿದ್ದು ಆ ವಸತಿ ಸ್ಥಳದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳು ಇದ್ದರೆ ಸಾರಿಗೆ ಸೌಲಭ್ಯ ನೀಡಲಾಗುವುದು.

2) **ಮದರಸ:–** ಮದರಸ ಶಾಲೆಗಳಲ್ಲಿ ಧಾರ್ಮಿಕ ವಿಷಯವನ್ನು ಮಾತ್ರ ಕಲಿಯುತ್ತಿರುವುದಾದರೆ ಮತ್ತು ಈ ಮಕ್ಕಳು ಶಾಲೆಯಿಂದ ಹೊರಗುಳಿದ ಮಕ್ಕಳಾಗಿದ್ದರೆ ಸರ್ವ ಶಿಕ್ಷಣ ಅಭಿಯಾನದಡಿ ಹಣಕಾಸಿನ ಸೌಲಭ್ಯ ವಿಸ್ತರಣೆ ಮಾಡಲಾಗುವುದು.

3) **12 ತಿಂಗಳ ವಸತಿ ಸಹಿತ ಸೇತುಬಂಧ ಕಾರ್ಯಕ್ರಮ:–**

2 ಬಗೆಯ ಕಾರ್ಯತಂತ್ರಗಳನ್ನು ಈ ಹರವಿನಲ್ಲಿ ಅಳವಡಿಸಲಾಗಿದೆ.

- ✓ ಆಶಾಕಿರಣ
- ✓ 12 ತಿಂಗಳ ವಸತಿಯುತ ಸೇತುಬಂಧ
- ✓ **ಆಶಾಕಿರಣ** ಕಾರ್ಯತಂತ್ರವು ಶಾಲೆಗೆ ಸೇರಿದ ಮಗುವು ಶಾಲೆ ತೊರೆಯದೆ ಶಾಲೆಯಲ್ಲಿ ಉಳಿಯುವಂತೆ ಮಾಡಲು ಯೋಜಿಸಲ್ಪಟ್ಟ ಕಾರ್ಯತಂತ್ರವಾಗಿದೆ. ವಸತಿಸಹಿತ ಸೌಲಭ್ಯವನ್ನು ಸಂಭಾವ್ಯ ಶಾಲೆ ತೊರೆಯುವ ಮಕ್ಕಳಿಗೆ ಕಲ್ಪಿಸಲಾಗುತ್ತದೆ.

- ✓ **12 ತಿಂಗಳ ವಸತಿಯುತ ಚಿಣ್ಣರ ಅಂಗಳ ಸೇತುಬಂಧ** ಶಾಲೆಯಿಂದ ಹೊರಗುಳಿದ ಹಿರಿಯ ವಯಸ್ಸಿನ ಮತ್ತು ಮುಖ್ಯವಾಹಿನಿಗೆ ಸೇರಲು ಹೆಚ್ಚು ಸಮಯವನ್ನು ಬೇಡುವ ಮಕ್ಕಳು ಈ ಕಾರ್ಯತಂತ್ರದ ಫಲಾನುಭವಿಗಳು, ಇವರಿಗೆ ವಸತಿಸಹಿತ ಸೇತುಬಂಧ ಸೌಲಭ್ಯ ಕಲ್ಪಿಸಲಾಗುತ್ತದೆ.

**4) <u>ಗುಡಾರ (ಟೆಂಟ್) ಶಾಲೆ :</u>**

ವಲಸೆ ಹೋಗುವ ಜನ ತಮ್ಮೊಂದಿಗೆ ಶಾಲೆಯಲ್ಲಿ ಕಲಿಯುತ್ತಿರುವ ಮಗುವನ್ನು ಕರೆದೊಯ್ಯುತ್ತಾರೆ. ಇದರಿಂದ ಇಂತಹ ವಿದ್ಯಾರ್ಥಿಗಳ ಕಲಿಕೆ ಮಟ್ಟದ ಮೇಲೆ ವಲಸೆ ಪ್ರತಿಕೂಲ ಪರಿಣಾಮ ಬೀರುವುದು. ಹೆಚ್ಚು ಸಂದರ್ಭಗಳಲ್ಲಿ ಶಾಲೆಯನ್ನು ಮಧ್ಯದಲ್ಲೇ ಬಿಡುವವರ ಸಂಖ್ಯೆ ಹೆಚ್ಚಳವಾಗುತ್ತದೆ. ಈ ಸಮಸ್ಯೆಯನ್ನು ನಿಯಂತ್ರಿಸಲು ಬಳಸುವ ಕಾರ್ಯತಂತ್ರವೇ ಗುಡಾರ(ಟೆಂಟ್) ಶಾಲೆ. ಎಲ್ಲಿ ವಲಸೆಯೋ ಅಲ್ಲಿ ಶಾಲೆ ತೆರೆಯಲಾಗುತ್ತದೆ.

**5) <u>ಸಂಚಾರಿ ಶಾಲೆ:– (</u>**<u>Mobile school</u>**<u>)</u>**

ಸಂಚಾರಿ ಶಾಲೆಗಳನ್ನು ಪಟ್ಟಣ ಪ್ರದೇಶದ/ಕೊಳಚೆ ಪ್ರದೇಶದ ಶಾಲೆಯಿಂದ ಹೊರಗೆ ಇರುವ ಮಕ್ಕಳಿಗಾಗಿ ಸ್ಥಾಪಿಸಲಾಗಿವೆ. ಶಾಲೆಯ ಸೌಲಭ್ಯ ಇಲ್ಲದ ಕೊಳಚೆ ಪ್ರದೇಶಗಳ ಮಕ್ಕಳನ್ನು ವಾಹನದಲ್ಲಿ ಹತ್ತಿರದ ಶಾಲೆಗೆ ತರುವ ಮತ್ತು ಬಿಡುವ ಕೆಲಸವನ್ನು ಮತ್ತು ಕೆಲವು ಸಂದರ್ಭಗಳಲ್ಲಿ ವಾಹನವನ್ನು ಶಾಲೆಯಾಗಿ ಪರಿವರ್ತಿಸಿ ಕಲಿಕೆ – ಬೋಧನೆಗೆ ವ್ಯವಸ್ಥೆಗೊಳಿಸಲಾಗಿದೆ.

**6) <u>ಗೃಹ ಆಧಾರಿತ ಶಿಕ್ಷಣ :</u>**

ಗೃಹ ಆಧಾರಿತ ಶಿಕ್ಷಣವನ್ನು ತೀವ್ರ ದೈಹಿಕ/ಮಾನಸಿಕ ವಿಕಲತೆಯ ಕಾರಣದಿಂದ ಶಾಲೆಗೆ ಬರಲು ಸಾಧ್ಯವಾಗದ ಮಗುವಿಗೆ ಜೀವನ ಕೌಶಲಗಳನ್ನು ಕಲಿಸುವುದಕ್ಕಾಗಿ ಮತ್ತು ಪೋಷಕರಿಗೆ ಜಾಗೃತಿ ಉಂಟು ಮಾಡುವುದಕ್ಕೆ ಬಳಸಲಾಗುತ್ತಿದೆ.

**7) <u>ಕೆ.ಜಿ.ಬಿ.ವಿ :</u>**

ಶಾಲೆಯಿಂದ ಹೊರಗುಳಿದ ಹೆಣ್ಣುಮಕ್ಕಳಿಗಾಗಿ ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳಲ್ಲಿ 64 ಕೆ.ಜಿ.ಬಿ.ವಿ (ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ) ವಸತಿ ಶಾಲೆಗಳನ್ನು ತೆರೆಯಲಾಗಿದೆ. ಈ ಶಾಲೆಗಳಲ್ಲಿ ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಮಕ್ಕಳಲ್ಲಿ ಶೈಕ್ಷಣಿಕ ಚಟುವಟಿಕೆಯೊಂದಿಗೆ ಪಠ್ಯೇತರ ಚಟುವಟಿಕೆಗಳಿಗೂ ಸಮಾನ ಅವಕಾಶಗಳನ್ನು ನೀಡಲಾಗುತ್ತಿದೆ.

**8) <u>ಚಿಣ್ಣರ ಅಂಗಳ</u> :**

ಶಾಲೆ ಬಿಟ್ಟ ಮಕ್ಕಳು, ಶಾಲೆಯಿಂದ ಹೊರಗುಳಿದವರು ಹಾಗೂ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗಾಗಿ 2 ತಿಂಗಳ ವಸತಿಯುತ ಹಾಗೂ ವಸತಿರಹಿತ ಸೇತುಬಂಧ ಕಾರ‍್ಯಕ್ರಮ ಬೇಸಿಗೆಯಲ್ಲಿ ನಡೆಸಲಾಗುತ್ತಿದೆ. ಈ ಅವಧಿಯಲ್ಲಿ ಸೇರಿದ ಮಕ್ಕಳನ್ನು ಅವರು ಗಳಿಸಿದ ಸಾಮರ್ಥ್ಯಗಳ ಆಧಾರದ ಮೇಲೆ ಔಪಚಾರಿಕ ಶಾಲೆಗಳಿಗೆ ಸೇರುವಂತೆ ಮಾಡಲಾಗುವುದು. ಹೀಗೆ ಶಾಲೆಗೆ ಸೇರಿದ ಮಕ್ಕಳು ಶಾಲೆಯಲ್ಲಿ ಮುಂದುವರೆಯುವಂತೆ ನೋಡಿಕೊಳ್ಳಲಾಗುವುದು.

**9) <u>6 ತಿಂಗಳ ಋತುಮಾನ ವಸತಿಯುತ ಸೇತುಬಂಧ ಕಾರ್ಯಕ್ರಮ:</u>**

ಈ ಕಾರ್ಯತಂತ್ರದ ಕಾಲಾವಧಿ 06 ತಿಂಗಳು ಇರುತ್ತದೆ. ವಲಸೆ ಹೋಗುವ ಪ್ರದೇಶದಲ್ಲಿ ವಲಸಿತ ಕುಟುಂಬಗಳ ಜೊತೆ ಮಕ್ಕಳೂ ಹೋಗಿ ಅವರ ವಿದ್ಯಾಭ್ಯಾಸ ಕುಂಠಿತವಾಗಬಾರದು ಎಂದು ಈ ಕೇಂದ್ರಗಳನ್ನು [NFNU] ತೆರೆಯಲಾಗುವುದು. ಇವು ಶಾಲೆಗೆ ಹೋಗುವ ಮಕ್ಕಳಿಗೆ ವಸತಿ ನಿಲಯವಾಗಿ ಕಾರ್ಯನಿರ್ವಹಿಸುತ್ತವೆ.

**10) <u>ಎನ್.ಸಿ.ಎಲ್.ಪಿ:</u>**

ಎನ್.ಸಿ.ಎಲ್.ಪಿ ಶಾಲೆಗಳನ್ನು ಕೇಂದ್ರ ಸರ್ಕಾರದ ಧನಸಹಾಯದಿಂದ ರಾಜ್ಯ ಕಾರ್ಮಿಕ ಇಲಾಖೆ ಜಿಲ್ಲಾಧಿಕಾರಿಗಳ ಮೂಲಕ ನಡೆಸುತ್ತಿದೆ. ಇವು ವಸತಿರಹಿತ 12 ತಿಂಗಳ ಸೇತುಬಂಧ ಕೇಂದ್ರಗಳಾಗಿವೆ. ಈ ಶಾಲೆಗಳ ಮೂಲಕ ಬಾಲಕಾರ್ಮಿಕ ಪದ್ಧತಿಯನ್ನು ತಡೆಗಟ್ಟುವ ಪ್ರಯತ್ನ ಆಗುತ್ತಿದೆ. (ಈ ಕೇಂದ್ರಗಳು ವಸತಿ ಸಹಿತವಾಗಿ ಮಾರ್ಪಟ್ಟು ಸರ್ವ ಶಿಕ್ಷಣ ಅಭಿಯಾನ ಅನುದಾನವನ್ನು ನೀಡಲಾಗುತ್ತದೆ)ಇನ್ನಿತರ ವಿನೂತನ ಕಾರ್ಯತಂತ್ರಗಳ ಮೂಲಕ ಶಾಲೆಯಿಂದ ಹೊರಗುಳಿದ, ಶಾಲೆಬಿಟ್ಟ ಮಕ್ಕಳನ್ನುಮುಖ್ಯವಾಹಿನಿಗೆ

ತರಲಾಗುತ್ತಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯು ಹೊರತಂದಿರುವ ಪರ್ಯಾಯ ಶಾಲಾ ಕೈಪಿಡಿಯನ್ನು ಗಮನಿಸಿ.

11) <u>ನಗರ ಪ್ರದೇಶದ ವಂಚಿತ ಮಕ್ಕಳು:</u>

ಇವರಿಗೆ ಮೇಲ್ಕಂಡ ಕಾರ್ಯಕ್ರಮಗಳೇ ಅಲ್ಲದೆ ನಿರಂತರವಾಗಿ ಹಾಜರಿ ಮತ್ತು ಕಲಿಕಾ ಸಾಧನೆಯನ್ನು ಮಾಡಿದವರಿಗೆ ಪ್ರೋತ್ಸಾಹದಾಯಕವಾಗಿ ರೂ.2000/– ಗಳನ್ನು ಮಗುವಿನ ಬ್ಯಾಂಕ್ ಖಾತೆಯಲ್ಲಿಡುವ ಕಾರ್ಯಕ್ರಮದ ಪ್ರಸ್ತಾಪ ಮಾಡಲಾಗಿದೆ.

❖ ***<u>ಸಮನ್ವಯ ಶಿಕ್ಷಣ (Inclusive Education):</u>***

ಶೈಕ್ಷಣಿಕ ಮುಖ್ಯವಾಹಿನಿಯಲ್ಲಿ ಸಾಮಾನ್ಯ ಮಕ್ಕಳೊಂದಿಗೆ ವಿಶೇಷ ಅಗತ್ಯವಿರುವ ಮಕ್ಕಳನ್ನು ಸೇರಿಸಿ ನೀಡುವ ಶಿಕ್ಷಣವನ್ನು, ಸಂಕ್ಷಿಪ್ತ ಅರ್ಥದಲ್ಲಿ ಸಮನ್ವಯ ಶಿಕ್ಷಣ (Inclusive Education) ಎಂದು ಕರೆಯಬಹುದು. 2010–11 ರ ಶೈಕ್ಷಣಿಕ ಸಾಲಿಗೆ ಹತ್ತು ವಿಧಗಳಡಿಯಲ್ಲಿ ವಿಕಲಚೇತನ ಮಕ್ಕಳನ್ನು ಗುರುತಿಸಲಾಗಿದೆ. ಈ ಮಕ್ಕಳ ಕಲಿಕೆಯನ್ನು ಸದೃಢಗೊಳಿಸಲು ಐ.ಇ.ಆರ್.ಟಿ ಗಳಾಗಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಇನ್ನಿತರ ಶಿಕ್ಷಕರನ್ನೊಳಗೊಂಡಂತೆ ಜಿಲ್ಲೆಗೆ ಒಟ್ಟು 50 ರಂತೆ, ಹತ್ತು ಹಂತಗಳಿಗೆ ಸಂಬಂಧಿಸಿದ 15 ದಿನಗಳ ತರಬೇತಿಯನ್ನು (ಮಲ್ಟಿ ಕ್ಯಾಟಗರಿ) ನೀಡಲು ಯೋಜಿಸಲಾಗಿದೆ. ಇದಲ್ಲದೇ 2010–11 ರ ಶೈಕ್ಷಣಿಕ ಸಾಲಿಗೆ ಸರ್ವ ಶಿಕ್ಷಣ ಅಭಿಯಾನ ಯೋಜನೆಯ ಸಮನ್ವಯ ಶಿಕ್ಷಣ ಮಧ್ಯವರ್ತನೆಯಡಿಯಲ್ಲಿ ಕೆಳಕಂಡ ಕಾರ್ಯಕ್ರಮಗಳನ್ನು ಕಾಲಮಿತಿಯಲ್ಲಿ ನಿರ್ವಹಿಸಬೇಕಾಗಿದೆ.

➢ **<u>ವೈದ್ಯಕೀಯ ತಪಾಸಣಾ ಶಿಬಿರ:</u>**

ಗುರುತಿಸಲಾದ ವಿಕಲಚೇತನ ಮಕ್ಕಳಿಗೆ ಆರೋಗ್ಯ ಇಲಾಖೆ ಹಾಗೂ ಸ್ಥಳೀಯ ಆಸಕ್ತ ಸರ್ಕಾರೇತರ ಸಂಸ್ಥೆಗಳ ಸಹಕಾರ ಪಡೆದು ವೈದ್ಯಕೀಯ ತಪಾಸಣಾ ಶಿಬಿರವನ್ನು ಜೂನ್ 2010 ರಲ್ಲಿ ಪ್ರತಿ ಬ್ಲಾಕ್ ಹಂತದಲ್ಲಿ ಆಯೋಜಿಸುವುದು. ವಿಶೇಷ ಅಗತ್ಯವಿರುವ ಯಾವೊಂದು ಮಗುವೂ ಈ ಅವಕಾಶದಿಂದ ವಂಚಿತವಾಗದಂತೆ ನಿಗಾವಹಿಸುವುದು.

➢ **<u>ಸಾಧನ ಸಲಕರಣೆಗಳ ವಿತರಣೆ:</u>**

ವೈದ್ಯಕೀಯ ತಪಾಸಣಾ ಶಿಬಿರಕ್ಕೆ ಹಾಜರಾದ ಈ ಮಕ್ಕಳಿಗೆ ಅಗತ್ಯವಿರುವ ಸಾಧನ ಸಲಕರಣೆಗಳನ್ನು ವೈದ್ಯರು ಸೂಚಿಸುವರು. ಸೂಚಿಸಿದ ಪರಿಕರಗಳನ್ನು ಅಕ್ಟೋಬರ್ 2010 ರೊಳಗೆ ಪೂರೈಸಲು ಕಾರ್ಯಸಿದ್ಧರಾಗಬೇಕು.

➢ **<u>ತರಬೇತಿ:</u>**

ಸೂಕ್ತ ತರಬೇತಿಯಿಲ್ಲದೇ ವಿಕಲಚೇತನ ಮಕ್ಕಳಿಗೆ ಕಲಿಸುವುದು ಸಾಧ್ಯವಾಗಲಾರದು. ಕಾರಣ ಸೇವಾನಿರತ ಪ್ರತಿ ಪ್ರಾಥಮಿಕ ಶಾಲೆಯ ಇಬ್ಬರು ಶಿಕ್ಷಕರಿಗೆ ಆದ್ಯತೆಯ ಮೇಲೆ 90 ದಿನಗಳ ಸಮನ್ವಯ ಶಿಕ್ಷಣ ಫೌಂಡೇಷನ್ ತರಬೇತಿಯನ್ನು ಆರ್.ಸಿ.ಐ.ನಿಂದ ಅನುಮೋದನೆಯಾಗಿರುವ ಸಂಸ್ಥೆಗಳಿಂದ ನೀಡಲು ಕ್ರಮ ತೆಗೆದುಕೊಳ್ಳುವುದು. ಹಾಗೆಯೇ ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಲು ವಿಶೇಷ ಬಿ.ಇಡಿ. ಅಥವಾ ಡಿ.ಇಡಿ. ತರಬೇತಿ ಹೊಂದಿರುವುದು ಅಗತ್ಯವಿರುವುದರಿಂದ, ಈ ತರಬೇತಿಗೆ ಐ.ಇ.ಆರ್.ಟಿ. ಹಾಗೂ 90 ದಿನಗಳ ತರಬೇತಿ ಹೊಂದಿರುವ ಆಸಕ್ತ ಹಾಗೂ ಕ್ರಿಯಾಶೀಲ ಶಿಕ್ಷಕರನ್ನು ನಿಯೋಜಿಸಲು ಕ್ರಮ ತೆಗೆದುಕೊಳ್ಳುವುದು.

➢ **<u>ಪೋಷಕರಿಗೆ ಜಾಗೃತಿ ಕಾರ್ಯಕ್ರಮ:</u>**

ವಿಕಲಚೇತನ ಮಕ್ಕಳಿಗೆ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಕೈಗೊಂಡಿರುವ ಕಾರ್ಯಕ್ರಮಗಳು, ಈ ಮಕ್ಕಳ ಶೈಕ್ಷಣಿಕ ಅವಕಾಶಗಳು ಮತ್ತು ಶೈಕ್ಷಣಿಕ ಮುಖ್ಯವಾಹಿನಿಗೆ ತರಲು ಪೋಷಕರ ಜವಾಬ್ದಾರಿ ಇವೇ ಮುಂತಾದ ವಿಷಯಗಳನ್ನು ಕುರಿತು ಪೋಷಕರಿಗೆ ಕ್ಲಸ್ಟರ್ ಹಂತದಲ್ಲಿ ಜಾಗೃತಿ ಕಾರ್ಯಕ್ರಮವನ್ನು 2010 ರ ಜೂನ್ ಮಾಸದಲ್ಲಿ ಏರ್ಪಡಿಸುವುದು.

➢ **<u>ಗೃಹಾಧಾರಿತ ಸ್ವಯಂಸೇವಕರಿಗೆ ತರಬೇತಿ:</u>**

ವಿಕಲಚೇತನರಲ್ಲಿ ಗಂಭೀರ ಸಮಸ್ಯೆಯಿಂದ ಬಳಲುತ್ತಿರುವ ಮಕ್ಕಳಿಗೆ ಗೃಹಾಧಾರಿತ ಶಿಕ್ಷಣ ನೀಡುವ ವ್ಯವಸ್ಥೆ 2010–2011 ನೇ ವರ್ಷದಲ್ಲೂ ಮುಂದುವರಿಯಲಿದೆ. ಇವರಿಗೆ ಶೈಕ್ಷಣಿಕ ಕರ್ತವ್ಯದ ಜವಾಬ್ದಾರಿ ನಿರ್ವಹಣೆಯನ್ನು ಹೊಂದಿರುವ ಸ್ವಯಂಸೇವಕರಿಗೆ 4 ದಿನಗಳ ವಸತಿ ಸಹಿತ ತರಬೇತಿಯನ್ನು 2010 ಆಗಸ್ಟ್ ಮಾಸದಲ್ಲಿ ನೀಡಲು ಕ್ರಮ ತೆಗೆದುಕೊಳ್ಳುವುದು.

➢ **<u>ಕರೆಕ್ಟೀವ್ ಸರ್ಜರಿ:</u>**

ಅಗತ್ಯವಿರುವ ವಿಕಲಚೇತನ ಮಕ್ಕಳಿಗೆ ಸೂಚನೆಯನ್ನು ಅನುಸರಿಸಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಕರೆಕ್ಟೀವ್ ಸರ್ಜರಿ ಮಾಡಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವುದು.

➢ **<u>ರ್‍ಯಾಂಪ್ಸ್ ನಿರ್ಮಾಣ:</u>**

ಯೋಜನೆಯ ಉದ್ದೇಶದಲ್ಲಿ ಪ್ರತಿ ಶಾಲೆಯಲ್ಲಿಯೂ ವಿಕಲಚೇತನ ಮಗುವು ಶಾಲಾ ಕೊಠಡಿಯೊಳಗೆ ಪ್ರಯಾಸವಿಲ್ಲದೇ ಪ್ರವೇಶಿಲು ಅನುಕೂಲವಾಗುವಂತೆ ರ್‍ಯಾಂಪ್ಸ್ ನಿರ್ಮಿಸುವುದು ಅಗತ್ಯ. ಈ ಬಗ್ಗೆ ಆದ್ಯ ಗಮನ ಹರಿಸುವುದು.

➢ **<u>ಸಮನ್ವಯ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಬಲವರ್ಧನೆ:</u>**

ಸಮನ್ವಯ ಶಿಕ್ಷಣ ಯಶಸ್ವೀ ಕಾರ್ಯಸಾಧನೆಗಳಲ್ಲಿ ವಿಕಲಚೇತನ ಮಕ್ಕಳಿಗಾಗಿ ಸ್ಥಾಪಿಸಲಾಗಿರುವ ಸಂಪನ್ಮೂಲ ಕೇಂದ್ರಗಳ ಕಾರ್ಯನಿರ್ವಹಣೆಯೂ ಕೂಡ ಒಂದು. ಎಂದಿನ ವರ್ಷಗಳಂತೆ 2010–11 ನೇ ಸಾಲಿನಲ್ಲಿಯೂ ಈ ಕೇಂದ್ರಗಳ ಸಮರ್ಪಕ ನಿರ್ವಹಣೆ ಹಾಗೂ ಈ ಕೇಂದ್ರಗಳ ಬಲವರ್ಧನೆಗೆ ಅಗತ್ಯ ಕ್ರಮವಹಿಸಿ ಗರಿಷ್ಠ ಪ್ರಯೋಜನ ಪಡೆಯಲು ಆದ್ಯ ಗಮನ ನೀಡುವುದು.

➢ **<u>ಗಣತಿ:</u>**

ಎಂ.ಎಚ್.ಆರ್.ಡಿ ನಿರ್ದೇಶನದಂತೆ ವಿಕಲಚೇತನ ಮಕ್ಕಳನ್ನು ಗುರುತಿಸಲು 10 ವಿಧಗಳನ್ನು ಹೆಸರಿಸಲಾಗಿದೆ. 2010 ಜನವರಿಯಂದು ನಡೆದ ಗಣತಿಯಲ್ಲಿ 6 ರಿಂದ 14 ರ ವಯೋಮಾನದ ಒಟ್ಟು ಮಕ್ಕಳಲ್ಲಿ ವಿಕಲಚೇತನ ಮಕ್ಕಳ ಸಂಖ್ಯೆ 2% ಕ್ಕಿಂತ ಕಡಿಮೆಯಿದ್ದರೆ, ಈ ಮಕ್ಕಳನ್ನು ಗುರುತಿಸುವಲ್ಲಿ ಗಣತಿಯನ್ನು ಪರಿಣಾಮಕಾರಿಯಾಗಿ ಕೈಗೊಂಡಿಲ್ಲವೆಂದೇ ಅರ್ಥ. ಕಾರಣ ಇಂತಹ ಜಿಲ್ಲೆಗಳವರು 2010 ರ ಜೂನ್ ಮಾಸದಲ್ಲಿ ವಿಕಲಚೇತನರನ್ನು ಗುರುತಿಸಲು ಮತ್ತೊಂದು ವಿಶೇಷ ಗಣತಿ ಮಾಡುವುದು ತುರ್ತು ಅಗತ್ಯ.

ಮೇಲೆ ಹೇಳಿದ ಅಂಶಗಳಲ್ಲದೇ 2010–11 ರ ಎ.ಡಬ್ಲ್ಯು.ಪಿ ಮತ್ತು ಬಿ ನಲ್ಲಿ ಸಮನ್ವಯ ಶಿಕ್ಷಣಕ್ಕೆ ಅನುಮೋದನೆಯಾದ ಅನುದಾನ ಮತ್ತು ಈ ಅಂಶವನ್ನು ಆಧರಿಸಿ ರಾಜ್ಯ ಯೋಜನಾ ನಿರ್ದೇಶಕರ ಕಾರ್ಯಾಲಯದಿಂದ ನೀಡಲಾಗುವ ಸುತ್ತೋಲೆಯನ್ನು ಅನುಸರಿಸಿ ಸೂಚಿತ ಕಾರ್ಯಕ್ರಮಗಳನ್ನು ನಿರ್ವಹಿಸಲು ಆದ್ಯ ಗಮನ ನೀಡುವುದು.

❖ ***<u>ಹದಿಹರೆಯದ ಹೆಣ್ಣುಮಕ್ಕಳ ಜಾಗೃತಿ ಶಿಬಿರ:</u>***

ಕಿಶೋರಾವಸ್ಥೆಯಲ್ಲಿ ಬಾಲಕಿಯರಲ್ಲಿ ಅನೇಕ ದೈಹಿಕ ಮತ್ತು ಮಾನಸಿಕ ಬದಲಾವಣೆಗಳು ಸಂಭವಿಸುತ್ತವೆ. ಈ ಬದಲಾವಣೆಗಳುಂಟಾಗುವ ಸಮಯದಲ್ಲಿ ಬಾಲಕಿಯರಲ್ಲಿ ಆತಂಕ, ಒತ್ತಡ, ಖಿನ್ನತೆಗಳುಂಟಾಗುತ್ತವೆ. ಈ ಬದಲಾವಣೆಗಳಿಗೆ ಹೊಂದಿಕೊಳ್ಳಲು ಅಗತ್ಯವಾದ ಮಾಹಿತಿ ಮತ್ತು ತಿಳುವಳಿಕೆಯನ್ನು ನೀಡಲು 11 ರಿಂದ 14 ವಯೋಮಾನದ ಬಾಲಕಿಯರಿಗೆ ಜಾಗೃತಿ ಶಿಬಿರಗಳನ್ನು ಕೈಗೊಳ್ಳಲಾಗುತ್ತಿದೆ. ಈ ಶಿಬಿರಗಳಲ್ಲಿ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ ವರ್ಗದ ಬಾಲಕಿಯರಿಗೆ ಆದ್ಯತೆ ನೀಡಲಾಗುತ್ತದೆ. ಈ ಶಿಬಿರಗಳನ್ನು ವೈದ್ಯರು, ಆಪ್ತಸಲಹೆಕಾರರು, ಮನೋವಿಜ್ಞಾನಿಗಳು, ತಜ್ಞರ ನೆರವಿನಿಂದ ಕೈಗೊಳ್ಳಲಾಗುತ್ತಿದೆ.

❖ ***<u>ಹೆಣ್ಣುಮಕ್ಕಳ ಪ್ರಾಥಮಿಕ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ (ಎನ್.ಪಿ.ಇ.ಜಿ.ಇ.ಎಲ್) :</u>***

ರಾಷ್ಟ್ರೀಯ ಮಹಿಳಾ ಸಾಕ್ಷರತೆಗಿಂತ ಮಹಿಳಾ ಸಾಕ್ಷರತೆ ಕಡಿಮೆ ಇರುವ ಬ್ಲಾಕ್‌ಗಳನ್ನು ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳು ಎಂದು ಕರೆಯಲಾಗುತ್ತದೆ.

- ಈ ಬ್ಲಾಕ್‌ಗಳಲ್ಲಿ ಬಾಲಕಿಯರ ಶಿಕ್ಷಣ ಉತ್ತೇಜಿಸಲು ಎನ್.ಪಿ.ಇ.ಜಿ.ಇ.ಎಲ್ ಕಾರ್ಯಕ್ರಮ ಆರಂಭಿಸಲಾಗಿದೆ. ಈ ಕಾರ್ಯಕ್ರಮದಡಿ ಬಾಲಕಿಯರಿಗೆ ಹೊಲಿಗೆ, ಕಸೂತಿ, ಮೇಣದ ಬತ್ತಿ ತಯಾರಿಕೆ, ಬ್ಯೂಟೀಷಿಯನ್ ತರಬೇತಿ, ಇತ್ಯಾದಿ ವೃತ್ತಿಗಳನ್ನು ಕಲಿಸಲಾಗುತ್ತಿದೆ.
- ಬಾಲಕಿಯರಿಗಾಗಿ ಶೈಕ್ಷಣಿಕ ಮತ್ತು ಐತಿಹಾಸಿಕ ಮಹತ್ವವುಳ್ಳ ಹತ್ತಿರದ ಸ್ಥಳಗಳಿಗೆ ಕ್ಷೇತ್ರ ಭೇಟಿ ಕೈಗೊಳ್ಳಲಾಗುತ್ತಿದೆ ಹಾಗೂ ಭೇಟಿಯ ನಂತರ ಅನುಭವ ಹಂಚಿಕೆ ನಡೆಯುತ್ತದೆ.
- ಇಬಿಬಿಯ ಪ್ರತಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉತ್ತಮ ಸಂವಹನ ಸಾಮರ್ಥ್ಯ ಇರುವ ಬಾಲಕಿಯರನ್ನೊಳಗೊಂಡ ಮೀನಾ ತಂಡ ರಚಿಸಲಾಗುತ್ತದೆ. ಈ ತಂಡಕ್ಕೆ ಮಾರ್ಗದರ್ಶಕರಾಗಿ ಶಾಲೆಯ ಶಿಕ್ಷಕಿ ಇರುತ್ತಾರೆ. ಈ ತಂಡವು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಕರೆತರುವುದು. ವರದಕ್ಷಿಣೆ, ಬಾಲ್ಯವಿವಾಹ, ಶಿಕ್ಷಣದ ಮಹತ್ವ ಇತ್ಯಾದಿ ವಿಷಯಗಳ ಬಗ್ಗೆ ನಾಟಕ, ಹಾಡು, ನೃತ್ಯ, ಪ್ರಹಸನದ ಮೂಲಕ ಸಮುದಾಯದಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಉತ್ತಮವಾಗಿ ಈ ಕಾರ್ಯಕ್ರಮ ಜಾರಿಗೆ ತಂದ ಶಾಲೆ ಹಾಗೂ ಶಿಕ್ಷಕರನ್ನು ಗುರುತಿಸಿ, ಬ್ಲಾಕ್‌ಹಂತದ ಸಮಾರಂಭದಲ್ಲಿ ಸನ್ಮಾನಿಸಲಾಗುತ್ತಿದೆ. ಈ ಬಾರಿ ರಾಜ್ಯದ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಈ ಕ್ಲಬ್ಬುಗಳನ್ನು ರಚಿಸಲು ಪ್ರಸ್ತಾಪವನ್ನು ಸಲ್ಲಿಸಲಾಗಿದೆ.
- ನವೋದಯ ಶಾಲೆಗಳ ಪ್ರವೇಶ ಪರೀಕ್ಷೆಗೆ ತಯಾರಿಗಾಗಿ ಬಾಲಕಿಯರಿಗೆ ವಿಶೇಷ ತರಬೇತಿ, ಸಹಪಠ್ಯ ಚಟುವಟಿಕೆಗಳ ಆಯೋಜನೆ, ಇತ್ಯಾದಿ ಚಟುವಟಿಕೆಗಳನ್ನು ಎನ್.ಪಿ.ಇ.ಜಿ.ಇ.ಎಲ್ ಕಾರ್ಯಕ್ರಮದಡಿ ಹಮ್ಮಿಕೊಳ್ಳಲಾಗುತ್ತಿದೆ.

❖ ***<u>ಕಸ್ತೂರ ಬಾ ಗಾಂಧಿ ಬಾಲಿಕ ವಿದ್ಯಾಲಯ (ಕೆ.ಜಿ.ಬಿ.ವಿ):</u>***

ಇಬಿಬಿಗಳಲ್ಲಿ ಶಾಲಾ ಸೌಲಭ್ಯದಿಂದ ವಂಚಿತರಾದ ಬಾಲಕಿಯರಿಗೆ ಶಿಕ್ಷಣ ನೀಡಲು ಕೆ.ಜಿ.ಬಿ.ವಿ ಶಾಲೆಗಳನ್ನು ತೆರೆಯಲಾಗಿದೆ. ಈ ಶಾಲೆಗಳು 6 ರಿಂದ 8 ನೇ ತರಗತಿಯವರೆಗೆ ಇದ್ದು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಕೊಳಚೆ ಪ್ರದೇಶದ ಬಾಲಕಿಯರಿಗೆ ಈ ಶಾಲೆಗಳಲ್ಲಿ ಆದ್ಯತೆ ನೀಡಲಾಗುತ್ತಿದೆ. ಬಾಲಕಿಯರಿಗೆ ಹೊಲಿಗೆ, ಕಸೂತಿಗಳಂತಹ ವೃತ್ತಿಕೌಶಲ್ಯಗಳನ್ನು ಕಲಿಸಲಾಗುತ್ತಿದೆ. ಶೈಕ್ಷಣಿಕವಾಗಿ ಅವಕಾಶ ವಂಚಿತ ಮಕ್ಕಳಾಗಿರುವುದಿಂದ ಬಾಲಕಿಯರ ಕಲಿಕಾ ಪ್ರಗತಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಶೈಕ್ಷಣಿಕ ಚಟುವಟಿಕೆಗಳ ಜೊತೆ ಕ್ರೀಡೆಗಳು, ಕರಾಟೆ, ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೂ ಒತ್ತು ನೀಡಲಾಗುತ್ತಿದೆ.

❖ ***<u>ಚಿಣ್ಣರ ಜಿಲ್ಲಾದರ್ಶನ:</u>***

ಸರ್ವಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿನ ಮಕ್ಕಳ ವ್ಯಕ್ತಿತ್ವದ ಸರ್ವತೋಮುಖ ಅಭಿವೃದ್ಧಿ ಒಂದು ಪ್ರಮುಖ ಗುರಿಯಾಗಿದ್ದು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾ/ಪ.ವ ಹಾಗೂ ಹೆಣ್ಣುಮಕ್ಕಳಿಗಾಗಿ 'ಚಿಣ್ಣರ ವ್ಯಕ್ತಿತ್ವ ವಿಕಸನ–ಕರ್ನಾಟಕ ಪರಿಚಯ' ಎಂಬ ಶೈಕ್ಷಣಿಕ ಪ್ರವಾಸವನ್ನು 2004–05 ಹಾಗೂ 2006–07, 2007–08 ಹಾಗೂ 2008–09ನೇ ಸಾಲಿನಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. 2009–10 ನೇ ಸಾಲಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಸದರಿ ಚಟುವಟಿಕೆಯ ಫಲಾನುಭವಿಗಳನ್ನಾಗಿಸಲು <u>[ಮಾನ್ಯ ಶಿಕ್ಷಣ ಸಚಿವರು ಇಂಗಿತವನ್ನು ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ]</u> ಹಾಗೂ ತಮ್ಮ ಜಿಲ್ಲೆಯನ್ನು ಸಮಗ್ರವಾಗಿ ಅರಿಯುವ ನಿಟ್ಟಿನಲ್ಲಿ 4 ದಿನದ **<u>"ಚಿಣ್ಣರ ಕರ್ನಾಟಕ ದರ್ಶನದ"</u>** ಬದಲಿಗೆ 2 ದಿನದ **<u>"ಚಿಣ್ಣರ ಜಿಲ್ಲಾದರ್ಶನ"</u>** ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಿ ಅನುಷ್ಠಾನಗೊಳಿಸಲಾಗಿದೆ. ಇದೇ ಮಾದರಿಯಲ್ಲಿ 2010–2011ನೇ ಸಾಲಿಗೂ ಸಹ ಕಾರ್ಯಕ್ರಮವನ್ನು ವಿಸ್ತರಿಸಲಾಗುವುದು.

✓ **ಚಿಣ್ಣರ ಜಿಲ್ಲಾದರ್ಶನದ ಸಾಮಾನ್ಯ ಉದ್ದೇಶಗಳು :–**

ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಪರಿಪೂರ್ಣವಾಗಿ ಜಿಲ್ಲೆಯ ಮುಖ್ಯವಾದ ಸ್ಥಳಗಳು ಅಂದರೆ ಸ್ಥಳೀಯ ವೈಜ್ಞಾನಿಕ, ಧಾರ್ಮಿಕ, ಭೌಗೋಳಿಕ, ನೈಸರ್ಗಿಕ, ಐತಿಹಾಸಿಕ, ವಿಜ್ಞಾನ ಮತ್ತು ಕೈಗಾರಿಕೆಗಳು, ಉತ್ತಮ ಶಾಲೆ, ಆಕಾಶವಾಣಿ ಕೇಂದ್ರ, ಗಣಿಗಳು, ಉದ್ಯಾನವನ, ಮ್ಯೂಸಿಯಂ, ಪ್ರಖ್ಯಾತ ವ್ಯಕ್ತಿಗಳು ಹುಟ್ಟಿದ ಊರು ಇತ್ಯಾದಿಯನ್ನು ಅರಿಯುವುದು.

ಮಕ್ಕಳು ತಮ್ಮ ಶೈಕ್ಷಣಿಕ ಜೀವನವನ್ನು ರೂಪಿಸಿಕೊಳ್ಳಲು ಸಹಕಾರಿಯಾಗುವಂತೆ ಮಾರ್ಗದರ್ಶನವನ್ನು ನೀಡುವುದು. ಮಕ್ಕಳಲ್ಲಿ ಸಹಕಾರ, ಹೊಂದಾಣಿಕೆ, ನಾಯಕತ್ವ ಮನೋಭಾವವನ್ನು ಬೆಳೆಸುವುದು. ತಮ್ಮ ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯ ಅರಿವು ಹಾಗೂ ಅಭಿವೃದ್ಧಿಗೊಳಿಸುವಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು.

- ತಮ್ಮ ಜಿಲ್ಲೆಯ ಸಾಮಾಜಿಕ ಸ್ಥಿತಿಗತಿಯ ಕುರಿತು ಅರಿವನ್ನು ಉಂಟುಮಾಡುವುದು.
- ಮಕ್ಕಳಿಗೆ ನೈಜ ಪರಿಸರದ ದರ್ಶನ ಮಾಡಿಸುವುದು.
- ತರಗತಿ ಕಲಿಕೆಗೆ ಪೂರಕವಾದ ಮಾಹಿತಿ ಒದಗಿಸುವುದು.
- ಶಾಲಾ ಚಟುವಟಿಕೆಗಳನ್ನು, ಹೊರಪ್ರಪಂಚ ಹಾಗೂ ಸಮಾಜದೊಂದಿಗೆ ಸಮನ್ವಯಗೊಳಿಸುವುದು.
- ತಮ್ಮ ಜಿಲ್ಲೆಯ ಐತಿಹಾಸಿಕ ವಿಷಯಗಳ ನೈಜಸ್ಥಿತಿಯ ದರ್ಶನ ಮಾಡಿಸುವುದು.
- ಪ್ರಾದೇಶಿಕಮಟ್ಟದ ಜನಜೀವನ, ಭಾಷೆ, ಆಚಾರವಿಚಾರಗಳಲ್ಲಿನ ವೈವಿಧ್ಯತೆಯ ಅರಿವುಂಟುಮಾಡುವುದು.

❖ ***ಕಂಪ್ಯೂಟರ್ ಬೆಂಬಲಿತ ಕಲಿಕಾ ಕಾರ್ಯಕ್ರಮ (CALC) – 2010–11***

ಪ್ರತಿ ಕ್ಲಸ್ಟರ್‌ನ ಒಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಂಪ್ಯೂಟರ್ ಸಹಾಯಿತ ಕಲಿಕಾ ಕೇಂದ್ರಗಳನ್ನು ಸರ್ವ ಶಿಕ್ಷಣ ಅಭಿಯಾನದ ಆವಿಷ್ಕೃತ ಚಟುವಟಿಕೆಡಿಯಲ್ಲಿ ಪಾರಂಭಿಸಲಾಗಿದೆ. ಇದು ಕಂಪ್ಯೂಟರ್ ಶಿಕ್ಷಣದೊಂದಿಗೆ ಕಂಪ್ಯೂಟರ್‌ನ ಸಹಾಯದಿಂದ ಮಕ್ಕಳ ವಿಷಯ ಕಲಿಕೆಯ ಮಟ್ಟ ಹೆಚ್ಚಿಸುವ ಗುರಿ ಹೊಂದಿದೆ. ಶಾಲಾ ಪಠ್ಯಕ್ರಮಕ್ಕೆ ಸಂಬಂಧಪಟ್ಟ ಶೈಕ್ಷಣಿಕ ಸಿ.ಡಿ.ಗಳನ್ನು ಕಂಪ್ಯೂಟರ್‌ಗಳ ಮೂಲಕ ಮಕ್ಕಳೇ ಸ್ವತಃ ಬಳಸುವುದರ ಮೂಲಕ ಪರಿಣಾಮಕಾರಿ ಕಲಿಕೆಗೆ ಸಹಾಯಕವಾಗುತ್ತದೆ.

✓ **ಕಂಪ್ಯೂಟರ್ ಕಲಿಕಾ ಕೇಂದ್ರಗಳ ಕಾರ್ಯನಿರ್ವಹಣೆ:**

- ಪ್ರತಿ ತರಗತಿಯ ಮಕ್ಕಳ ಗುಂಪುಗಳಿಗೆ ಪ್ರತಿ ವಾರ ಕನಿಷ್ಠ ಎರಡು ಅವಧಿಗಳನ್ನು ಕಂಪ್ಯೂಟರ್ ಸಹಾಯಿತ ಕಲಿಕೆಗೆ ಲಭ್ಯವಾಗುವಂತೆ ವೇಳಾಪಟ್ಟಿಯನ್ನು ರಚಿಸಿ, ಅದನ್ನು ಕಂಪ್ಯೂಟರ್ ಕೇಂದ್ರದಲ್ಲಿ ಪ್ರದರ್ಶಿಸಬೇಕು.
- ಮಕ್ಕಳು ಗುಂಪಿನಲ್ಲಿ ಕಂಪ್ಯೂಟರ್ ಬಳಸುವಾಗ ಪ್ರತಿ ಮಗುವಿಗೂ ಅವಕಾಶ ಸಿಗುವಂತೆ ನೋಡಿಕೊಳ್ಳಬೇಕು ಮತ್ತು ಪ್ರತಿ ಗುಂಪಿನಲ್ಲಿ ಇರಬೇಕಾದ ಅಪೇಕ್ಷಿತ ಮಕ್ಕಳ ಸಂಖ್ಯೆ 3 – 5.
- ತರಗತಿಯಲ್ಲಿ ವಿಷಯವನ್ನು ಬೋಧಿಸಿದ ಮೇಲೆ ಅದಕ್ಕೆ ಸಂಬಂಧಿಸಿದ ಸಿ.ಡಿ.ವೀಕ್ಷಣೆಗೆ ಪೂರಕ ಕಲಿಕೆಗೆ ಅವಕಾಶ ಮಾಡಿಕೊಡಬೇಕು. ಶಿಕ್ಷಕರು ಒದಗಿಸಲಾದ ಕಂಪ್ಯೂಟರ್ ಪಾಠಗಳನ್ನು ಪೂರ್ವಭಾವಿಯಾಗಿ ವೀಕ್ಷಿಸಿ ಯಾವ ವಿಷಯಕ್ಕೆ ಸಂಬಂಧಿಸಿದ ಪಾಠಗಳನ್ನು ನೀಡಲಾಗಿದೆ ಎಂಬ ಪಟ್ಟಿಯನ್ನು ಸಿದ್ಧಪಡಿಸಿಕೊಂಡು, ಸಂಬಂಧಿಸಿದ ತರಗತಿಗಳಿಗೆ ಸೂಕ್ತವಾಗಿ ಬಳಕೆ ಮಾಡುವಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸಿ, ಕಂಪ್ಯೂಟರ್ ಕೊಠಡಿಯಲ್ಲಿ ಪ್ರದರ್ಶಿಸಬೇಕು.
- ಮಕ್ಕಳು ಕಂಪ್ಯೂಟರ್ ಕೊಠಡಿಗೆ ಭೇಟಿ ನೀಡಿದ ವಿವರ ಹಾಗೂ ಕಲಿಕೆಯಲ್ಲಿ ತೊಡಗಿದ ವಿಷಯ ಕುರಿತಂತೆ ವರದಿಯನ್ನು ದಾಖಲಿಸಬೇಕು.
- ಕಂಪ್ಯೂಟರ್‌ಗಳ ಕಾರ್ಯನಿರ್ವಹಣೆಯಲ್ಲಿ ಸಮಸ್ಯೆ ಇದ್ದಲ್ಲಿ ಸಂಬಂಧಿಸಿದ ಸಂಸ್ಥೆಗೆ ದೂರು ದಾಖಲಿಸಿ, ದೂರು ದಾಖಲು ವಹಿಯಲ್ಲಿ ವಿವರ ಹಾಗೂ ದೂರು ದಾಖಲು ನೋಂದಣಿ ಸಂಖ್ಯೆ (ದೂರು ದಾಖಲು ಮಾಡಿದಾಗ ನೀಡಲಾಗುವ ಸಂಖ್ಯೆ)ಯನ್ನು ದಾಖಲಿಸುವುದು. (Wipro toll free no.18002003456 or 18003453456, HCL no.8050459761). ಸಮಸ್ಯೆ ಮುಂದುವರೆದಲ್ಲಿ ಜಿಲ್ಲೆಯ ಡಯಟ್‌ನಲ್ಲಿನ ಇ.ಟಿ.ವಿಭಾಗಕ್ಕೆ ಪತ್ರ ಮುಖೇನ ದೂರನ್ನು ನೀಡಬೇಕು ಹಾಗೂ ಜಿಲ್ಲೆಯಲ್ಲಿ ವೆಬ್‌ಸೈಟ್ ಮೂಲಕ ದೂರನ್ನು ದಾಖಲಿಸಲು ಕ್ರಮ ಜರುಗಿಸಲಾಗುತ್ತದೆ.

## ಮಕ್ಕಳ ಕಲಿಕೆಯ ಸಾಧನೆ (ಗುಣಾತ್ಮಕ ಶಿಕ್ಷಣ)

❖ **ಸಂಶೋಧನೆ, ಮೌಲ್ಯಮಾಪನ, ಉಸ್ತುವಾರಿ ಮತ್ತು ಮೇಲ್ವಿಚಾರಣೆ:**

ಹಿಂದಿನ ಅಧ್ಯಾಯಗಳಲ್ಲಿ ಮುಂದೆ ನೀಡಿರುವ ಶೀರ್ಷಿಕೆಗಳ ಸಂಬಂಧ ವಿವರ ನೀಡಿದೆ, ಇವುಗಳನ್ನು ಈ ಶಾಖೆಯಲ್ಲಿ ಗುಣಾತ್ಮಕ ಶಿಕ್ಷಣದ ಅಭಿವೃದ್ಧಿಗೆ ಕೈಗೊಳ್ಳಲಾಗುತ್ತದೆ.

✓ ಘಟಕ ಯೋಜನೆ ಮತ್ತು ಪರಿಹಾರ ಬೋಧನೆ.

✓ ತರಗತಿಗೊಂದು ಪ್ಲಾನೆಲ್ ಬೋರ್ಡ್.

✓ ವಿದ್ಯಾರ್ಥಿಯ ಸ್ವಯಂಮೌಲ್ಯಮಾಪನ ದಾಖಲೆ.

✓ ಶಾಲಾ ಶೈಕ್ಷಣಿಕ ಸೌಲಭ್ಯಗಳ ಸ್ವಯಂ ಮೌಲ್ಯಮಾಪನ.

✓ ಕ್ರಿಯಾಸಂಶೋಧನೆ, ಅಧ್ಯಯನ, ದಾಖಲೀಕರಣ ಮತ್ತು ಮಾಹಿತಿ ಹಂಚಿಕೆ.

✓ ಉತ್ತಮ ಶಾಲೆಗೆ ಪ್ರೋತ್ಸಾಹ, ಬಹುಮಾನ ಕಾರ್ಯಕ್ರಮ.

✓ ಸೃಜನಶೀಲತೆಗೆ ಪ್ರೋತ್ಸಾಹ.

- ವಿದ್ಯಾರ್ಥಿಗಳಿಂದ ಕಥೆ ಬರಹ.
- ತಿಂಗಳಿಗೊಂದು ವಿಜ್ಞಾನ ಪ್ರಶ್ನೆ ಕಾರ್ಯಕ್ರಮ.
- ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಮಾಲೋಚನಾ ಶಿಬಿರ.
- ನಿರಂತರ ಸಹಪಠ್ಯ ಚಟುವಟಿಕೆಗಳು.
- ಕ್ಲಸ್ಟರ್ ಹಂತದ ಮಾಸಿಕ ಹಸ್ತಪ್ರತಿ(Magazine).

✓ ಶಿಕ್ಷಕರ ಗುಂಪು ವಿನಿಮಯ ಕಾರ್ಯಕ್ರಮ(ವಿದೇಶ ಪ್ರವಾಸ ಕಾರ್ಯಕ್ರಮ)

✓ ಗುಣಾತ್ಮಕ ಶಿಕ್ಷಣದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದವರಿಗೆ ಪ್ರೋತ್ಸಾಹ ಬಹುಮಾನ.

✓ **ಟಿ.ಎಲ್.ಎಂ.ಮೇಳ ಮತ್ತು ಗಣಿತ ಮೆಟ್ರಿಕ್ ಮೇಳ ಆಯೋಜನೆ:**

| **ಮೇಳಗಳು** | **ಉದ್ದೇಶ** | **ಭಾಗವಹಿಸುವವರು** | **ಉಸ್ತುವಾರಿ / ಜವಾಬ್ದಾರಿ** | **ಕಾರ್ಯಕ್ರಮದ ಅವಧಿ** | **ಅನುದಾನ ಲಭ್ಯತೆ** |
|---|---|---|---|---|---|
| TLM **ಮೇಳ** | ಶಿಕ್ಷಕರು ಸಿದ್ಧಪಡಿಸಿದ ಕಲಿಕೋಪಕರಣಗಳನ್ನು ಪ್ರದರ್ಶಿಸಿ ಪರಸ್ಪರ ಮಾಹಿತಿ ಹಂಚಿಕೊಳ್ಳುವುದು. ವಿದ್ಯಾರ್ಥಿಗಳ ಅವಲೋಕನಕ್ಕೆ, ಅನುದಾನದ ಸದ್ಬಳಕೆ, ಸಮುದಾಯ ಮತ್ತು ಪೋಷಕರಿಗೆ ಶಾಲಾಪ್ರಕ್ರಿಯೆ ಅರಿವು ಮೂಡಿಸುವುದು. | ವಿದ್ಯಾರ್ಥಿಗಳು<br>ಶಿಕ್ಷಕರು<br>SDMC<br>ಪೋಷಕರು<br>ಸಮುದಾಯ | ಮುಖ್ಯ ಶಿಕ್ಷಕರು<br>CRP ಗಳು<br>ಶಿಕ್ಷಣ ಸಂಯೋಜಕರು<br>BRC/BRP/ BEO ಗಳು | ಆಗಸ್ಟ್ ಮಾಹೆ | ಶಿಕ್ಷಕರ ಅನುದಾನ<br>ಶಾಲಾ ಅನುದಾನ (ಭಾಗಶಃ ಅನುದಾನ) |
| **ಗಣಿತ ಮೆಟ್ರಿಕ್** | ಗಣಿತ ಸಾಮರ್ಥ್ಯ ಕಲ್ಪನೆಗಳಿಗೆ ಮೂರ್ತ ಕಲ್ಪನೆ ನೀಡುವುದು. ಆವಿಷ್ಕೃತ ಆಚರಣೆಗಳು, | ವಿದ್ಯಾರ್ಥಿಗಳು<br>ಶಿಕ್ಷಕರು | ಮುಖ್ಯ ಶಿಕ್ಷಕರು<br>CRP ಗಳು | ಸೆಪ್ಟಂಬರ್ ಮಾಹೆ | ಶಿಕ್ಷಕರ ಅನುದಾನ |

| | | | | | |
|---|---|---|---|---|---|
| **ಮೇಳ** | ಪ್ರಯೋಗಗಳು ಮಾದರಿಗಳು, ಕ್ರಿಯಾತ್ಮಕ ಚಟುವಟಿಕೆಗಳನ್ನು ಪರಸ್ಪರ ಹಂಚಿಕೊಳ್ಳುವುದು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವುದು ದೈನಂದಿನ ಜೀವನಕ್ಕೆ ಅನ್ವಯಿಕೊಳ್ಳುವುದು ನೋಡಿತಿಳಿ–ಮಾಡಿಕಲಿ ಕಲ್ಪನೆ. | SDMC ಪೋಷಕರು ಸಮುದಾಯ | ಶಿಕ್ಷಣ ಸಂಯೋಜಕರು BRC/BRP/ BEO ಗಳು | | ಶಾಲಾ ಅನುದಾನ (ಭಾಗಶಃ ಅನುದಾನ) |

❖ ***<u>ಗುಣಾತ್ಮಕ ಶಿಕ್ಷಣಕ್ಕೆ ಪೂರಕವಾದ ಇತರೆ ಕಾರ್ಯಕ್ರಮಗಳು:</u>***

✓ **ಶಾಲಾ ಅನುದಾನ:**

ಕಿರಿಯ ಪ್ರಾಥಮಿಕ ಶಾಲೆ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ದೈನಂದಿನ ವೆಚ್ಚ ಭರಿಸಲು ವಾರ್ಷಿಕ ರೂ.5000/– ಮತ್ತು ರೂ.7000/– ರೂ.ಗಳನ್ನು ಅನುಕ್ರಮವಾಗಿ ನೀಡಲಾಗುತ್ತದೆ.

✓ **ಸೇವಾನಿರತ ಶಿಕ್ಷಕರ ತರಬೇತಿ:**

ಹೊಸ ಶಿಕ್ಷಕರಿಗೆ 30 ದಿನಗಳ ಬುನಾದಿ ತರಬೇತಿ ಮತ್ತು ಈಗಾಗಲೇ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರಿಗೆ ವಾರ್ಷಿಕ 20 ದಿನಗಳ ತರಬೇತಿಯನ್ನು ನೀಡಲಾಗುತ್ತದೆ.

✓ **ಮೇಲ್ವಿಚಾರಕರಿಗೆ ತರಬೇತಿ:**

ಸಿ.ಆರ್.ಪಿ./ಬಿ.ಆರ್.ಪಿ./ಇ.ಸಿ.ಓ.ರವರಿಗೆ ತಮ್ಮ ಕಾರ್ಯಕ್ಷೇತ್ರದಲ್ಲಿ ಉತ್ತಮ ಕಾರ್ಯನಿರ್ವಹಣೆ ಮಾಡಲು ಅನುಕೂಲವಾಗುವಂತೆ ತರಬೇತಿಯನ್ನು ನೀಡಲಾಗುತ್ತದೆ.

✓ **ಹೊಸ ಶಾಲೆಗಳಿಗೆ ಟಿ.ಎಲ್.ಇ. ಅನುದಾನ:**

ಕಿರಿಯ ಪ್ರಾಥಮಿಕ ಶಾಲೆಗೆ ರೂ.20,000/– ಹಾಗೂ ಹಿರಿಯ ಪ್ರಾಥಮಿಕ ಶಾಲೆಗೆ ರೂ. 50,000/– ಅನುದಾನವನ್ನು ಒಮ್ಮೆ ನೀಡಲಾಗುತ್ತದೆ.

✓ **ಸಮುದಾಯ ಸಂಚಲನ:**

ಸಮುದಾಯ ಜಾಗೃತಿಗೆ ಎಸ್.ಡಿ.ಎಂ.ಸಿ. ಮತ್ತು ಚುನಾಯಿತ ಪ್ರತಿನಿಧಿಗಳಿಗೆ 03 ದಿನಗಳ ತರಬೇತಿಯನ್ನು ನಡೆಸಲು ಈ ಬಾರಿ ಪ್ರಸ್ತಾವನೆ ಸಲ್ಲಿಸಲಾಗಿದೆ.

*****

## ತರಗತಿಯ ಪ್ರಕ್ರಿಯೆಗಳು:

ಕೆಳಹಂತದ ತರಗತಿಗಳಲ್ಲಿ ನಲಿ–ಕಲಿ ಕಾರ್ಯಕ್ರಮ ಜಾರಿಯಲ್ಲಿದೆ. ಈ ಕಾರ್ಯಕ್ರಮದ ಸ್ವರೂಪವು ಚಟುವಟಿಕೆಯಿಂದ ಕೂಡಿರುವುದರಿಂದ ತರಗತಿಯ ಪ್ರಕ್ರಿಯೆಗಳು ಮಗುವಿಗೆ ಆಹ್ಲಾದವನ್ನು ಉಂಟುಮಾಡುತ್ತಿವೆ. ನಲಿ–ಕಲಿಯೇತರ ತರಗತಿಗಳಲ್ಲಿ ಕಲಿಕೆಯನ್ನು ಚಟುವಟಿಕೆಯಿಂದ ಕೂಡಿರುವಂತೆ ಮಾಡುವುದು ನಮ್ಮ ಮುಂದಿನ ಸವಾಲು, ಇದಕ್ಕಾಗಿ ಶಿಶುಕೇಂದ್ರಿತ ವಿಧಾನಗಳನ್ನು ಅಳವಡಿಸಬೇಕಾಗಿದೆ. ಇದಕ್ಕಾಗಿ ಯೋಜನಾಕಾರ್ಯ, ಕ್ಷೇತ್ರ ಅಧ್ಯಯನ, ಪ್ರಾತ್ಯಕ್ಷಿಕೆ, ಗುಂಪು ಚಟುವಟಿಕೆ, ಪಾತ್ರಾಭಿನಯ, ಸಂದರ್ಶನ ಮತ್ತು ವರದಿ ಮಾಡುವುದು, ಅನ್ವೇಷಣಾ ವಿಧಾನ, ಅನುಗಮನ ವಿಧಾನ ಇತ್ಯಾದಿ ಬೋಧನಾ ವಿಧಾನಗಳು ನಮ್ಮ ನೆರವಿಗೆ ಬರುತ್ತವೆ.

- **ಯೋಜನಾ ಕಾರ್ಯವನ್ನು** ಬೇರೆ ಬೇರೆ ವಿಷಯಗಳ ಬೋಧನೆಯಲ್ಲಿ ಅಳವಡಿಸಬಹುದು. ಉದಾಹರಣೆಗೆ – ಸಮಾನಾರ್ಥಕ; ಅನೇಕಾರ್ಥಕ ಪದಗಳನ್ನು ಸಂಗ್ರಹಿಸುವುದು. ಗದ್ಯಭಾಗವನ್ನು–ಸಂಭಾಷಣೆಯ ರೂಪದಲ್ಲಿ ಬರೆದು ಪಾತ್ರಾಭಿನಯದ ಮೂಲಕ ಪ್ರಸ್ತುತಪಡಿಸಲು ಹೇಳುವುದು, ಪ್ರಾಸಬದ್ಧ ಸಾಲುಗಳನ್ನು ಬರೆದು ತರುವಂತೆ ಮಾಡುವುದು ಇತ್ಯಾದಿ. ನಕಾಶೆ, ಭೂಪಟ ರಚಿಸಿ ಬಣ್ಣ ಹಾಕಿ ಮುಖ್ಯಾಂಶಗಳನ್ನು ವಿವರಿಸುವಂತೆ ಹೇಳುವುದು. 3ಡಿ ನಕಾಶೆಯ ಮೇಲೆ ನೈಸರ್ಗಿಕ ಅಂಶಗಳಾದ ಕಾಡು, ಗಿರಿಶ್ರೇಣಿ, ನದಿ ಇತ್ಯಾದಿಗಳನ್ನು ಬಿಡಿಸುವಂತೆ ಮಾಡುವುದು ಅಥವಾ ಯುದ್ಧ ನಡೆದ ಜಾಗಗಳಲ್ಲಿ ಅಂತಹ ಚಿತ್ರಣ ಬಿಡಿಸುವುದು. ಬಡಗಿ ತಯಾರಿಸುವ ಅನೇಕ ಆಕಾರಗಳನ್ನು ಯಾವ ಪರಿಕರಗಳ ಸಹಾಯದಿಂದ ತಯಾರಿಸುತ್ತಾರೆ ಅಥವಾ ಹೇಗೆ ತಯಾರಿಸಿರುತ್ತಾರೆ. ವೀಕ್ಷಿಸಿ ಬರೆದು ನೀಡಲು ತಿಳಿಸುವುದು.

ಮೇಲ್ಕಂಡ ಚಟುವಟಿಕೆಗಳು ಯೋಜನಾ ಕಾರ್ಯವೆಂದು ಕಂಡರೂ ಕ್ಷೇತ್ರ ಭೇಟಿ, ಅನ್ವೇಷಣೆ, ಸಂದರ್ಶನ, ಅನುಗಮನ ವಿಧಾನ ಇತ್ಯಾದಿ ಬೋಧನಾ ವಿಧಾನಗಳನ್ನು ಒಳಗೊಂಡಿದೆ. ಅಂದರೆ ಒಂದು ವಿಧಾನವು ಹಲವು ವಿಧಾನಗಳನ್ನು ಒಳಗೊಂಡಿರುತ್ತದೆ.

- **ಕ್ಷೇತ್ರ ಅಧ್ಯಯನ** ನಮ್ಮ ತರಗತಿಗಳನ್ನು ಶಿಶುಕೇಂದ್ರಿತ ಮಾಡಲು ಇರುವ ಇನ್ನೊಂದು ಬೋಧನಾ ಸಾಧ್ಯತೆ. ಮಕ್ಕಳಷ್ಟೆ ಅಲ್ಲ ವಯಸ್ಕರಿಗೂ ಈ ವಿಧಾನ ಕಲಿಕೆಗೆ ಸಹಕಾರಿ ಮತ್ತು ಉಲ್ಲಾಸದಾಯಕ. ತರಗತಿಯ ಕಲಿಕೆ ಮತ್ತು ಕ್ಷೇತ್ರಮಟ್ಟದಲ್ಲಿ ಕಂಡುಬರುವ ಚಿತ್ರಣಗಳ ನಡುವೆ ಇರುವ ಸಾದೃಶ್ಯ/ವಿದೃಶ್ಯಗಳ ತಿಳುವಳಿಕೆಯನ್ನು ಕಲಿಯುವವನಿಗೆ ನೀಡುತ್ತದೆ.

ಯಾವ ಕಲಿಕಾಂಶಗಳು ಇಂತಹ ಕ್ಷೇತ್ರಭೇಟಿಗಳಿಗೆ ಅನುಕೂಲ? ತೆಗದುಕೊಳ್ಳಬೇಕಾದ ಎಚ್ಚರಿಕೆ, ಹಣಕಾಸು ಇತಿ–ಮಿತಿ, ಇತ್ಯಾದಿ ಅಂಶಗಳನ್ನು ಆಧರಿಸಿ ಕ್ಷೇತ್ರಭೇಟಿಗಳನ್ನು ಯೋಜಿಸಬಹುದು. ಉದಾಹರಣೆಗೆ ಮಾನಸ ಸರೋವರದ ಪ್ರಾಂತ್ಯದಲ್ಲಿ ಭಾರತ ಉಪಖಂಡದ 3 ದೊಡ್ಡ ನದಿಗಳು ಹುಟ್ಟುತ್ತವೆ ಎಂಬ ಸಂಗತಿ ತಿಳಿಯಲು ಕ್ಷೇತ್ರಭೇಟಿಗೆ ಮಕ್ಕಳನ್ನು ಮಾನಸ ಸರೋವರಕ್ಕೆ ಕರೆದೊಯ್ಯಲು ಸಾಧ್ಯವೆ? ಪರ್ಯಾಯವಾಗಿ ತನ್ನ ಊರಿನ ಸುತ್ತಮುತ್ತ ಇರುವ ಎತ್ತರ ಪ್ರದೇಶಗಳಿಗೆ ಮಕ್ಕಳನ್ನು ಕರೆದೊಯ್ದು ಮಳೆ ನೀರು ಹೇಗೆ ಭಿನ್ನ ಭಿನ್ನ ದಿಕ್ಕುಗಳಿಗೆ ಹರಿಯುತ್ತದೆ ಎಂದು ತಿಳಿಯಲು ಅವಕಾಶ ಮಾಡಿಕೊಡಬಹುದು.

ಎನ್‌ಸಿಎಫ್ ಆಶಯ ಅಥವಾ ಬೋಧನಾಶಾಸ್ತ್ರದ ಸಮಗ್ರ ಆಶಯ ಮಗು ತನ್ನ ನಿಕಟ ಪರಿಸರದ ಸಂಗತಿಗಳಿಂದ ಜ್ಞಾನವನ್ನು ತಿಳಿಯುತ್ತದೆ ಮತ್ತು ತನ್ನ ಜ್ಞಾನದ ಎಲ್ಲೆಯನ್ನು ವಿಸ್ತರಿಸಿಕೊಳ್ಳುತ್ತದೆ ಎಂಬುದಾಗಿದೆ. ಕ್ಷೇತ್ರಭೇಟಿಗಳು ಈ ಆಶಯಗಳನ್ನು ಈಡೇರಿಸಲು ಮುಖ್ಯ ಸಾಧನಗಳಾಗುತ್ತವೆ.

- **ಸಂದರ್ಶನ ವಿಧಾನ**ದಿಂದ ಅನೇಕ ಕೌಶಲಗಳು ಮಗುವಿಗೆ ಸಿದ್ಧಿಸುತ್ತವೆ. ಪರಿಚಿತ/ಅಪರಿಚಿತರೊಡನೆ ಸಂವಾದ, ಇತರರಿಂದ ವಿಷಯ ಹೊರತೆಗೆಯುವುದು, ಜಾಣ್ಮೆ, ಧೈರ್ಯ, ವಿಷಯಗಳ ಜೋಡಣೆ ಇತ್ಯಾದಿ. ಉದಾಹರಣೆಗೆ ಸ್ವಾತಂತ್ರ್ಯ ಹೋರಾಟ ಹೇಗೆ ನಡೆಯಿತು? ತನ್ನ ಊರಿನ ಜನರು ಇದನ್ನು ಕಂಡ ಬಗೆ ಹೇಗೆ? ಕೃಷಿಯಲ್ಲಿ ಆಗುತ್ತಿರುವ ಬದಲಾವಣೆಗಳು ಹಾಗೂ ಪ್ರಯೋಜನಗಳೇನು? ಪರಿಸರ ಹೇಗೆ 50–60 ವರ್ಷಗಳಲ್ಲಿ ಬದಲಾಗುತ್ತಿದೆ. ಚುನಾವಣೆಗಳು ಹೇಗೆ ನಡೆಯುತ್ತವೆ? ಚುನಾಯಿತ ಸದಸ್ಯರು ಏನೇನು ಕೆಲಸ ಮಾಡುತ್ತಾರೆ? ಕುಶಲ ಕರ್ಮಿಗಳು ಯಾವ ಯಾವ ತಂತ್ರಜ್ಞಾನವನ್ನು ಬಳಸುತ್ತಾರೆ? ಇಂತಹ ಅನೇಕ ಸಾಧ್ಯತೆಗಳನ್ನು ಮಗು ಈ ತಂತ್ರದ ಮೂಲಕ ತಿಳಿಯಬಹುದು.

- **ಅನ್ವೇಷಣಾ ವಿಧಾನ** ತುಂಬಾ ವ್ಯಾಪಕ ಅರ್ಥ ಹೊಂದಿದೆ. ಪೂರ್ಣ ಪ್ರಮಾಣದಲ್ಲಿ ಈ ವಿಧಾನಗಳನ್ನು ಬಳಸಬಹುದು. ನಿರ್ದೇಶಿತ ಅನ್ವೇಷನಾ ವಿಧಾನ [Guided Exploration] ಒಂದು ಅನುಸರಣಾ ಯೋಗ್ಯ ಸಾಧ್ಯತೆ.

ಉದಾಹರಣೆಗೆ ಕಬ್ಬಿಣ ಯಾವಾಗ ತುಕ್ಕು ಹಿಡಿಯುತ್ತದೆ ಮತ್ತು ಏಕೆ? ಬಟ್ಟೆಗಳು – ಬಿಸಿಲು, ನೆರಳು, ಮನೆಯೊಳಗಿನ 03 ಸನ್ನಿವೇಶಗಳಲ್ಲಿ ಯಾವಾಗ ಬೇಗ ಒಣಗುತ್ತವೆ. ಹಿಡಿದ ಸಮಯ ಎಷ್ಟು? ನಮ್ಮೂರಿನ ಜನಪದ ಹಾಡುಗಳು ಯಾವುವು [ಬೇರೆ ವಿಧಾನಗಳೂ ಇಲ್ಲಿ ಬರಬಹುದು] ದ್ಯುತಿಸಂಶ್ಲೇಷಣೆ ಕ್ರಿಯೆಯ ದರ ಯಾವಾಗ ಜಾಸ್ತಿ? ಇಂತಹ ಹಲವು ಕುತೂಹಲಗಳಿಗೆ ಮಕ್ಕಳು ಉತ್ತರವನ್ನು ಕಂಡುಕೊಳ್ಳಲು, ಅನ್ವೇಷಣೆ ನಡೆಸಲು ಮಕ್ಕಳಿಗೆ ಮಾರ್ಗದರ್ಶನ ನೀಡಬಹುದು.

- **ಅನುಗಮನ** ವಿಧಾನವಲ್ಲ, ಅದೊಂದು ಕ್ರಮ. ಅನೇಕ ವಿಧಾನಗಳ ಸಮುಚ್ಛಯ. ಇವುಗಳ ಬಳಕೆಯನ್ನು ಮಗು ಒಂದು ಜ್ಞಾನವನ್ನು ಸಾಮಾನ್ಯೀಕರಿಸಲು ಬಳಸುತ್ತದೆ. ಉದಾಹರಣೆಗೆ ಕ್ರಿಯಾಪದ, ನಾಮಪದ, ಸವರ್ಣ ದೀರ್ಘಸಂಧಿ ಇಂತಹ ಪರಿಕಲ್ಪನೆಗಳನ್ನು ಬೋಧಿಸುವಾಗ ಸಾಮಾನ್ಯವಾಗಿ ಹಲವು ಉದಾಹರಣೆ ನೀಡಿ ಅಲ್ಲಿನ ಸಾದೃಶ್ಯಗಳನ್ನು ಗಮನಿಸುವಂತೆ ತಿಳಿಸಲಾಗುತ್ತದೆ ಹಾಗೂ ಇವುಗಳ ಆಧಾರದ ಮೇಲೆ ಸಾಮಾನ್ಯ ಅಭಿಪ್ರಾಯಗಳನ್ನು ಮಗು ತಿಳಿಯುವಂತೆ ಮಾಡಲಾಗುತ್ತದೆ. ರೇಖಾಗಣಿತದ ಅನೇಕ ಪರಿಕಲ್ಪನೆಗಳನ್ನು ಮೂಡಿಸಲು ಇದು ಸಹಕಾರಿ – ಉದಾಹರಣೆಗೆ ಸಮಬಾಹು ತ್ರಿಭುಜ, ಲಂಬಕೋನ ತ್ರಿಭುಜ ಇತ್ಯಾದಿ ಅಥವಾ ಸೂತ್ರಗಳು ಹೇಗೆ ಹುಟ್ಟಿದವು ಎನ್ನುವುದನ್ನು ಅನುಗಮನ ಕ್ರಮದಿಂದ ಯಶಸ್ವಿಯಾಗಿ ಮಗುವಿಗೆ ಕಲಿಸಲು ಸಾಧ್ಯ. ವಿಜ್ಞಾನದ ಪರಿಕಲ್ಪನೆಗಳನ್ನು ಉದಾ: ಬೆಳಕು ಸರಳರೇಖೆಯಲ್ಲಿ ಚಲಿಸುವುದು, ಬೆಳಕಿನ ಪ್ರತಿಫಲದ ನಿಯಮಗಳು, ಲೋಹ, ಆಮ್ಲದ ಗುಣಗಳು, ಪರಿಕಲ್ಪನೆಗಳನ್ನು ಕಲಿಸಲು ಅನುಗಮನ ವಿಧಾನ ಸಹಕಾರಿ.
- **ಗೃಹಪಾಠಗಳು** ಕಲಿಕೆಯ ವಿಸ್ತರಣೆಗಳಾಗಬೇಕೆ ವಿನಃ ಕಲಿಕೆಯನ್ನು ಪುನರಾವರ್ತಿಸುವ ಯಾಂತ್ರಿಕ ಕ್ರಿಯೆ ಆಗಬಾರದು. ಎಲ್ಲಾ ಮಕ್ಕಳಿಗೂ ಒಂದೇ ತೆರನಾದ ಗೃಹಪಾಠ ಸಲ್ಲದು. ಮಗುವಿನ ಕಲಿಕೆಯ ವೇಗ ಹಾಗೂ ಸಾಮರ್ಥ್ಯಕ್ಕನುಗುಣವಾಗಿ ವೈವಿಧ್ಯಮಯ ಗೃಹಪಾಠ ನೀಡಿ, ತಿದ್ದಿ ತೀಡಿ ಕಲಿಕೆಯನ್ನು ಗಟ್ಟಿಗೊಳಿಸಲು ಗೃಹಪಾಠ ಒಂದು ಪ್ರಬಲ ಅಸ್ತ್ರ.
- **ಗುಂಪು ಚಟುವಟಿಕೆ** ಕಲಿಕೆಗೆ ಮತ್ತೊಂದು ಪರಿಣಾಮಕಾರಿ ತಂತ್ರ. ಕೆಲವು ಸಾಮಾನ್ಯ ಸಂಗತಿಗಳನ್ನು ಚರ್ಚಿಸಿ – ತೀರ್ಮಾನಿಸಲು ಬಳಸಬಹುದು. ಇದಕ್ಕಾಗಿ ತರಗತಿಯ ಪಠ್ಯಪುಸ್ತಕಗಳನ್ನು ಆಕಾರವಾಗಿ ಬಳಸಬಹುದು ಅಥವಾ ಗ್ರಂಥಭಂಡಾರದಲ್ಲಿ ದೊರೆಯುವ ಪುಸ್ತಕಗಳನ್ನು ಬಳಸಬಹುದು. ಭಾಷೆ–ಸಮಾಜ ಪರಿಚಯದ ತತ್ವ ಪರಿಕಲ್ಪನೆಗಳನ್ನು ಸುಲಭವಾಗಿ ಇಲ್ಲಿ ಅಳವಡಿಸಬಹುದು. ಉದಾಹರಣೆಗೆ ತ್ರಿಭುಜದ ಕೋನದ ಮೊತ್ತ, ಪೈ–ಬೆಲೆ, ಏಕದಳ/ದ್ವಿದಳಧಾನ್ಯ, ಸಸ್ಯಗಳ ಗುಣಲಕ್ಷಣಗಳು, ಪಂಚಾಯಿತಿಯ ಕರ್ತವ್ಯಗಳು, ತನ್ನ ಊರಿನ ಸಂಪನ್ಮೂಲಗಳು, ಧಾರ್ಮಿಕ ಕೇಂದ್ರಗಳು, ಜನಪದ ಕಥೆ, ಹಾಡುಗಳು ಇತ್ಯಾದಿಗಳನ್ನು ಗುಂಪು ಚಟುವಟಿಕೆಯ ಮೂಲಕ ಪರಿಣಾಮಕಾರಿಯಾಗಿ ಕಲಿಸಬಹುದು.
- **ಸೃಜನಶೀಲತೆಗೆ ಪ್ರೋತ್ಸಾಹ:–**
  - **ತರಗತಿಗೊಂದು** – ಫ್ಲಾನೆಲ್ ಬೋರ್ಡ್, ಹಿಂದಿನ ಭಾಗಗಳಲ್ಲಿ ಈ ಕುರಿತು ವಿವರಿಸಿದೆ. ಹಿರಿಯ ತರಗತಿಗಳಲ್ಲಿ ಮಕ್ಕಳ ಕೃತಿಗಳನ್ನು ಪ್ರದರ್ಶಿಸಿ, 10–15 ದಿನಗಳಿಗೊಮ್ಮೆ ಪ್ರದರ್ಶಿಕೆಗಳನ್ನು ಬದಲಾಯಿಸಿ ಉತ್ತಮ ಕೃತಿಗಳನ್ನು ಸಂಗ್ರಹಿಸಿ – ಕೈಬರಹದ ಹಸ್ತಪ್ರತಿ ಹೊರತನ್ನಿ.
  - **20 ಅಂಶಗಳ ಕಾರ್ಯಕ್ರಮ** – 2002–03ರಲ್ಲಿನ ಕಾರ್ಯಕ್ರಮಗಳನ್ನು ಜ್ಞಾಪಿಸಿಕೊಳ್ಳಿ. ತೆಗೆ ಪುಸ್ತಕ ಹೊರಗೆ, ತರಗತಿಗೊಂದು ಹಸ್ತಪ್ರತಿ. ನಾನು ಶಿಕ್ಷಕನಾದರೆ, ಗೆಳೆಯನಿಗೊಂದು ಪತ್ರ ಇಂತಹ ಸುಲಭ ತಂತ್ರಗಳನ್ನು ಬಳಸಿ ಮಕ್ಕಳು ಲವಲವಿಕೆಯಿಂದ ಕೂಡಿರುವಂತೆ ಮಾಡಿ, ಸೃಜನಶೀಲತೆಗೆ ಉತ್ತೇಜಿಸಿ.
  - **ವಿದ್ಯಾರ್ಥಿಗಳಿಂದ ಕಥೆ ಕವನ ರಚನೆ:** ವಿದ್ಯಾರ್ಥಿಗಳ ಸೃಜನಾತ್ಮಕತೆ, ಭಾಷಾ ಕೌಶಲಗಳ ಅಭಿವೃದ್ಧಿ ಮತ್ತು ಬಳಕೆಯ ಉದ್ದೇಶದಿಂದ ಹಿರಿಯ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಂದ ಅವರ ಇಚ್ಛೆಗನುಗುಣವಾಗಿ ಕಥೆಗಳನ್ನು ರಚಿಸಲು ಶಾಲಾ ಶಿಕ್ಷಕರು ಮಾರ್ಗದರ್ಶನ ನೀಡುವುದು. ಈ ಕಥೆಗಳ ಸಂಕಲನವನ್ನು ಫ್ಲಾನೆಲ್ ಬೋರ್ಡಿನಲ್ಲಿ ಪ್ರದರ್ಶಿಸುವುದು. ಉತ್ತಮವಾದ ಕೃತಿಗಳನ್ನು ಕ್ಲಸ್ಟರ್ ಹಂತದ ವಾರ್ತಾಸಂಚಿಕೆ, ಜಿಲ್ಲಾಹಂತದ ಸಂಚಿಕೆ ಮತ್ತು ಉತ್ತಮವಾದವುಗಳ ಶಿಕ್ಷಣ ವಾರ್ತೆ ಸಂಚಿಕೆಗಳಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳೊಡನೆ ಮಾಹಿತಿ ಹಂಚಿಕೊಳ್ಳುವುದು. ಮಕ್ಕಳು ಮಾಡಿದ ಇಂತಹ ಕಾರ್ಯಗಳನ್ನು ಒಂದು ಹೊತ್ತಿಗೆಯಲ್ಲಿ ಮಾಸಿಕವಾಗಿ ಮತ್ತು ವಾರ್ಷಿಕ ಸಂಚಿಕೆಯಾಗಿ ಹೊರತರುವುದು.

- **ತಿಂಗಳಿಗೊಂದು ವಿಜ್ಞಾನಪ್ರಶ್ನೆ ಕಾರ್ಯಕ್ರಮ**: ವಿಜ್ಞಾನದಲ್ಲಿನ ಕಲಿಕಾಂಶಗಳು ಅಭ್ಯಾಸ ಚಟುವಟಿಕೆಯಾಗಿ, ನಿಜಜೀವನಕ್ಕೆ ಅನ್ವಯಿಸುವ ಚಟುವಟಿಕೆಯಾಗಿ, ಅನ್ವೇಷಣೆ ಮತ್ತು ಪ್ರಯೋಗಾತ್ಮಕ ಅಂಶಗಳನ್ನು ಆಧರಿಸಿ ಸ್ಪಷ್ಟ ಮತ್ತು ಸ್ಫುಟವಾದ ಪ್ರಶ್ನೆ ತುಣುಕನ್ನು ಪ್ರಶ್ನಾರೂಪದಲ್ಲಿ ಪ್ರತಿ ತಿಂಗಳಿಗೊಂದರಂತೆ ಪ್ರಶ್ನೆಯನ್ನು ಪ್ರತಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಕ್ಲಸ್ಟರ್ ಮ್ಯಾಗಜಿನ್ ಮೂಲಕ ಮುದ್ರಿಸುವುದು. ಈ ಅಂಶಗಳನ್ನು ಶಾಲಾ ಪ್ರಾರ್ಥನಾ ವೇಳೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳುವುದು.

ಈ ಚಟುವಟಿಕೆಗಳಿಂದ ನಮ್ಮ ತರಗತಿಗಳಲ್ಲಿ ಕೆಳಕಂಡ ಬದಲಾವಣೆಗಳನ್ನು ಕಾಣಬಹುದಾಗಿದೆ.

- ಮಕ್ಕಳ ಮುಖದಲ್ಲಿ ಮಂದಹಾಸ ಕಾಣುತ್ತದೆ.
- ಮಕ್ಕಳು ಲವಲವಿಕೆಯಿಂದ ಇರುತ್ತಾರೆ.
- ಯುಕ್ತ ಪ್ರತಿಕ್ರಿಯೆಯನ್ನು ಮಕ್ಕಳು ತತ್‌ಕ್ಷಣ ನೀಡುತ್ತಾರೆ.
- ಮಕ್ಕಳು ಶಿಕ್ಷಕರೊಂದಿಗೆ ಗೌರವದಿಂದ ವರ್ತಿಸುತ್ತಾರೆ. ಆದರೆ ಭಯದಿಂದ ಅಲ್ಲ.
- ಯಾವ ಮಕ್ಕಳಲ್ಲಿಯೂ ಹಿಂಜರಿಕೆ ಕಾಣದು, ಅಧ್ಯಾಪಕರನ್ನು ಪ್ರಶ್ನಿಸುತ್ತಾರೆ. ಸಹಪಾಠಿಗಳೊಂದಿಗೆ ಚರ್ಚಿಸುತ್ತಾರೆ.

**ಬಹುಮಾನಗಳು**

ಬಹುಮಾನಗಳನ್ನು ನೀಡುವ ಉದ್ದೇಶ ಒಳ್ಳೆಯ ಕಾರ್ಯವನ್ನು ಗುರುತಿಸಿ ಗೌರವಿಸುವುದಾದರೆ, ಬಹುಮಾನ ಪಡೆದ ವ್ಯಕ್ತಿಗೆ ಇದು ಮೀಟುಗೋಲಾದರೆ ಇತರರ ಕಾರ್ಯಗಳಿಗೆ ಖಚಿತ ನೆರವನ್ನು ಒದಗಿಸಲು ಸಹಾಯಕವಾಗುತ್ತದೆ. ಹಾಗಾಗಿ ಇಲಾಖೆಯಲ್ಲಿ ಒಳ್ಳೆಯ ಕೆಲಸವನ್ನು ಗುರುತಿಸಿ ಗೌರವಿಸುವುದು – ನಡೆಯುತ್ತಾ ಬಂದಿದೆ.

**ಶಿಕ್ಷಕರ ಕಲ್ಯಾಣ ನಿಧಿಯಿಂದ:**

| ಕ್ರ. ಸ | ವಿಭಾಗ | ಹಂತ | ಪ್ರಶಸ್ತಿಗಳ ಸಂಖ್ಯೆ | ಪ್ರತಿ ಪ್ರಶಸ್ತಿ ಮೊತ್ತ | ಷರಾ |
|---|---|---|---|---|---|
| 1 | ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರಿಗೆ | ಜಿಲ್ಲಾಪ್ರಶಸ್ತಿ | 390 | ರೂ 3,000/– | ಶಿಕ್ಷಕರು ಅರ್ಜಿ ಸಲ್ಲಿಸುವಂತಿಲ್ಲ |
| 2. | ಶೈಕ್ಷಣಿಕ/ವೈಜ್ಞಾನಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಶಿಕ್ಷಕರಿಗೆ ವಿಶೇಷ ಪ್ರಶಸ್ತಿ | ರಾಜ್ಯಪ್ರಶಸ್ತಿ | 08 | ರೂ 5,000/– | ಜುಲೈ ಆಗಸ್ಟ್ ತಿಂಗಳಲ್ಲಿ ಅರ್ಜಿ ಸಲ್ಲಿಸಬೇಕು |
| 3. | ರಾಜೀವ್‌ಗಾಂಧಿ ಸ್ಮಾರಕ ಅತ್ಯುತ್ತಮ ವಿಜ್ಞಾನ ಶಿಕ್ಷಕ ಪ್ರಶಸ್ತಿ | ರಾಷ್ಟ್ರಪ್ರಶಸ್ತಿ | 02 | ರೂ.12,000/– | ನೇರವಾಗಿ ಅಥವಾ ಯುಕ್ತ ದ್ವಾರದ ಮೂಲಕ |
| **ಆಯುಕ್ತಾಲಯದ ವತಿಯಿಂದ** | | | | | |
| 1 | ಅತ್ಯುತ್ತಮ ಶಿಕ್ಷಕರಿಗೆ ಇಲಾಖೆಯಿಂದ ರಾಜ್ಯಪ್ರಶಸ್ತಿ | ರಾಜ್ಯಪ್ರಶಸ್ತಿ | ಪ್ರಾಥಮಿಕ–20 ಪ್ರೌಢ–10 | ರೂ.10,000 | ಜೂನ್ ತಿಂಗಳಲ್ಲಿ ಅರ್ಹ ಶಿಕ್ಷಕರನ್ನು ಗುರುತಿಸಬೇಕು |
| 2 | ರಾಜ್ಯದ ಅತ್ಯುತ್ತಮ ಶಿಕ್ಷಕರಿಗೆ ಕೇಂದ್ರ ಸರ್ಕಾರದಿಂದ ರಾಷ್ಟ್ರ ಪ್ರಶಸ್ತಿ | ರಾಷ್ಟ್ರಪ್ರಶಸ್ತಿ | ಪ್ರಾಥಮಿಕ–9 ಪ್ರೌಢ–4 (ವಿಶೇಷ–2) | ರೂ.25,000 | ಜೂನ್ ತಿಂಗಳಲ್ಲಿ ಅರ್ಹ ಶಿಕ್ಷಕರನ್ನು ಗುರುತಿಸಬೇಕು |

## ಶಾಲಾ ಹಂತದಲ್ಲಿ ಗುಣಾತ್ಮಕ ಉಸ್ತುವಾರಿ ನಮೂನೆಗಳು

**ಮಾರ್ಗಸೂಚಿಗಳು:**

ಶಾಲೆ/ಜನವಸತಿ ಹಂತದಲ್ಲಿ ಮೂರು ನಮೂನೆಗಳಿರುತ್ತವೆ. ಅವುಗಳೆಂದರೆ,

1. ಪ್ರಾಥಮಿಕ [ಎಲಿಮೆಂಟರಿ] ಹಂತದಲ್ಲಿ ವಿದ್ಯಾರ್ಥಿಗಳ ಹಾಜರಾತಿ [ವರದಿ ಮಾಡುವ ನಮೂನೆ]: SLF-I
2. ಸಮುದಾಯದ ಗ್ರಹಿಕೆಗಳು–ಸಮುದಾಯದ ಮುಖಂಡರು/ಎಸ್‌ಡಿಎಂಸಿ ಸದಸ್ಯರು [ದಾಖಲೆ ಮಾಡುವ ನಮೂನೆ]: SLF-II
3. ವಿದ್ಯಾರ್ಥಿಗಳ ಮೌಲ್ಯಮಾಪನ [ವರದಿ ಮಾಡುವ ನಮೂನೆ]: SLF-III

### ➢ ಶಾಲಾ ಹಂತದ ನಮೂನೆ [SLF-I]

ಮಕ್ಕಳ ಶೈಕ್ಷಣಿಕ ಸ್ಥಿತಿ: ಪ್ರಾಥಮಿಕ ಹಂತದಲ್ಲಿ ವಿದ್ಯಾರ್ಥಿಗಳ ದಾಖಲಾತಿ ಮತ್ತು ಹಾಜರಾತಿಯ ಸ್ಥಿತಿ
[ವರದಿ ಮಾಡುವ ನಮೂನೆ]

ಈ ನಮೂನೆಯು ಪ್ರಾಥಮಿಕ [ಎಲಿಮೆಂಟರಿ] ಹಂತದ ಮಕ್ಕಳ ಹಾಜರಾತಿಯನ್ನು ಒಳಗೊಂಡಿದೆ. ಈ ನಮೂನೆಯು ಎರಡು ವಿಧದ ಮಾಹಿತಿಗಳನ್ನು ಸಂಗ್ರಹಿಸುತ್ತದೆ. ಶಾಲಾ ರಿಜಿಸ್ಟರ್‌ನಂತೆ ವಿದ್ಯಾರ್ಥಿಗಳ ದಾಖಲಾತಿ ಮತ್ತು ಭೇಟಿ ನೀಡಿದ ಸಂದರ್ಭದಲ್ಲಿ ತರಗತಿಯಲ್ಲಿನ ಮಕ್ಕಳ ನೈಜ ಹಾಜರಾತಿ. ಇಂತಹ ವರದಿ ಮಾಡುವ ಅಧಿಕಾರಿಯು ಶಾಲಾಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ [ಎಸ್‌ಡಿಎಂಸಿ/ತಾಯಿ ಶಿಕ್ಷಕ ಸಂಘ/ಎಂಟಿಎ] ಅಥವಾ ಕ್ಷೇತ್ರದ ಸನ್ನಿವೇಶಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರದಿಂದ ಪ್ರಕಟಿಸಿರುವ ಇತರೆ ಯಾವುದೇ ಸಮುದಾಯ ಹಂತದ ಗುಂಪಿನ ಸದಸ್ಯನಾಗಿರಬಹುದು. ಈ ಮಾಹಿತಿಯನ್ನು ತ್ರೈಮಾಸಿಕವಾಗಿ ಶಾಲೆಗಳಿಂದ ಸಿಆರ್‌ಪಿ ಗಳು ಸಂಗ್ರಹಿಸುಉದು. ಮಕ್ಕಳ ದಾಖಲಾತಿ ಮತ್ತು ತರಗತಿಯಲ್ಲಿ ವಿದ್ಯಾರ್ಥಿಗಳ ನೈಜ ಹಾಜರಾತಿಯ ನಡುವೆ ಶೇಕಡಾ 12–15ಕ್ಕಿಂತ ಹೆಚ್ಚು ವ್ಯತ್ಯಾಸವಿದ್ದಲ್ಲಿ, ಎಸ್‌ಡಿಎಂಸಿ/ಎಂಟಿಎ ಅಥವಾ ಇತರೆ ಯಾವುದೇ ಸ್ಥಳೀಯ ಗುಂಪಿನಿಂದ ಸಮುದಾಯದ ಹಂತದಲ್ಲಿಯೇ ಪರಿಹರಿಸಿಕೊಳ್ಳಬಹುದು. ಅದೇ ಮಕ್ಕಳು ಪ್ರತಿ ಭೇಟಿಯಲ್ಲಿಯೂ ಗೈರು ಹಾಜರಾಗುತ್ತಿರುವುದು ಕಂಡುಬಂದಲ್ಲಿ, ಅದನ್ನೂ ಸಹ ಗಮನಿಸುವುದು ಹಾಗೂ ಈ ಸಮಸ್ಯೆಗಳನ್ನು ನಂತರ ಗ್ರಾಮ ಮಟ್ಟದ ಸಭೆಗಳಲ್ಲಿ ಚರ್ಚಿಸುವ ಅಗತ್ಯವಿದೆ.

### ➢ ಶಾಲಾ ಹಂತದ ನಮೂನೆ [SLF-II]

ಸಮುದಾಯದ ಗ್ರಹಿಕೆಗಳು: ಸಮುದಾಯದ ಮುಖಂಡರು/ಶಾಲಾಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿಯ ಸದಸ್ಯರ ಅಭಿಪ್ರಾಯವನ್ನು ದಾಖಲಿಸುವ ನಮೂನೆ

ಈ ನಮೂನೆಯು ಎರಡು ವಿಧದ ಮಾಹಿತಿಗಳನ್ನು ಒಳಗೊಂಡಿರುತ್ತದೆ.

1. ಸಾಮಾನ್ಯ ಮಾಹಿತಿ
2. ಸಮುದಾಯದ ಮುಖಂಡರು / ಎಸ್‌ಡಿಎಂಸಿ ಸದಸ್ಯರುಗಳ ಅಭಿಪ್ರಾಯ

- ಸಾಮಾನ್ಯ ಮಾಹಿತಿಯ ಭಾಗ–1, ಶಾಲೆ/ಗ್ರಾಮ, ಎಸ್‌ಡಿಎಂಸಿ ಸದಸ್ಯರುಗಳ ಹೆಸರು, ಎಸ್‌ಡಿಎಂಸಿ ಸಭೆಗಳನ್ನು ನಡೆಸುವ ಅವಧಿ, ಸಭೆಗಳಲ್ಲಿ ಹಾಜರಾದ ಸದಸ್ಯರುಗಳ ಸಂಖ್ಯೆ, ಗುರುತಿಸಲಾದ ಪ್ರಮುಖ ಸಮಸ್ಯೆಗಳು ಮತ್ತು ಚರ್ಚಿಸಲಾದ ಪರಿಹಾರಗಳಂತಹ ಮೂಲಭೂತ ಅಂಕಿ–ಅಂಶಗಳನ್ನು ಒಳಗೊಂಡಿರುತ್ತದೆ.
- ಭಾಗ–2, ಶಾಲೆಯ ಕಾರ್ಯನಿರ್ವಹಣೆಯ ಬಗ್ಗೆ ಸಮುದಾಯದ ಮುಖಂಡರು ಮತ್ತು ಸಮುದಾಯ ಸದಸ್ಯರು/ಎಸ್‌ಡಿಎಂಸಿ ಸದಸ್ಯರುಗಳ ಅಭಿಪ್ರಾಯಗಳನ್ನು ಪಡೆಯಲು ಸಂಬಂಧಿಸಿದ್ದಾಗಿರುತ್ತದೆ. ಇದು ಶಾಲಾ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಭಾಗಗಳನ್ನು ಒಳಗೊಂಡಿದೆ. ಎಸ್‌ಡಿಎಂಸಿ ಸಭೆಗಳಲ್ಲಿ ವಿಷಯಗಳನ್ನು ಚರ್ಚಿಸಿದ ನಂತರ, ಅಭಿಪ್ರಾಯಗಳನ್ನು ವೈಯಕ್ತಿಕವಾಗಿ [ಪ್ರತ್ಯೇಕ ನಮೂನೆಗಳು] ಅಥವಾ ಎಲ್ಲಾ ಸದಸ್ಯರಿಂದ ಒಂದೇ ನಮೂನೆಯಲ್ಲಿ ಭರ್ತಿ ಮಾಡಬಹುದು. ಎಸ್‌ಡಿಎಂಸಿ/ ಸಮುದಾಯದ ಮುಖಂಡರುಗಳಿಂದ ಗುರುತಿಸಲ್ಪಟ್ಟ ಪ್ರಮುಖ ಸಮಸ್ಯೆಗಳನ್ನು ಮಾಸಿಕ ಸಭೆಗಳಲ್ಲಿ ಚರ್ಚಿಸಬಹುದಾಗಿದೆ ಮತ್ತು ಶಾಲೆಯ ಅಭಿವೃದ್ಧಿಗಾಗಿ ಜಂಟಿ ಕಾರ್ಯವನ್ನು ಕೈಗೊಳ್ಳಬಹುದಾಗಿದೆ.

- **ಶಾಲಾ ಹಂತದ ನಮೂನೆ [SLF-III]**

ವಿದ್ಯಾರ್ಥಿಗಳ ಮೌಲ್ಯಮಾಪನ [ವರದಿ ಮಾಡುವ ನಮೂನೆ]

ಈ ನಮೂನೆಗಳನ್ನು ಮುಖ್ಯಶಿಕ್ಷಕರು/ಶಿಕ್ಷಕರು ತ್ರೈಮಾಸಿಕವಾಗಿ ಭರ್ತಿಮಾಡಿ, ಸಿಆರ್‌ಸಿಗೆ ವರದಿ ಮಾಡುವುದು. ಈ ನಮೂನೆಯು 4 ಭಾಗಗಳನ್ನು ಹೊಂದಿದೆ. ಅವುಗಳೆಂದರೆ;

| | |
|---|---|
| ಭಾಗ–ಎ | ಸಾಮಾನ್ಯ ಮಾಹಿತಿ |
| ಭಾಗ–ಬಿ | ವಿದ್ಯಾರ್ಥಿಗಳ ಸಾಧನೆಯ ತರಗತಿವಾರು ವಿವರಗಳು |
| ಭಾಗ–ಸಿ | ಶಾಲೆಯಲ್ಲಿ ಕೈಗೊಳ್ಳಲಾದ ಪಠ್ಯೇತರ ಚಟುವಟಿಕೆಗಳು |
| ಭಾಗ–ಡಿ | ವರ್ಗವಾರು ಪರಿಹಾರಾತ್ಮಕ ಕಾರ್ಯಗಳು |

- ಶ್ರೇಣಿಗಳಲ್ಲಿ ತರಗತಿವಾರು ಮಕ್ಕಳ ಸಾಧನೆ [ಶ್ರೇಣಿ ಎ, ಬಿ, ಸಿ, ಡಿ ಮತ್ತು ಇ]ಯನ್ನು ಸಂಬಂಧಿಸಿದ ತರಗತಿ ಶಿಕ್ಷಕರಿಂದ, ಶಾಲಾ ದಾಖಲೆಗಳಿಂದ ಸಂಗ್ರಹಿಸಬಹುದು.
- ಈ ಚಟುವಟಿಕೆಯ ಮೂಲಕ, ಸಮಂಜಸವಾದ ಪರಿಹಾರತ್ಮಕ ಕಾರ್ಯಗಳೊಂದಿಗೆ ಗಮನಹರಿಸಬೇಕಾದ ವಿಷಯಗಳನ್ನು ಕಡಿಮೆ ಸಾಧನೆಯ ಕ್ಷೇತ್ರಗಳನ್ನು ಗುರುತಿಸುವುದು ಸುಲಭವಾಗುತ್ತದೆ.
- ಗುಣಾತ್ಮಕ ಪ್ರಾಥಮಿಕ [ಎಲಿಮೆಂಟರಿ] ಶಿಕ್ಷಣವನ್ನು ಖಾತರಿಪಡಿಸುವ ಸಲುವಾಗಿ ಜ್ಞಾನ ಮತ್ತು ಮನೋಯಾಂತ್ರಿಕ ಆಯಾಮಗಳನ್ನು ಸಹ ಒಳಗೊಂಡಿರುವ ಚಟುವಟಿಕೆಗಳ ಸೇರ್ಪಡೆಯ ಅಗತ್ಯವಿದೆ.
- ವರದಿಯ ನಮೂನೆಗಳಲ್ಲಿ ಭರ್ತಿಮಾಡಿ ಅಗತ್ಯ ಸಂಕಲನ, ವಿಶ್ಲೇಷಣೆ, ಸಮರ್ಪಕ ಕಾರ್ಯ ಹಾಗೂ ಊರ್ಧ್ವಮುಖ ಪ್ರಸಾರಣೆಗಾಗಿ ಸಿಆರ್‌ಸಿ ಸಂಯೋಜಕರಿಗೆ ತ್ರೈಮಾಸಿಕವಾಗಿ ಕಳುಹಿಸಿಕೊಡುವುದು.

ಶಾಲಾಹಂತದ ನಮೂನೆಗಳ ಪಕ್ಷಿ ನೋಟ

| ಕ್ರ ಸಂ | ನಮೂನೆ ಕೋಡ್ | ಆವರ್ತನ | ಆಯಾಮಗಳು /ಕ್ಷೇತ್ರ | ಭರ್ತಿ ಮಾಡಬೇಕಾದವರು | ಇವರಿಗೆ ಕಳುಹಿಸುವುದು |
|---|---|---|---|---|---|
| 1 | [SLF-I] | ತ್ರೈಮಾಸಿಕ | ಹಾಜರಾತಿ | ಎಸ್‌ಡಿಎಂಸಿ/ ಸಮುದಾಯ/ ಎಂಟಿಎ ಸದಸ್ಯರು | ಸಿಆರ್‌ಸಿ |
| 2 | [SLF-II] | ವಾರ್ಷಿಕ | ಸಮುದಾಯದ ಗ್ರಹಿಕೆ | ಎಸ್‌ಡಿಎಂಸಿ/ ಸಮುದಾಯದ ಮುಖಂಡರು | ಕಳುಹಿಸಬೇಕಾಗಿಲ್ಲ |
| 3 | [SLF-III] | ತ್ರೈಮಾಸಿಕ | ವಿದ್ಯಾರ್ಥಿಗಳ ಮೌಲ್ಯಮಾಪನ | ಮುಖ್ಯಶಿಕ್ಷಕ/ಶಿಕ್ಷಕರು | ಸಿ.ಆರ್.ಸಿ |

ಭರ್ತಿ ಮಾಡಿದಂತಹ ಪ್ರತಿ ನಮೂನೆಯ ಒಂದು ಪ್ರತಿಯನ್ನು ಶಾಲಾಹಂತದಲ್ಲಿ ಇಟ್ಟುಕೊಳ್ಳುವುದು.

## ಮೌಲ್ಯಮಾಪನ

ಮೌಲ್ಯಮಾಪನ ಎಂಬ ಪದದಲ್ಲಿ ಮಗುವಿನ ಕಲಿಕೆಯ "ಮಾಪನ" ಎಂಬ ಅರ್ಥಕ್ಕಿಂತ ವ್ಯಾಪಕವಾದ ಧ್ವನಿ ಇದೆ. ಇವು ಕೇವಲ ಮಾಪಿಸಿ ಬೆಲೆ ಕಟ್ಟುವುದು ಎಂಬ ಅರ್ಥವಲ್ಲ. ಬೆಲೆ ಕಟ್ಟಿದ ತರುವಾಯ ಈ ಬೆಲೆಯು ಏಕೆ? ಅದು ಹೆಚ್ಚಾಗಬಾರದಾಗಿತ್ತೆ? ಏನು ಕಾರಣ? ಕಲಿಯುವ ವಿಷಯದ ಕಾಠಿಣ್ಯ ಮಟ್ಟವೇ, ಬೋಧನಾ ವಿಧಾನವೇ; ಮಾಪನಕ್ಕೆ ಬಳಸಿದ ಸಾಧನಗಳಲ್ಲಿನ ಲೋಪಗಳೇ, ಮೌಲ್ಯಮಾಪನ ಕ್ರಮವೇ ಇತ್ಯಾದಿ ಪತ್ತೆಹಚ್ಚಿ, ಪರಿಹಾರ ಕ್ರಮಗಳನ್ನು ಕೈಗೊಳ್ಳುವ ಒಟ್ಟು ಚಟುವಟಿಕೆಗಳು ಮೌಲ್ಯಮಾಪನ ಎಂಬ ಪದದಲ್ಲಿ ಇವೆ. ಇದು ವ್ಯಾಪಕ ಮತ್ತು ನಿರಂತರವಾಗಿ ಇರಬೇಕೆಂದು ಮೌಲ್ಯಮಾಪನದ ಇನ್ನೊಂದು ನಿರೀಕ್ಷೆ. ಅಂದರೆ ಮಗುವಿನ ಬೌದ್ಧಿಕ ಮನೋಭಾವನಾತ್ಮಕ ಕೌಶಲ ರೂಢಿಸಿಕೊಂಡಿರುವ ಮೌಲ್ಯಗಳನ್ನು ನಿರಂತರವಾಗಿ ಮೂಡಿಸಿ ಕೊರತೆಯನ್ನು ತುಂಬುತ್ತಾ ಹೋಗುವುದು ಮೌಲ್ಯಮಾಪನದ ಒಟ್ಟಾರೆ ನಿರೀಕ್ಷೆ.

1 ರಿಂದ 4ನೇ ತರಗತಿಯವರೆಗೆ ಸಾಮರ್ಥ್ಯಾಧಾರಿತ, ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನವನ್ನು ಮಾಡಬೇಕು. ಪ್ರತಿಯೊಂದು ತರಗತಿಗೆ ಸಂಬಂಧಿಸಿದಂತೆ, ವಿವಿಧ ವಿಷಯಗಳಲ್ಲಿ ನಿರ್ದಿಷ್ಟ ಕ್ಷೇತ್ರಗಳನ್ನು ಗುರುತಿಸಲಾಗಿದೆ.

**ಸಾಮರ್ಥ್ಯ:**

ಪ್ರತಿಯೊಂದು ಕ್ಷೇತ್ರದಲ್ಲಿ ಮಗು ಕಲಿಯಬೇಕಾದ ಕನಿಷ್ಠ ಅಂಶಗಳನ್ನು ಸಾಮರ್ಥ್ಯ ಎನ್ನುತ್ತೇವೆ. ಉದಾ:- ಭಾಷೆಯಲ್ಲಿ ಆಲಿಸುವುದು ಒಂದು ಕ್ಷೇತ್ರವಾಗಿದೆ. ಇದರಲ್ಲಿ "ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸ ಗೀತೆಗಳು ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವುದು" ಎಂಬುದು ಒಂದು ಸಾಮರ್ಥ್ಯವಾಗಿದೆ. ಪ್ರತಿಯೊಂದು ಮಗು ನಿಗದಿಪಡಿಸಿರುವ ಪ್ರತಿಯೊಂದು ಸಾಮರ್ಥ್ಯವನ್ನು ನಿಗದಿಪಡಿಸಿದ ಸಮಯದಲ್ಲಿ ಪ್ರಭುತ್ವ ಮಟ್ಟದಲ್ಲಿ ಅಂದರೆ ಪೂರ್ಣಪ್ರಮಾಣದಲ್ಲಿ ಸಾಮರ್ಥ್ಯವನ್ನು ಗಳಿಸುವಂತೆ ಮಾಡಬೇಕು.

**ಗಮನಿಸಬೇಕಾದ ಅಂಶಗಳು:**

- 1 ರಿಂದ 4ನೆಯ ತರಗತಿಯವರೆಗೆ ಸಾಮರ್ಥ್ಯಾಧಾರಿತ ಮೌಲ್ಯಮಾಪನ ಮಾಡಬೇಕಿರುವುದರಿಂದ ಇಲ್ಲಿ ಅಂಕಗಳನ್ನು ನೀಡಿ ಪರೀಕ್ಷೆ ಮಾಡಕೂಡದು.
- 1-4ನೇ ತರಗತಿಯವರೆಗೆ ಈಗಿರುವ ಸಾಮರ್ಥ್ಯಾಧಾರಿತ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನವನ್ನು ಮುಂದುವರೆಸಲಾಗಿದೆ.
- 5-9ನೇ ತರಗತಿಯವರೆಗೆ ಪ್ರತಿ ಸೆಮಿಸ್ಟರ್ ಅವಧಿಯಲ್ಲಿ ಒಂದೊಂದು ಕಿರುಪರೀಕ್ಷೆ ನಡೆಸಬೇಕು. ಅಂದರೆ 1ನೇ ಕಿರು ಪರೀಕ್ಷೆಯನ್ನು ಜುಲೈ ಅಂತ್ಯದಲ್ಲಿ ಹಾಗೂ 2ನೇ ಕಿರು ಪರೀಕ್ಷೆಯನ್ನು ಡಿಸೆಂಬರ್‌ನಲ್ಲಿ ನಡೆಸಬೇಕು. ಪ್ರತಿ ವಿಷಯದ ಕಿರುಪರೀಕ್ಷೆಗೆ 40 ಅಥವಾ 45 ನಿಮಿಷಗಳ ಒಂದು ಅವಧಿಯನ್ನು ಬಳಸಿಕೊಳ್ಳಬೇಕು. ಶೇ.50ರಷ್ಟು ವಸ್ತುನಿಷ್ಠ [ಬಹು ಆಯ್ಕೆ] ಪ್ರಶ್ನೆಗಳು ಹಾಗೂ ಶೇ.50ರಷ್ಟು ಕಿರು ಉತ್ತರ ಪ್ರಶ್ನೆಗಳು ಇರಬೇಕು.

  ಈ ಕಿರುಪರೀಕ್ಷೆಯ ಗರಿಷ್ಠ ಅಂಕಗಳು 25 ಆಗಿದ್ದು ಈ ಅಂಕಗಳನ್ನು ವಿದ್ಯಾರ್ಥಿಗಳ ತೇರ್ಗಡೆಯಾದ ಮಾನದಂಡಕ್ಕೆ ಪರಿಗಣಿಸುವಂತಿಲ್ಲ. ಆದರೆ, ಈ ಅಂಕಗಳನ್ನು ಶಿಕ್ಷಕರು ತಮ್ಮ ವೈಯಕ್ತಿಕ ಅಂಕವಹಿಯಲ್ಲಿ ನಮೂದಿಸಿಕೊಳ್ಳಬೇಕು.
- ಮೌಲ್ಯಮಾಪನವು ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತೇಜಿಸುವುದರೊಂದಿಗೆ ಮಕ್ಕಳಲ್ಲಿರುವ ಸೃಜನಶೀಲತೆಯನ್ನು ಪರೀಕ್ಷಿಸುವಂತಿರಬೇಕು.
- ಸಾಮರ್ಥ್ಯಾಧಾರಿತ ಮೌಲ್ಯಮಾಪನವನ್ನು ಪಠ್ಯದಲ್ಲಿರುವ ಸಾಮರ್ಥ್ಯಕ್ಕನುಗುಣವಾಗಿ ಸಾಮಗ್ರಿಗಳನ್ನು [ಉದಾ:- ಪ್ರಶ್ನೆಗಳು, ಮಾದರಿಗಳು, ನಕ್ಷೆಗಳು, ಚಿತ್ರಗಳು, ಚಟುವಟಿಕೆಗಳು] ರಚಿಸಿಕೊಂಡು ಮಾಡಬೇಕು.
- ಮೌಲ್ಯಮಾಪನ ಸಂದರ್ಭದಲ್ಲಿ ಸಾಮರ್ಥ್ಯವನ್ನು ಪರೀಕ್ಷಿಸುವಂತಹ ಪ್ರಶ್ನೆ/ಚಟುವಟಿಕೆಗಳಿಗೆ ಮಹತ್ವ ನೀಡಬೇಕೇ, ವಿನಃ ಪಠ್ಯವಿಷಯ ತುಂಬಾ ಪ್ರಧಾನವಾಗಬಾರದು.
- ಪ್ರಗತಿಪತ್ರದಲ್ಲಿ ಮಕ್ಕಳ ಕಲಿಕೆಯನ್ನು ದೃಢಪಡಿಸಿಕೊಂಡು ನಂತರವೇ "ಗಳಿಸಿದೆ" ಎಂದು ನಮೂದಿಸುವುದು. ಮೌಲ್ಯಮಾಪನ ಮಾಡಿದ ನಂತರ ಫಲಿತಾಂಶವನ್ನು ವಿಶ್ಲೇಷಣೆ ಮಾಡಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಿಹಾರ ಬೋಧನೆ ಕೈಗೊಂಡು ಮಕ್ಕಳು ನಿಗದಿತ ಅವಧಿಯಲ್ಲಿ ಸಾಮರ್ಥ್ಯ ಗಳಿಸುವಂತೆ ಪ್ರೇರೇಪಿಸಬೇಕು. ಪೂರ್ಣವಾಗಿ

ಸಾಮರ್ಥ್ಯಗಳನ್ನು ಗಳಿಸದೇ ಇರುವ ವಿದ್ಯಾರ್ಥಿಗಳಿಗೆ ಪರಿಹಾರ ಬೋಧನೆಯ ಸಂದರ್ಭದಲ್ಲಿ ವಿವಿಧ ಚಟುವಟಿಕೆಗಳ ಮೂಲಕ ಸಾಮರ್ಥ್ಯ ಗಳಿಸುವಂತೆ ಪ್ರಯತ್ನಿಸಬೇಕು.

➢ ಮೌಲ್ಯಮಾಪನವು ಕೇವಲ ನೆನಪಿನಶಕ್ತಿಯನ್ನು ಪರೀಕ್ಷಿಸುವಂತಿರದೇ, ಗಳಿಸಿದ ಸಾಮರ್ಥ್ಯಗಳನ್ನು ಒರೆಗೆ ಹಚ್ಚುವಂತಿರಬೇಕು. ಮಕ್ಕಳ ಪ್ರಗತಿಯನ್ನು ಮಕ್ಕಳೇ ದಾಖಲಿಸಲು ಅವಕಾಶ ಮಾಡಿ ಹಾಗೂ ಕ್ರೋಢೀಕೃತ ಪ್ರಗತಿ ತಃಖ್ತೆಯಲ್ಲಿ ನಮೂದಿಸಬೇಕು. ಕ್ರೋಢೀಕೃತ /ಸಂಚಿತ ಅಂಕದಾಖಲೆ ಒಂದು ಸ್ಥಾಯಿ ದಾಖಲೆ.

**ವಿದ್ಯಾರ್ಥಿಯ ಸ್ವಯಂಮೌಲ್ಯಮಾಪನ ದಾಖಲೆ:-**

05 ರಿಂದ 08ನೇ ತರಗತಿಯವರೆಗಿನ ವಿದ್ಯಾರ್ಥಿಗಳು ತಮ್ಮ ಕಲಿಕೆಯನ್ನು ತಾವು ಸ್ವಯಂಮೌಲ್ಯಮಾಪನ ಮಾಡಿಕೊಳ್ಳುವಂತೆ ವ್ಯವಸ್ಥೆ ಮಾಡಬೇಕು. ವಿದ್ಯಾರ್ಥಿಗಳು ಭಾಷೆ ಮತ್ತು ಜ್ಞಾನ ವಿಷಯಗಳಲ್ಲಿ ಸ್ವಯಂ ಮೌಲ್ಯಮಾಪನ ಮಾಡಿಕೊಳ್ಳಲು ಶಾಲೆ ವ್ಯವಸ್ಥೆ ಮಾಡಬೇಕು. ಅಧ್ಯಾಯ ಬೋಧನೆ ಮುಗಿದು, ಪರೀಕ್ಷೆ ನಡೆದ ಬಳಿಕ ವಿದ್ಯಾರ್ಥಿಗಳು ಆ ಅಧ್ಯಾಯದ ಕಲಿಕಾಂಶಗಳನ್ನು ಕಲಿತಿರುವ ಕುರಿತು ಸ್ವಯಂ ಮೌಲ್ಯಮಾಪನ ಮಾಡಿಕೊಳ್ಳುತ್ತಾರೆ. ಇದಕ್ಕಾಗಿ ಒಂದು ಹೊತ್ತಿಗೆಯನ್ನು ತರಗತಿವಾರು ರೂಪಿಸಿ ಎಲ್ಲಾ ಪರೀಕ್ಷಾ ವಿಷಯಗಳಲ್ಲಿ ಕೆಳಗಿನ ನಮೂನೆಯಂತೆ ರಚಿಸುವುದು. ಈ ಹೊತ್ತಿಗೆ ತರಗತಿಯ ಶಿಕ್ಷಕರ ಬಳಿ ಇರುತ್ತದೆ. ಇತರೆ ಶಿಕ್ಷಕರು ಅಗತ್ಯವೆನಿಸಿದಾಗ ಪಡೆದು, ಬಳಸಿ ಶಿಕ್ಷಕರಿಗೆ ಹಿಂದಿರುಗಿಸಬೇಕು. ಈ ಹೊತ್ತಿಗೆಯಲ್ಲಿ ಮುಂದಿನಂತೆ ನಮೂದನೆಗಳು ಇರುವಂತೆ ವ್ಯವಸ್ಥೆಗೊಳಿಸುವುದು. ಇದು ವಿದ್ಯಾರ್ಥಿಯು ಕಲಿಕೆಯಲ್ಲಿ ತೊಡಗಲು ಪ್ರೋತ್ಸಾಹಿಸುತ್ತದೆ ಮತ್ತು ತಾನು ಯಾವ ಮಟ್ಟದಲ್ಲಿದ್ದೇನೆ ಎಂದು ತಿಳಿಯಲು ನೆರವಾಗುತ್ತದೆ. ಈ ಚಟುವಟಿಕೆಯಿಂದ ವಿದ್ಯಾರ್ಥಿಗಳು ಕಲಿಕೆಯಲ್ಲಿ ಕ್ರಿಯಾಶೀಲರಾಗುತ್ತಾರೆ – ಸ್ವವಿಮರ್ಶೆ ಬೆಳೆಯುತ್ತದೆ – ಉತ್ತಮ ತರಗತಿ ಪ್ರಕ್ರಿಯೆಯನ್ನು ತರಗತಿಯಲ್ಲಿ ತಂದಂತೆ ಆಗುತ್ತದೆ.

| ಕ್ರ | ವಿದ್ಯಾರ್ಥಿ ಹೆಸರು | ಅಧ್ಯಾಯ -1 | | | | ಅಧ್ಯಾಯ-2 | | | | ಅಧ್ಯಾಯ -3 | | | | ಅಧ್ಯಾಯ-4 | | | |
|---|---|---|---|---|---|---|---|---|---|---|---|---|---|---|---|---|---|
| | | ಕಲಿಕಾಂಶದ ವಿವರ | | | | ಕಲಿಕಾಂಶದ ವಿವರ | | | | ಕಲಿಕಾಂಶದ ವಿವರ | | | | ಕಲಿಕಾಂಶದ ವಿವರ | | | |
| | | | | | | | | | | | | | | | | | |
| | | | | | | | | | | | | | | | | | |

ವಿದ್ಯಾರ್ಥಿಯು ಕಲಿಕಾಂಶವಾರು ಸ್ವಮೌಲ್ಯಮಾಪನವನ್ನು ಮಾಡಿಕೊಂಡು ತಾನು ಯಾವ ಮಟ್ಟಕ್ಕೆ ಕಲಿತಿದ್ದೇನೆ ಎಂದು ಗುರುತಿಸಿಕೊಳ್ಳಲು ಯುಕ್ತ. ಉಸ್ತುವಾರಿ ಮತ್ತು ಸಲಹೆ ಸೂಚನೆಯನ್ನು ವಿಷಯ ಬೋಧಿಸುವ ಅಧ್ಯಾಪಕರು ಮಾಡುತ್ತಾರೆ. ಮಟ್ಟವನ್ನು ಗುರುತಿಸಲು ಈಗ ಪ್ರಚಲಿತವಿರುವ ಶ್ರೇಣಿಗಳನ್ನೇ ಬಳಸಿ. ($A^+$,A, $B^+$, B, $C^+$, C) ಇದರೊಂದಿಗೆ ಅಧ್ಯಾಯ ಪರೀಕ್ಷೆಯ ತರುವಾಯ ಅಧ್ಯಾಪಕರ ಮಾಪನ ಮತ್ತು ಮಗುವಿನ ಮಾಪನವನ್ನು ತಾಳೆ ಮಾಡುವುದರಿಂದ ವಿದ್ಯಾರ್ಥಿ ಸ್ವಾಭಾವಿಕವಾಗಿ ಸ್ವಮೌಲ್ಯಮಾಪನ ಕಾರ್ಯದಲ್ಲಿ ಪರಿವರ್ತನೆ ತೊರುತ್ತಾಳೆ/ನೆ.

**ಶಾಲಾ ಶೈಕ್ಷಣಿಕ ಸೌಲಭ್ಯಗಳ ಸ್ವಯಂ ಮೌಲ್ಯಮಾಪನ**

ಅಪೇಕ್ಷಣೀಯ ಶಾಲಾ ಶೈಕ್ಷಣಿಕ ಸೌಲಭ್ಯಗಳ ಲಭ್ಯತೆಯನ್ನಾಧರಿಸಿ ನಮೂನೆಯನ್ನು ಸಿದ್ಧಪಡಿಸಿ ಅವುಗಳನ್ವಯ ಸದರಿ ಅಂಶಗಳು ಇರುವಿಕೆಯ ಬಗ್ಗೆ ಮುಖ್ಯಶಿಕ್ಷಕರು-ಶಿಕ್ಷಕರು SDMC ಯವರು ಸ್ವಯಂಮೌಲ್ಯಮಾಪನ ಮಾಡಿಕೊಂಡು ಶಾಲಾ ಶೈಕ್ಷಣಿಕ ಸ್ಥಿತಿಯನ್ನು ಗುರ್ತಿಸುವುದೇ ಈ ಕಾರ್ಯಕ್ರಮದ **ಉದ್ದೇಶ**.

- ಪ್ರತಿ ಶಾಲೆಗೆ ನಿಗದಿತ ನಮೂನೆ ಸರಬರಾಜು-ಜುಲೈ ಮಾಹೆಯೊಳಗೆ ಡಯಟ್ ಸಂಸ್ಥೆಗಳು ಅಭಿವೃದ್ಧಿಪಡಿಸಿ ಸರಬರಾಜು ಮಾಡುವುದು. ಈ ಚಟುವಟಿಕೆಗೆ ಆರ್.ಇ.ಎಂ.ಎಸ್. ವತಿಯಿಂದ ಅನುದಾನವನ್ನು ಡಯಟ್‌ಗಳಿಗೆ ನೀಡಲಾಗುತ್ತದೆ.
- ಸ್ವಯಂ ಮೌಲ್ಯಮಾಪನದ ಸಂಗ್ರಹ ವರದಿ ಪಡೆಯುವುದು. ಜುಲೈ ಅಂತ್ಯಕ್ಕೆ (ಆಯಾ ಡಯಟ್)
- ಕೊರತೆಗಳ ಬಗ್ಗೆ ಸಮಾಲೋಚನೆ (ಶಾಲೆ, ಕ್ಲಸ್ಟರ್, ಬ್ಲಾಕ್, ಜಿಲ್ಲೆ ಹಂತದಲ್ಲಿ-ನಿರ್ವಹಣೆಗೆ ಕ್ರಮ ಆಯಾ ಹಂತದಲ್ಲಿ)
- ಕ್ರಿಯಾಯೋಜನೆ (ದೀರ್ಘಾವಧಿ-ಅಲ್ಪಾವಧಿ) (ಶಾಲೆ, ಕ್ಲಸ್ಟರ್, ಬ್ಲಾಕ್, ಜಿಲ್ಲೆ ಹಂತದಲ್ಲಿ-ನಿರ್ವಹಣೆಗೆ ಕ್ರಮ ಆಯಾ ಹಂತದಲ್ಲಿ)

- ಮಾರ್ಚ್ ಮಾಹೆಯಲ್ಲಿ ಪುನರ್ ಸ್ವಮೌಲ್ಯಮಾಪನ (ವಿವಿಧ ಹಂತಗಳಲ್ಲಿ ವರದಿ ತಯಾರಿ).

**ಸೂಚನೆ:** 1. ಮೌಲ್ಯಮಾಪನ ವರದಿಗಳು ಶಾಲೆಯಲ್ಲಿ ಮಾತ್ರವೇ ರೂಪಿಸಬೇಕು– ಮೇಲ್ಪಟ್ಟ ಯಾವುದೇ ಹಂತದಲ್ಲಿ ಸ್ವಯಂ ಮೌಲ್ಯಮಾಪನ ನಮೂನೆ ತರಿಸಿಕೊಳ್ಳಕೂಡದು. ಆದರೆ ಕ್ರೋಡೀಕೃತ ಅಂಕಿಅಂಶಗಳನ್ನು <u>ಆಯಾಮವಾರು</u> ತರಿಸಿಕೊಳ್ಳಬಹುದು

2. ಶಾಲೆಗಳ ಸ್ವಯಂ ಮೌಲ್ಯಮಾಪನದ ಅಂಶಗಳನ್ನು ಮುಂದಿನ <u>ಆಯಾಮಗಳ ನೇರಗಳಲ್ಲಿ</u> ರಚಿಸುವುದು.

- ಎಸ್.ಡಿ.ಎಂ.ಸಿ. ಮತ್ತು ಸಮುದಾಯದ ಪಾಲ್ಗೊಳ್ಳುವಿಕೆ ಇತ್ಯಾದಿ
- ಶಾಲೆಗಳ ಭೌತಿಕ ಪರಿಸ್ಥಿತಿ
- ಶಾಲೆಗಳಲ್ಲಿ ದೊರೆಯುವ ಸೌಲಭ್ಯಗಳ ಬಳಕೆ,
- ಅಧ್ಯಾಪಕರ ತರಗತಿ ತಯಾರಿ ಮತ್ತು ಬೋಧನೆ
- ಮುಖ್ಯಶಿಕ್ಷಕರ ಶೈಕ್ಷಣಿಕ ಕರ್ತವ್ಯಗಳು,
- ತರಗತಿ ಮತ್ತು ವಿಷಯವಾರು ಮಕ್ಕಳ ಕಲಿಕೆ
- ಸಹಪಠ್ಯ ಚಟುವಟಿಕೆಗಳು

**ಸೆಮಿಸ್ಟರ್ ಮೌಲ್ಯಮಾಪನ:–** ಸೆಮಿಸ್ಟರ್ ಅವಧಿಯ ಅಂತ್ಯದಲ್ಲಿ ನಡೆಯಲಿರುವ ಮೌಲ್ಯಮಾಪನವನ್ನು ಎರಡೂ ವಿಭಾಗಗಳಲ್ಲಿಯೂ ನಡೆಸಬೇಕು. ಎ ವಿಭಾಗದಲ್ಲಿ ಪ್ರತಿ ವಿಷಯದಲ್ಲಿ ಲಿಖಿತ ಹಾಗೂ ಮೌಖಿಕ ಮೌಲ್ಯಮಾಪನ ಇರುತ್ತದೆ. ಲಿಖಿತ ಮೌಲ್ಯಮಾಪನವು 40 ಅಂಕಗಳಾಗಿದ್ದು, 90 ನಿಮಿಷಗಳ ಅವಧಿಯುಳ್ಳದ್ದಾಗಿರುತ್ತದೆ. 10 ಅಂಕಗಳ ಮೌಖಿಕ ಮೌಲ್ಯಮಾಪನವನ್ನು ಎಲ್ಲಾ ವಿದ್ಯಾರ್ಥಿಗಳ ಸಮ್ಮುಖದಲ್ಲಿಯೇ ನಡೆಸಬೇಕು. ಆದರೆ ಪ್ರಸ್ತುತ 5ನೇ ತರಗತಿಯಲ್ಲಿ ಇಂಗ್ಲೀಷ್ ಅನ್ನು ದ್ವಿತೀಯ ಭಾಷೆಯನ್ನಾಗಿ, 6ನೇ ತರಗತಿಯಲ್ಲಿ ಹಿಂದಿಯನ್ನು ತೃತೀಯ ಭಾಷೆಯನ್ನಾಗಿಯೂ ಕಲಿಸುತ್ತಿರುವುದರಿಂದ ಈ ಎರಡೂ ವಿಷಯಗಳಿಗೆ ಮೊದಲ ಸೆಮಿಸ್ಟರ್‌ನಲ್ಲಿ 25 ಅಂಕಗಳಿಗೆ ಲಿಖಿತ ಹಾಗೂ 25 ಅಂಕಗಳಿಗೆ ಮೌಖಿಕ ಪರೀಕ್ಷೆ ಮಾಡಬೇಕು ಮತ್ತು ಎರಡನೇ ಸೆಮಿಸ್ಟರ್‌ನಲ್ಲಿ 40 ಅಂಕಗಳಿಗೆ ಲಿಖಿತ ಹಾಗೂ 10 ಅಂಕಗಳಿಗೆ ಮೌಖಿಕ ಮೌಲ್ಯಮಾಪನ ಮಾಡಬೇಕು.

- ಕಂಠಪಾಠಕ್ಕೆ [ಅವಶ್ಯವಿರುವೆಡೆ ಬಿಟ್ಟು] ಪ್ರಾಮುಖ್ಯತೆ ನೀಡದೆ ಮಕ್ಕಳು ಸ್ವಯಂಶಕ್ತಿಯಿಂದ ಬರೆಯುವುದಕ್ಕೆ ಹಾಗೂ ಅಭಿವ್ಯಕ್ತಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು.
- ಭಾಷಾ ವಿಷಯದಲ್ಲಿ ಆಯಾ ತರಗತಿಯಮಟ್ಟದ ವಿಷಯವನ್ನು ಒಳಗೊಂಡಿರುವ ಲೇಖನ/ಕಥೆ/ಸಂಭಾಷಣೆ ಇವುಗಳನ್ನು ನೀಡಿ ಅವನ್ನು ವಿದ್ಯಾರ್ಥಿ ಓದಿ, ಅರ್ಥೈಸಿಕೊಂಡು ಉತ್ತರಗಳನ್ನು ಬರೆಯುವಂತಹ ಸಾಮಗ್ರಿಗಳನ್ನು ಮೌಲ್ಯಮಾಪನದಲ್ಲಿ ಬಳಸಬೇಕು.
- ಸೆಮಿಸ್ಟರ್ ಪರೀಕ್ಷೆಯನ್ನು ಶಾಲಾಹಂತದಲ್ಲಿ ನಡೆಸಿ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು ಶ್ರೇಣಿಗಳಿಗೆ ಪರಿವರ್ತಿಸಿ, ಪ್ರಗತಿ ಪತ್ರದಲ್ಲಿ ಶ್ರೇಣಿಗಳನ್ನು ಮಾತ್ರ ನಮೂದಿಸಬೇಕು. ಅಂಕಗಳನ್ನು ಶಿಕ್ಷಕರು ತಮ್ಮ ವೈಯಕ್ತಿಕ ಅಂಕ ವಹಿಯಲ್ಲಿ ನಮೂದಿಸಿಕೊಳ್ಳಬೇಕು.
- ಸೆಮಿಸ್ಟರ್ ಅವಧಿಯ ಪ್ರಶ್ನೆಪತ್ರಿಕೆಗಳನ್ನು ಶಾಲಾಹಂತದಲ್ಲಿ ಆಯಾ ವಿಷಯ ಬೋಧಿಸುವ ಶಿಕ್ಷಕರೇ ತಯಾರಿಸಿಕೊಳ್ಳಬೇಕು.
- ಪ್ರಥಮ ಸೆಮಿಸ್ಟರ್ ಅವಧಿಯಲ್ಲಿ 'ಸಿ' ಶ್ರೇಣಿ ಪಡೆದ ವಿದ್ಯಾರ್ಥಿಗಳಿಗೆ ಸೂಕ್ತ ಪರಿಹಾರ ಬೋಧನೆಯನ್ನು ಮಾಡಿ ಮುಂದಿನ ಸೆಮಿಸ್ಟರ್ ಅವಧಿಯ ಕಲಿಕೆಗೆ ಸಮರ್ಥರನ್ನಾಗಿಸಬೇಕು.
- 10ನೇ ತರಗತಿ ಪಬ್ಲಿಕ್ ಪರೀಕ್ಷೆಯಲ್ಲಿ ಮೌಖಿಕ ಪರೀಕ್ಷೆಗೆ ಅವಕಾಶವಿಲ್ಲದಿರುವ ಕಾರಣ 9ನೆಯ ತರಗತಿಯ ದ್ವಿತೀಯ ಸೆಮಿಸ್ಟರ್ ಮೌಲ್ಯಮಾಪನದಲ್ಲಿ ಮೌಖಿಕ ಪರೀಕ್ಷೆಯನ್ನು ಕೈ ಬಿಡಲಾಗಿದೆ.

**ಯೋಜನೆ [ಪ್ರಾಜೆಕ್ಟ್]**

1. ಪ್ರತಿ ಸೆಮಿಸ್ಟರ್ ಅವಧಿಗೆ ಈ ಕೆಳಕಂಡಂತೆ ಯೋಜನೆಯನ್ನು ವಿದ್ಯಾರ್ಥಿಗಳಿಂದ ಮಾಡಿಸಬೇಕು.
2. ಮೊದಲನೆಯ ಸೆಮಿಸ್ಟರ್ ಅವಧಿಯಲ್ಲಿ ಭಾಷೆ [ಪ್ರಥಮ, ದ್ವಿತೀಯ, ತೃತೀಯ ಭಾಷೆ] ಎರಡನೆಯ ಸೆಮಿಸ್ಟರ್ ಅವಧಿಯಲ್ಲಿ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ [ಯೋಜನೆಯು ಗುಂಪು ಚಟುವಟಿಕೆ ಅಥವಾ ವೈಯಕ್ತಿಕ ಚಟುವಟಿಕೆ ಆಗಿರಬೇಕು].
3. ಪ್ರತಿ ತರಗತಿಯ ವಿದ್ಯಾರ್ಥಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿ ಪ್ರಥಮ ಸೆಮಿಸ್ಟರ್‌ನಲ್ಲಿ ಒಂದೊಂದು ಗುಂಪಿಗೆ ಒಂದೊಂದು ಭಾಷೆಯ ಯೋಜನೆಯನ್ನು ನೀಡಬೇಕು.
4. ದ್ವಿತೀಯ ಸೆಮಿಸ್ಟರ್‌ನಲ್ಲಿ ಗಣಿತ, ವಿಜ್ಞಾನ, ಸಮಾಜ ವಿಜ್ಞಾನವನ್ನು ಒಂದೊಂದು ಗುಂಪಿಗೆ ನೀಡಬೇಕು. ಹೆಚ್ಚಿನ ವಿವರಗಳಿಗೆ "ಯೋಜನಾ" ಸಂಚಿಯನ್ನು ನೋಡಿರಿ.

"ಬಿ" ವಿಭಾಗದಲ್ಲಿ ಈ ಕೆಳಕಂಡ ವಿಷಯಗಳ ಮೇಲೆ ಮೌಲ್ಯಮಾಪನವನ್ನು ನಿಗದಿಪಡಿಸಿರುವ ಅಂಕಗಳಿಗೆ ಅನುಗುಣವಾಗಿ ನಡೆಸುವುದು.

| | | | |
|---|---|---|---|
| 1. | ಯೋಜನೆ | – | 10 ಅಂಕಗಳು |
| 2. | ಮೌಲ್ಯ / ಜೀವನ ಕೌಶಲಗಳು | – | 10 ಅಂಕಗಳು |
| 3. | ಜೀವನ ವಿಜ್ಞಾನ (ದೈ.ಶಿ+ಯೋಗ+ಆರೋಗ್ಯ) | | 20 ಅಂಕಗಳು |
| 4. | ಕಲೆ/ಸಾ.ಉ.ಉ.ಕಾ | – | 10 ಅಂಕಗಳು |
| | ಒಟ್ಟು | | 50 ಅಂಕಗಳು |

**ಸವಿವರ ಮಾಹಿತಿಗೆ ಸೌರಭ 2007 ನೋಡಿ**

ಸೆಮಿಸ್ಟರ್ ಮೌಲ್ಯಮಾಪನದಲ್ಲಿ ಗಮನಿಸಬೇಕಾದ ಅಂಶಗಳು:–

1. **ಉದ್ದಿಷ್ಟಗಳು: ಉದ್ದಿಷ್ಟವಾರು ಅಂಕವಿತರಣೆ**

| ಅ] ಭಾಷೆಗಳು: | | | ಕೋರ್ ವಿಷಯಗಳು | | |
|---|---|---|---|---|---|
| ಜ್ಞಾನ | – | 25% | ಜ್ಞಾನ | – | 25% |
| ಗ್ರಹಿಕೆ | – | 35% | ತಿಳುವಳಿಕೆ | – | 45% |
| ಅಭಿವ್ಯಕ್ತಿ | – | 30% | ಅನ್ವಯ | – | 20% |
| ಪ್ರಶಂಸೆ | – | 10% | ಕೌಶಲ | – | 10% |

2. ಪ್ರಶ್ನೆಗಳ ಸ್ವರೂಪ [ಭಾಷೆ] / ಪ್ರಶ್ನೆಗಳ ಸ್ವರೂಪ [ಕೋರ್ ವಿಷಯ]

| | ಪ್ರಶ್ನೆಗಳ ಸ್ವರೂಪ [ಭಾಷೆ] | ಪ್ರಶ್ನೆಗಳ ಸ್ವರೂಪ [ಕೋರ್ ವಿಷಯ] |
|---|---|---|
| ವಸ್ತುನಿಷ್ಠ | 30% | 30% |
| ಕಿರುಉತ್ತರ | 40% | 50% |
| ವಿವರಣಾತ್ಮಕ ಉತ್ತರ | 30% | 20% |

3. ಕಠಿಣತೆಯ ಮಟ್ಟ:

| | | |
|---|---|---|
| ಸುಲಭ | – | 30% |
| ಸಾಧಾರಣ | – | 40% |
| ಕಠಿಣ | – | 30% |

ವಿಶೇಷ ಸೂಚನೆ:– 2008–09ನೇ ಸಾಲಿನಿಂದ 6 ರಿಂದ 9ನೇ ತರಗತಿಯವರೆಗೆ ದೈಹಿಕ ಶಿಕ್ಷಣವನ್ನು ಕಡ್ಡಾಯ ಪರೀಕ್ಷಾ ವಿಷಯವನ್ನಾಗಿಸಿದೆ. ಈ ಹಿನ್ನೆಲೆಯಲ್ಲಿ ದೈಹಿಕ ಶಿಕ್ಷಣ ಮೌಲ್ಯಮಾಪನದ ಸವಿವರವನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ ನೀಡುವ ಸೂಚನೆಗಳಂತೆ ಮೌಲ್ಯಮಾಪನ ಮಾಡುವುದು.

**ಪಾಠಗಳ ವಿಂಗಡಣೆ "ಎ ವಿಭಾಗ" ಶಾಲೆಗಳು ಕಾರ್ಯನಿರ್ವಹಿಸುವ ಅವಧಿ**

| | | |
|---|---|---|
| **ಮೊದಲನೇ ಸೆಮಿಸ್ಟರ್** | 50% | ದಿ: 28–05–2010 ರಿಂದ 06–10–2010 |
| **ಎರಡನೇ ಸೆಮಿಸ್ಟರ್** | 50% | ದಿ: 25–10–2010 ರಿಂದ 09–04–2011 |

- **ಶ್ರೇಣೀಕರಣ ಹಾಗೂ ಶ್ರೇಣಿಮೌಲ್ಯ**

**"ಎ" ವಿಭಾಗ**

| ಕ್ರ ಸಂ | ಶ್ರೇಣಿ | ಶೇಕಡ | ಶೀರ್ಷಿಕೆ | ಮೌಲ್ಯ |
|---|---|---|---|---|
| 1 | ಎ+ | 90% ರಿಂದ 100% | ಅತಿ ಶ್ರೇಷ್ಠ | 6 |
| 2 | ಎ | 75% ರಿಂದ 89% | ಶ್ರೇಷ್ಠ | 5 |
| 3 | ಬಿ+ | 60% ರಿಂದ 74% | ಉತ್ತಮ | 4 |
| 4 | ಬಿ | 50% ರಿಂದ 59% | ತೃಪ್ತಿಕರ | 3 |
| 5 | ಸಿ+ | 30% ರಿಂದ 49 | ಸಾಧಾರಣ | 2 |
| 6 | ಸಿ | 29%ಕ್ಕಿಂತ ಕಡಿಮೆ | ಅತೃಪ್ತಿಕರ | 1 |

**"ಬಿ" ವಿಭಾಗ**

| ಕ್ರ ಸಂ | ಶ್ರೇಣಿ | ಶೇಕಡ | ಶೀರ್ಷಿಕೆ ಶ್ರೇಣಿ |
|---|---|---|---|
| 1 | ಎ | 75% ರಿಂದ 100% | ಅತ್ಯುತ್ತಮ |
| 2 | ಬಿ | 50% ರಿಂದ 74% | ಉತ್ತಮ |
| 3 | ಸಿ | 49% ರಿಂದ ಕಡಿಮೆ | ಕನಿಷ್ಠ |

ನೈದಾನಿಕ ಮೌಲ್ಯಮಾಪನ:– ವಿದ್ಯಾರ್ಥಿಯ ಕಲಿಕಾಮಟ್ಟವನ್ನು ಗುರುತಿಸಿ ತೀರ್ಮಾನ ತೆಗೆದುಕೊಳ್ಳಲು ಬಳಸುತ್ತೇವೆ. ಅಂದರೆ ವಿದ್ಯಾರ್ಥಿ ಶಾಲಾವಿಷಯದಲ್ಲಿ ಸಾಮಾನ್ಯ ಪ್ರಗತಿ ಹೊಂದಲು ವಿಫಲವಾಗುತ್ತಿರುವ ಅಂಶಗಳನ್ನು ಪತ್ತೆಹಚ್ಚಲು ನೈದಾನಿಕ ಪರೀಕ್ಷೆ ಮಾಡುತ್ತೇವೆ. ಮಕ್ಕಳ ಕಲಿಕಾ ಸಾಮರ್ಥ್ಯಗಳನ್ನು ಕಂಡುಕೊಳ್ಳುವುದರ ಜೊತೆಗೆ, ನ್ಯೂನ್ಯತೆ ತಿಳಿಯಲು ನೈದಾನಿಕ ಪರೀಕ್ಷೆಯನ್ನು ಬಳಸುತ್ತೇವೆ.

ನೈದಾನಿಕ ಮೌಲ್ಯಮಾಪನ ಮಾಡುವಲ್ಲಿ ಶಿಕ್ಷಕರ ಪಾತ್ರ:–

- ಬೋಧನಾ ಕಲಿಕಾ ಪ್ರಕ್ರಿಯೆಯ ಸನ್ನಿವೇಶಗಳಲ್ಲಿ ಮಕ್ಕಳ ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರಬೇಕು.
- ಪ್ರತಿವಿಷಯ ನಿರೀಕ್ಷಿತ ಕಲಿಕೆ ವರ್ತನೆಗಿಂತ ಬಿನ್ನವಾದ ವರ್ತನೆ ಹೊಂದಿರುವ ವಿದ್ಯಾರ್ಥಿಗಳನ್ನು ಗುರುತಿಸಿಕೊಳ್ಳಬೇಕು.
- ವಿದ್ಯಾರ್ಥಿಯ ಕಲಿಕೆ ದೋಷಗಳನ್ನು ಅನುಕ್ರಮವಾಗಿ ಜೋಡಿಸಬೇಕು.
- ದೋಷ ಪತ್ತೆಹಚ್ಚಲು/ನಿಖರವಾಗಿ ತಿಳಿಯಲು ಪ್ರಶ್ನೆಪತ್ರಿಕೆ ರಚಿಸಬೇಕು.
- ಪರೀಕ್ಷಿಸಲು ಉದ್ದೇಶಿಸಿರುವ ಕಲಿಕಾಂಶವನ್ನು ವಿವಿಧ ಪ್ರಶ್ನೆಗಳ ಮೂಲಕ ಅಳೆಯಬೇಕು.
- ವೈಯಕ್ತಿಕ ಗಮನಹರಿಸಿ ನೈದಾನಿಕ ಪರೀಕ್ಷೆ ಮಾಡಬೇಕು.
- ಉತ್ತರಗಳನ್ನು ವಿಶ್ಲೇಷಿಸಿದ ನಂತರ ಮಕ್ಕಳ ಕಲಿಕಾ ಮೌಲ್ಯಗಳನ್ನು ನಿಖರವಾಗಿ ಗುರುತಿಸಿ ಪರಿಹಾರ ಬೋಧನೆ ಮಾಡಬೇಕು.

ನೈದಾನಿಕ ಮೌಲ್ಯಮಾಪನದ ಅನಂತರ:–

ನೈದಾನಿಕ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳ ನಿಖರವಾದ ದೋಷ ಪತ್ತೆಹಚ್ಚಿದರೆ ಸಾಲದು. ದೋಷ ಪರಿಹಾರ ಅತಿ ಮುಖ್ಯ. ಅದಕ್ಕಾಗಿ ಒಂದು ಪರಿಹಾರ ಬೋಧನೆಯ ಯೋಜನೆಯನ್ನು ತಯಾರಿಸಿಕೊಂಡು ಅದರಂತೆ ಚಟುವಟಿಕೆಯನ್ನು ರೂಪಿಸಬೇಕು.

| ಕ್ರ ಸಂ | ಸಾಮರ್ಥ್ಯ | ಸಾಮರ್ಥ್ಯ ಗಳಿಸದಿರಲು ಸಂಭವನೀಯ ಕಾರಣಗಳು | ಕ್ರಿಯಾ ಪ್ರಾಕಲ್ಪನೆ ರಚನೆ | ನಡೆಸಬಹುದಾದ ಚಟುವಟಿಕೆ | ಬಳಸಬಹುದಾದ ಕಲಿಕೋಪಕರಣ |
|---|---|---|---|---|---|
| | | | | | |

ರೂಪಿಸಿದ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ ವಿದ್ಯಾರ್ಥಿಯ ದೋಷ ಪರಿಹರಿಸಬೇಕು. ಈ ದೋಷ ಪುನರಾವರ್ತನೆಯಾಗದಂತೆ ಮುಂಜಾಗ್ರತೆ ವಹಿಸಬಹುದು.

**ಫಲಿತಾಂಶ:–**

ಅ] ವಿದ್ಯಾರ್ಥಿಯ ವಾರ್ಷಿಕ ಫಲಿತಾಂಶವು ಅವನ/ಳ ಆ ವರ್ಷದ ಸಾಧನೆಯ ಮೇಲೆ ಅವಲಂಬಿತವಾಗಿರುತ್ತದೆ. ಅಂದರೆ ಎರಡು ಸೆಮಿಸ್ಟರ್ ಅವಧಿಗಳ ಅಂತ್ಯದ ಮೌಲ್ಯಮಾಪನಗಳಲ್ಲಿ ಪಡೆದ ಶ್ರೇಣಿಗಳ ಆಧಾರದಿಂದ ನಿರ್ಧರಿಸಲ್ಪಡುತ್ತದೆ.

ಆ] 'ಎ' ವಿಭಾಗದ ಪ್ರತಿ ವಿಷಯದಲ್ಲಿ ಕನಿಷ್ಠ ಸಿ+ ಶ್ರೇಣಿಯನ್ನು ಗಳಿಸಿರಬೇಕು.

ಇ] 'ಬಿ' ವಿಭಾಗದ ಪ್ರತಿ ವಿಷಯದಲ್ಲಿ ಕನಿಷ್ಠ ಬಿ ಶ್ರೇಣಿಯನ್ನು ಪಡೆದಿರಬೇಕು.

ಈ] ವಿದ್ಯಾರ್ಥಿ ಶಾಲೆಗೆ ದಾಖಲಾದ ದಿನದಿಂದ ಶೇ.75 ಹಾಜರಿ ಕಡ್ಡಾಯ.

ಉ] ಮೊದಲ ಸೆಮಿಸ್ಟರ್ ಪರೀಕ್ಷೆಗೆ ವಿದ್ಯಾರ್ಥಿ ಗೈರುಹಾಜರಾದರೆ ಪೂರಕ ಪರೀಕ್ಷೆಯನ್ನು ನವೆಂಬರ್‌ನಲ್ಲಿ ಎರಡನೇ ಸೆಮಿಸ್ಟರ್ ಪರೀಕ್ಷೆಗೆ ಗೈರುಹಾಜರಾದರೆ ಜೂನ್ ತಿಂಗಳಲ್ಲಿ ಪೂರಕ ಪರೀಕ್ಷೆ ಮಾಡಿ ಪಡೆದಿರುವ ಶ್ರೇಣಿಗಳ ಆಧಾರದ ಮೇಲೆ ಫಲಿತಾಂಶವನ್ನು ನಿರ್ಧರಿಸಬೇಕು.

ಊ] ತೇರ್ಗಡೆಗೆ ಬೇಕಾದ ಕನಿಷ್ಠ ಶ್ರೇಣಿ[ಸಿ+]ಯನ್ನು ಎರಡೂ ಸೆಮಿಸ್ಟರ್‌ಗಳಲ್ಲಿ ಗಳಿಸದಿದ್ದರೆ ಇಡೀ ವರ್ಷದ ಪಠ್ಯವಸ್ತುವಿನ ಮೇಲೆಯೂ ಯಾವುದಾದರೂ ಒಂದು ಸೆಮಿಸ್ಟರ್‌ನಲ್ಲಿ ಗಳಿಸದಿದ್ದರೆ ಆ ಸೆಮಿಸ್ಟರ್‌ನ ಪಠ್ಯವಸ್ತುವಿನ ಮೇಲೆಯೂ ಜೂನ್ ತಿಂಗಳಲ್ಲಿ ಪರಿಹಾರ ಬೋಧನೆ ಸಹಿತ ಮರುಮೌಲ್ಯಮಾಪನ ಮಾಡಬೇಕು. ಇದರಲ್ಲೂ ಸಿ+ ಬಾರದೇ ಹೋದರೆ ವಿದ್ಯಾರ್ಥಿಯನ್ನು ಅನುತ್ತೀರ್ಣನೆಂದು ಘೋಷಿಸಬೇಕು.

**ರಾಜ್ಯ ಶೈಕ್ಷಣಿಕ ಮೌಲ್ಯಮಾಪನ ಘಟಕವು ನಿರ್ವಹಿಸುವ ಚಟುವಟಿಕೆಗಳು:–**

- ಯೋಜನಾ ಸಂಚಿ: ಭಾಗ 'ಬಿ' ಗೆ ಸಂಬಂಧಪಟ್ಟಂತೆ ತರಗತಿಗಳಲ್ಲಿ ಪ್ರಾಜೆಕ್ಟ್ ಚಟುವಟಿಕೆಗಳನ್ನು ವಿದ್ಯಾರ್ಥಿಗಳ ಮನಸ್ಸು, ಬುದ್ಧಿ, ಹೃದಯಗಳನ್ನು ಅರಳಿಸುವ ಪ್ರಕ್ರಿಯೆಗಳನ್ನು ಒಳಗೊಂಡ ಪರಿಣಾಮಕಾರಿ ಕಲಿಕೆಗೆ ಇದು ಪೂರಕವಾಗಿದೆ. ಗಂಭೀರಚಿಂತನೆ ಹಾಗೂ ಅನುಭವಗಳ ಆಧಾರದಲ್ಲಿ ಈ ಸಂಚಿಯನ್ನು ಬಳಸಿಕೊಂಡು ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶನ ನೀಡಲು ಸಾಧ್ಯವಾಗಿರುತ್ತದೆ.
- ಮಾರ್ಗದರ್ಶಿ ಸೂತ್ರಗಳು:– 2007–08ನೇ ಸಾಲಿಗೆ ಸೆಮಿಸ್ಟರ್ ಪದ್ಧತಿ ಅನುಗುಣವಾಗಿ ಮೌಲ್ಯಮಾಪನ ವಿಧಾನ, ಪ್ರಕ್ರಿಯೆ, ಶಾಲೆಯ ಅವಧಿ ಹಾಗೂ ಪರೀಕ್ಷೆ ಅವಧಿ ಮತ್ತು ರಜೆಯ ಅವಧಿಯನ್ನು ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮಾರ್ಗದರ್ಶಿ ಸೂತ್ರಗಳ ಕೈಪಿಡಿಯನ್ನು ಮುದ್ರಿಸಿ ವಿತರಿಸಲಾಯಿತು.
- ಸೌರಭ ಶಿಕ್ಷಕರ ಕೈಪಿಡಿ:– ಸೆಮಿಸ್ಟರ್ ಪದ್ಧತಿಗೆ ಅನುಗುಣವಾಗಿ ಮಾರ್ಗಸೂಚಿಗಳನ್ನು ಶಿಕ್ಷಕರಿಗೆ ತಿಳಿಯಪಡಿಸಲಾಗಿದೆ. ವಿಷಯವಾರು ಪಾಠಗಳ ಹಂಚಿಕೆ ಸೆಮಿಸ್ಟರ್ ಅನ್ವಯ ಮಾಡಲಾಗಿದೆ ಹಾಗೂ ವೇಳಾಪಟ್ಟಿ, ಪ್ರಶ್ನೆಪತ್ರಿಕೆ ರಚನೆ ಮತ್ತು ಭಾಗ ಬಿ ವಿಭಾಗಕ್ಕೆ ಹೆಚ್ಚು ಒತ್ತು ನೀಡಿ, ಪಠ್ಯೇತರ ಚಟುವಟಿಕೆಗಳಿಗೆ ಹೆಚ್ಚಿನ ಗಮನ ಹರಿಸಲಾಗಿದೆ. ಅಲ್ಲದೇ 1 ರಿಂದ 4ನೇ ತರಗತಿಯವರೆಗೆ ನಿರಂತರ ಮೌಲ್ಯಮಾಪನವನ್ನು ಮುಂದುವರೆಸಲಾಗಿದೆ.
- ಮೌಲ್ಯಮಾಪನ ಶಿಕ್ಷಕರ ಕೈಪಿಡಿ:– ಮೌಲ್ಯಮಾಪನ ವಿಧಾನ, ಹಂತಗಳು ಮತ್ತು ಪ್ರಕ್ರಿಯೆಗಳನ್ನು ಒಳಗೊಂಡ ವಿಷಯವಾರು, ಸಾಮರ್ಥ್ಯಗಳಿಗೆ ಅನುಗುಣವಾಗಿ ಶಿಕ್ಷಕರಿಗೆ ತರಬೇತಿ ಸಂಚಿಯನ್ನು ಸಿದ್ಧಪಡಿಸಲಾಗಿದೆ. ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಈಗಾಗಲೇ ವಿತರಿಸಲಾಗಿದೆ. ಪಠ್ಯೇತರ ವಿಷಯಗಳಿಗೂ ಹೆಚ್ಚಿನ ಆದ್ಯತೆ ನೀಡಲಾಗಿದ್ದು, 2009–10ರಲ್ಲಿ ರಾಜ್ಯಮಟ್ಟದಲ್ಲಿ ಸಿಟಿಇ, ಡಯಟ್ ಮತ್ತು ವಿಷಯವಾರು ಶಿಕ್ಷಕರಿಗೆ ಮೌಲ್ಯಮಾಪನ ತರಬೇತಿ ನೀಡಲಾಗಿದೆ. ಬ್ಲಾಕ್ ಮತ್ತು ಜಿಲ್ಲಾಮಟ್ಟದ ತರಬೇತಿ ನೀಡುವಂತೆ ಸಿಟಿಇಗಳಿಗೆ ಜವಾಬ್ದಾರಿ ವಹಿಸಲಾಗಿದೆ. ಶಿಕ್ಷಕರು ಮೌಲ್ಯಮಾಪನ ತರಬೇತಿ ಸಂಚಿಕೆಯ ಉಪಯೋಗವನ್ನು ಪಡೆದುಕೊಳ್ಳಬೇಕಾಗಿದೆ.

ಸೂಚನೆ:–

ಹೆಚ್ಚಿನ ಮಾಹಿತಿಗಾಗಿ 2009ರ "ಮೌಲ್ಯಮಾಪನ ಸಂಚಿಕೆ" [ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಕೈಪಿಡಿ] ನೋಡುವುದು.

## ಅಕ್ಷರ ದಾಸೋಹ ಕಾರ್ಯಕ್ರಮ

ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ವಿಶ್ವಸಂಸ್ಥೆ ಘೋಷಿಸಿದಂತೆ ಹಸಿವಿನಿಂದ ಬಳಲುವ ಪ್ರತಿ ಮಗುವಿಗೆ ಆಹಾರ ನೀಡಬೇಕು. ಮಕ್ಕಳು ಸದೃಢವಾಗಿ ಬೆಳೆಯಲು ಅವಕಾಶವಿರಬೇಕು ಎಂಬ ಬದ್ಧತೆಯಿಂದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಕಲಿಯಲು ಬರುವ ಮಕ್ಕಳಿಗೆ ಹಸಿವು ನೀಗಿಸಿ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಲು ಅಕ್ಷರ ದಾಸೋಹ ಕಾರ್ಯಕ್ರಮ ಒಂದು ಪ್ರತಿಷ್ಠಿತ ಮಹತ್ತರ ಯೋಜನೆಯಾಗಿದೆ.

**ಅಕ್ಷರ ದಾಸೋಹ ನಡೆದು ಬಂದ ದಾರಿ:**

2002–03ರವರೆವಿಗೆ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಒಂದು ತಿಂಗಳಿಗೆ ತಲಾ 3 ಕೆ.ಜಿ. ಅಕ್ಕಿಯನ್ನು ಪ್ರತಿ ತಿಂಗಳು ನೀಡಲಾಗುತ್ತಿತ್ತು. ಕರ್ನಾಟಕ ರಾಜ್ಯದಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮ 2002–03 ನೇ ಸಾಲಿನಲ್ಲಿ ಮೊದಲ ಹಂತದಲ್ಲಿ ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಅತ್ಯಂತ ಹಿಂದುಳಿದ ಈಶಾನ್ಯ ವಲಯದ ಏಳು ಜಿಲ್ಲೆಗಳಲ್ಲಿ ಸರ್ಕಾರಿ ಶಾಲೆಗಳ 1 ರಿಂದ 5ನೇ ತರಗತಿಗಳ ವಿದ್ಯಾರ್ಥಿಗಳಿಗೆ ಬಿಸಿಊಟ ನೀಡುವ ಮೂಲಕ ಆರಂಭವಾಯಿತು. 2003–04 ನೇ ಸಾಲಿನಲ್ಲಿ ಉಳಿದ 20 ಜಿಲ್ಲೆಗಳಿಗೂ ದಿ: 01.09.2004 ರಿಂದ ಸರ್ಕಾರಿ ಶಾಲೆಗಳ 1 ರಿಂದ 5ನೇ ತರಗತಿಗಳ ವಿದ್ಯಾರ್ಥಿಗಳಿಗೆ ವಿಸ್ತರಿಸಲಾಯಿತು. ನಂತರ ದಿನಾಂಕ: 01.10.2004 ರಿಂದ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲೆಗಳ 6 ಮತ್ತು 7ನೇ ತರಗತಿ ವಿದ್ಯಾರ್ಥಿಗಳಿಗೂ ವಿಸ್ತರಿಸಲಾಯಿತು. 2007–08ನೇ ಸಾಲಿನಿಂದ ಈ ಯೋಜನೆಯನ್ನು ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಿಗೂ ವಿಸ್ತರಿಸಲಾಯಿತು.

**ಕಾರ್ಯಕ್ರಮದ ಮುಖ್ಯ ಉದ್ದೇಶಗಳು:**

i. ದಾಖಲಾತಿ, ಹಾಜರಾತಿಯನ್ನು ಉತ್ತಮಪಡಿಸುವುದು.
ii. ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ತೊರೆಯುವುದನ್ನು ತಪ್ಪಿಸುವುದು.
iii. ಪೌಷ್ಠಿಕತೆಯನ್ನು ಹೆಚ್ಚಿಸುವುದರ ಮೂಲಕ ಮಕ್ಕಳ ಆರೋಗ್ಯ ವೃದ್ಧಿಸುವುದು.
iv. ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವುದು.
v. ಮಕ್ಕಳಲ್ಲಿ ಸಮಾನತೆಯ ಮನೋಭಾವವನ್ನು ಹಾಗೂ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವುದು.

**2009–10ನೇ ಸಾಲಿನಲ್ಲಿ ಪ್ರಯೋಜನ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ (ಲಕ್ಷಗಳಲ್ಲಿ):**

| ತರಗತಿ | ದಾಖಲಾತಿ | ಹಾಜರಾತಿ | ಫಲಾನುಭವಿಗಳು |
|---|---|---|---|
| 1 ರಿಂದ 5 | 39.21 | 36.90 | 35.01 |
| 6 ರಿಂದ 8 | 22.51 | 21.32 | 20.00 |
| 9 ರಿಂದ 10 | 12.78 | 12.22 | 11.14 |
| **ಒಟ್ಟು** | **74.50** | **70.45** | **66.15** |

**ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಆಹಾರಧಾನ್ಯ ಮತ್ತು ಪರಿವರ್ತನಾ ವೆಚ್ಚದ ವಿವರ (ಪ್ರತಿ ವಿದ್ಯಾರ್ಥಿಗೆ/ಪ್ರತಿ ದಿನಕ್ಕೆ)**

| ಆಹಾರ ಪದಾರ್ಥ | 1 ರಿಂದ 5 | | 6 ರಿಂದ 8 | | 9 ರಿಂದ 10 | |
|---|---|---|---|---|---|---|
| | ಪ್ರಮಾಣ (ಗ್ರಾಂಗಳಲ್ಲಿ) | ವೆಚ್ಚ | ಪ್ರಮಾಣ (ಗ್ರಾಂಗಳಲ್ಲಿ) | ವೆಚ್ಚ | ಪ್ರಮಾಣ (ಗ್ರಾಂಗಳಲ್ಲಿ) | ವೆಚ್ಚ |
| ಅಕ್ಕಿ | 100 | ಉಚಿತ # | 150 | ಉಚಿತ # | 150 * | 1.40 |
| ಬೇಳೆ | 20 | 1.28 | 30 | 2.03 | 30 | 2.03 |
| ಎಣ್ಣೆ | 05 | 0.25 | 7.5 | 0.48 | 7.5 | 0.48 |
| ಡಿ.ಎಫ್. ಉಪ್ಪು | 02 | 0.02 | 03 | 0.04 | 03 | 0.04 |
| ತರಕಾರಿ | 50 | 0.50 | 75 | 0.75 | 75 | 0.75 |
| ಸಾಗಾಣಿಕಾ ವೆಚ್ಚ | | 0.01 | | 0.01 | | 0.01 |
| ಇಂಧನ | | 0.44 | | 0.44 | | 0.44 |
| ಆಡಳಿತಾತ್ಮಕ ವೆಚ್ಚ | | 0.15 | | 0.15 | | 0.10 |
| **ಒಟ್ಟು** | | **2.65** | | **3.90** | | **5.25** |

* ರಾಜ್ಯ ಸರ್ಕಾರವು ಎ.ಪಿ.ಎಲ್ ದರದಲ್ಲಿ ಅಕ್ಕಿಯನ್ನು ನೀಡುತ್ತಿದೆ.

# ಕೇಂದ್ರ ಸರ್ಕಾರವು ಉಚಿತವಾಗಿ ನೀಡುತ್ತಿದೆ.

**ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದ ವಿವರ:–**

| ತರಗತಿ | ರಾಜ್ಯ | ಕೇಂದ್ರ | ಒಟ್ಟು | ಸಾಗಾಣಿಕಾ ವೆಚ್ಚ | |
|---|---|---|---|---|---|
| | | | | ರಾಜ್ಯ | ಕೇಂದ್ರ |
| 1 – 5 | 0.77 | 1.88 | 2.65 | – | 75 |
| 6 – 8 | 1.09 | 2.81 | 3.90 | – | 75 |
| 9 – 10 | 5.25 | – | 5.25 | 75 | – |

**ಸೂಚಿತ ಆಹಾರ ಪಟ್ಟಿ:–**

ವಿದ್ಯಾರ್ಥಿಗಳಿಗೆ ವಾರದಲ್ಲಿ ಈ ಕೆಳಕಂಡಂತೆ ಆಹಾರವನ್ನು ತಯಾರಿಸಿ ನೀಡಲು ಸೂಚಿಸಲಾಗಿದೆ

| ವಾರಗಳು | ನೀಡುತ್ತಿರುವ ಆಹಾರ |
|---|---|
| ಸೋಮವಾರ | ತೊಗರಿಬೇಳೆ/ಕಡಲೆಕಾಳು/ಹೆಸರುಕಾಳು/ಅಲಸಂದೆಕಾಳು ಮತ್ತು ಹುರುಳಿಕಾಳು ಹಾಗೂ ತರಕಾರಿ ಬಳಸಿಕೊಂಡು ಅನ್ನ ಮತ್ತು ಸಾಂಬಾರು ತಯಾರಿಸಿ ನೀಡುವುದು. |
| ಮಂಗಳವಾರ | |
| ಬುಧವಾರ | |
| ಗುರುವಾರ | |
| ಶುಕ್ರವಾರ | ಬಿಸಿಬೇಳೆ ಬಾತ್ |
| ಶನಿವಾರ | ತರಕಾರಿ ಉಪ್ಪಿಟ್ಟು/ಸಿಹಿ ಪೊಂಗಲ್ |

## ಪೌಷ್ಠಿಕಾಂಶದ ವಿವರ:–

ಬಿಸಿಊಟ ನೀಡುವುದರಿಂದ ಪ್ರತಿ ಪ್ರಾಥಮಿಕ ಶಾಲಾ ಮಗುವಿಗೆ ದಿವಸಕ್ಕೆ 490 ಕ್ಯಾಲರಿಯಷ್ಟು ಪೌಷ್ಠಿಕಾಂಶ ಹಾಗೂ 13..8 ಗ್ರಾಂನಷ್ಟು ಪ್ರೋಟೀನ್ ದೊರೆಯುತ್ತಿದೆ. ಪ್ರತಿ ಪ್ರೌಢಶಾಲಾ ವಿದ್ಯಾರ್ಥಿಗೆ 728.35 ಕ್ಯಾಲರಿಗಳು ಹಾಗೂ 20.7 ಗ್ರಾಂನಷ್ಟು ಪ್ರೋಟೀನ್ ದೊರೆಯುತ್ತಿದೆ. ಈ ವಿಷಯವನ್ನು ಸಾರ್ವಜನಿಕರ ಗಮನಕ್ಕಾಗಿ ತರಲು ಶಾಲಾಗೋಡೆ ಅಥವಾ ಅಡುಗೆಕೋಣೆಯ ಗೋಡೆಗಳ ಮೇಲೆ ಬಿಸಿಊಟಕ್ಕೆ ವೆಚ್ಚವಾಗುವ ವಿವರಗಳು ಹಾಗೂ ಪ್ರತಿ ದಿನದ ವಿದ್ಯಾರ್ಥಿಗಳ ಅಂಕಿ ಅಂಶಗಳು, ಶುಚಿತ್ವ, ಸುರಕ್ಷತೆ, ಮಿತವ್ಯಯ, ಹೆಚ್ಚುವರಿ ಪೌಷ್ಠಿಕಾಂಶ ಮಾತ್ರೆಗಳ ಬಗ್ಗೆ ಮಾಹಿತಿಯನ್ನು ಬರೆಸಲಾಗಿದೆ.

## ಮಾತ್ರೆಗಳ ಸರಬರಾಜು ವಿವರ:–

2009–10ನೇ ಸಾಲಿಗೆ 3 ವಿಧದ ಪೌಷ್ಠಿಕಾಂಶ ಮಾತ್ರೆಗಳು ಎಲ್ಲಾ ಶಾಲೆಗಳಿಗೂ ಆರೋಗ್ಯ ಇಲಾಖೆಯ ಅಧೀನದಲ್ಲಿರುವ ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ & ವೇರ್ ಹೌಸಿಂಗ್ ಸೊಸೈಟಿ, ಬೆಂಗಳೂರು ರವರ ಮುಖಾಂತರ ಸರಬರಾಜು ಮಾಡಲಾಗುತ್ತದೆ.

**ಮಾತ್ರೆಗಳ ವಿವರ:–**

| ಮಾತ್ರೆಗಳು | | ಪ್ರಮಾಣ |
|---|---|---|
| ವಿಟಮಿನ್ ಎ | 2 ಲಕ್ಷ ಐ.ಯು | ವರ್ಷಕ್ಕೆ 2 ಮಾತ್ರೆಗಳು |
| ಕಬ್ಬಿಣಾಂಶ ಮಾತ್ರೆ | 20 ಎಂ.ಜಿ | ವಾರಕ್ಕೆ 3 ರಂತೆ 36 ವಾರಗಳಿಗೆ– 108 ಮಾತ್ರೆಗಳು |
| ಆಲ್‌ಬೆಂಡಜೋಲ್ (ಜಂತು ನಿವಾರಕ ಮಾತ್ರೆಗಳು) | 400 ಎಂ.ಜಿ | ವರ್ಷಕ್ಕೆ 2 ಮಾತ್ರೆಗಳು |

ಮೇಲ್ಕಂಡ ಮಾತ್ರೆಗಳನ್ನು ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1 ರಿಂದ 7ನೇ ತರಗತಿ ಮಕ್ಕಳಿಗೆ ನೀಡಲಾಗುತ್ತಿದೆ.

**ಅಡುಗೆ ಕೇಂದ್ರಗಳ ವಿವರ:–**

ರಾಜ್ಯದಲ್ಲಿ ಒಟ್ಟು 40271 ಅಡುಗೆ ಕೇಂದ್ರಗಳಿದ್ದು, ಈ ಕೆಳಕಂಡಂತೆ ಅಡುಗೆ ಕೇಂದ್ರಗಳನ್ನು ವರ್ಗೀಕರಿಸಲಾಗಿದೆ.

| ಕೇಂದ್ರದ ಮಾದರಿ | ಮಕ್ಕಳ ಸಂಖ್ಯೆ | ಒಟ್ಟು ಕೇಂದ್ರಗಳು |
|---|---|---|
| ಎ1 | 0 – 25 | 4580 |
| ಎ | 26 – 100 | 12952 |
| ಬಿ | 101 – 200 | 18875 |
| ಸಿ | 201 – 300ಕ್ಕೂ ಮೇಲ್ಪಟ್ಟು | 3864 |
| ಒಟ್ಟು | | 40271 |

i. 40271 ಅಡುಗೆ ಕೇಂದ್ರಗಳಿಂದ 47925 ಪ್ರಾಥಮಿಕ ಹಾಗೂ 6868 ಪ್ರೌಢಶಾಲೆಗಳ ಒಟ್ಟು 66.15 ಲಕ್ಷ ಮಕ್ಕಳಿಗೆ ಬಿಸಿಯೂಟ ನೀಡಲಾಗುತ್ತಿದೆ.
ii. 2009–10ರಲ್ಲಿ ಒಟ್ಟು 100 ಸ್ವಯಂಸೇವಾ ಸಂಸ್ಥೆಗಳು ಒಟ್ಟು 5578 ಶಾಲೆಗಳ 11.49 ಲಕ್ಷ ಮಕ್ಕಳಿಗೆ ಬಿಸಿಯೂಟ ನೀಡುತ್ತಿವೆ.

iii. ಕೇಂದ್ರಸರ್ಕಾರ 2007–08ನೇ ಸಾಲಿನಲ್ಲಿ ನೀಡಿರುವ ರೂ.10944.60 ಲಕ್ಷಗಳಲ್ಲಿ 18241 ಅಡುಗೆ ಕೋಣೆಗಳನ್ನು ನಿರ್ಮಾಣ ಮಾಡಲು ಯೋಜಿಸಿದೆ.

**ಪಾತ್ರೆ ಪರಿಕರಗಳ ಖರೀದಿ ಬಗ್ಗೆ:–**

2009–10ನೇ ಸಾಲಿನಲ್ಲಿ ನೀಡಿರುವ 5.49 ಲಕ್ಷಗಳಲ್ಲಿ ಅಡುಗೆ ಕೇಂದ್ರಗಳಿಗೆ ಗ್ಯಾಸ್ ಸ್ಟೌವ್ ಖರೀದಿ ಮಾಡಲು ಹಣ ಮಂಜೂರಾತಿ ನೀಡಿದೆ.

**ಶಾಲಾ ಕೈತೋಟ:–**

ಮಕ್ಕಳಿಗೆ ನೀಡುವ ಆಹಾರ ಪೌಷ್ಠಿಕಾಂಶ ಹೆಚ್ಚಿಸಲು ರಾಜ್ಯಸರ್ಕಾರ ರೂ.3500/–ರಂತೆ ಒಟ್ಟು 19375 ಶಾಲೆಗಳಲ್ಲಿ ಶಾಲಾ ಕೈತೋಟಗಳನ್ನು ಬೆಳೆಸಲು ಕ್ರಮವಹಿಸಿದೆ. ಶಾಲಾ ಕೈತೋಟಗಳಲ್ಲಿ ಮಕ್ಕಳು ಬೆಳೆಸಿದ ತರಕಾರಿಗಳಾದ ನುಗ್ಗೆಕಾಯಿ, ಪಪ್ಪಾಯಿ, ಕರಿಬೇವು ಹಾಗೂ ಸೊಪ್ಪು ಮತ್ತು ತರಕಾರಿಗಳನ್ನು ಉಪಯೋಗಿಸಿ ಅಡುಗೆ ಮಾಡಲು ತಿಳಿಸಿದೆ.

ಅಕ್ಷರ ದಾಸೋಹ ಕಾರ್ಯಕ್ರಮದಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಯವರಿಗೆ ಗೌರವಧನವನ್ನು ಕೇಂದ್ರಸರ್ಕಾರವು ದಿನಾಂಕ: 01–12–2009 ರಿಂದ ಜಾರಿಗೆ ಬರುವಂತೆ ಹೆಚ್ಚಿಸಿದೆ.

| | |
|---|---|
| ಮುಖ್ಯ ಅಡುಗೆಯವರು | ರೂ.1100–00 |
| ಅಡುಗೆಯವರು | ರೂ.1000–00 |
| ಸಹಾಯಕ ಅಡುಗೆಯವರು | ರೂ.1000–00 |
| ಸಹಾಯಕರು | ರೂ.1000–00 |

**ತಾಯಂದಿರ ಸಮಿತಿ:–**

ಎಲ್ಲಾ ಶಾಲೆಗಳಲ್ಲೂ ಮಕ್ಕಳಿಗೆ ಬಿಸಿಯೂಟ ಮಾಡುವಾಗ ಮನೆಯ ವಾತಾವರಣ ಕಲ್ಪಿಸುವ ಸಲುವಾಗಿ ತಾಯಂದಿರ ಸಮಿತಿ ರಚಿಸಿ ಸಕ್ರಿಯಗೊಳಿಸಲಾಗಿದೆ. ತಾಯಂದಿರು ಶಾಲೆಯಲ್ಲಿ ಆಹಾರ ಗುಣಮಟ್ಟ ಪರಿಶೀಲಿಸಿ ಸಲಹೆ ಸೂಚನೆಗಳನ್ನು ನೀಡಬಹುದಾಗಿದೆ.

**ಮೌಲ್ಯಮಾಪನ:–**

ಅಕ್ಷರ ದಾಸೋಹ ಕಾರ್ಯಕ್ರಮದ 2008–09ನೇ ಸಾಲಿನಲ್ಲಿ ಮೌಲ್ಯಮಾಪನ ಅಧ್ಯಯನವನ್ನು ಮೆ॥ ಪ್ರೈಸ್ ವಾಟರ್ ಹೌಸ್ ಕೂಪರ್ಸ್, ಬೆಂಗಳೂರು ಅವರಿಗೆ ವಹಿಸಲಾಗಿದ್ದು, ಅಧ್ಯಯನ ಇಲಾಖೆಯ ಒಡಂಬಡಿಕೆಯೊಂದಿಗೆ ಸಂಸ್ಥೆಯವರು ಅಧ್ಯಯನ ಕಾರ್ಯಕ್ರಮವನ್ನು ಪೂರ್ಣಗೊಳಿಸಿ ವರದಿಯನ್ನು ನೀಡಿದ್ದಾರೆ.

**ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ.)ಯ ಪಾತ್ರ.**

i. ಗ್ರಾಮ ಪಂಚಾಯಿತಿ/ನಗರಸಭೆ/ಮುನಿಸಿಪಾಲಿಟಿಯೊಂದಿಗೆ ಯೋಜನೆಯ ಅನುಷ್ಠಾನದಲ್ಲಿ ಸಹಕರಿಸುವುದು.
ii. ಅಡುಗೆ ಸಿಬ್ಬಂದಿ ಆಯ್ಕೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದು.
iii. ಅಡುಗೆಕೋಣೆ ನಿರ್ಮಾಣದ ಮೇಲುಸ್ತುವಾರಿ ವಹಿಸುವುದು.
iv. ಬಿಸಿಯೂಟ ತಯಾರಿಕೆಯಲ್ಲಿ ಮೇಲುಸ್ತುವಾರಿ ವಹಿಸುವುದು.
v. ಉತ್ತಮ ಗುಣಮಟ್ಟದ ಆಹಾರ ಧಾನ್ಯಗಳ ಸರಬರಾಜಿನ ಬಗ್ಗೆ ಖಾತರಿ ವಹಿಸುವುದು.
vi. ಉತ್ತಮ ಗುಣಮಟ್ಟದ ಆಹಾರದ ತಯಾರಿಕೆ ಹಾಗೂ ವ್ಯವಸ್ಥಿತ ವಿತರಣೆ ನೋಡಿಕೊಳ್ಳುವುದು.
vii. ಮುಖ್ಯಶಿಕ್ಷಕರು ಹಾಗೂ ಶಿಕ್ಷಕರು ಅಡಿಗೆ ತಯಾರಿಕೆಯಲ್ಲಿ ಭಾಗವಹಿಸದಂತೆ ನೋಡಿಕೊಳ್ಳುವುದು.
viii. ಆಹಾರ ಹಂಚಿಕೆ ಮೊದಲು ಶಿಕ್ಷಕರಿಬ್ಬರು ರುಚಿ ನೋಡುವ ವ್ಯವಸ್ಥೆ ಮಾಡುವುದು.
ix. ಕಲಿಕಾಸಮಯವನ್ನು ಯಾವುದೇ ಕಾರಣಕ್ಕಾಗಿ ಅಡುಗೆ ತಯಾರಿಕೆಗೆ ವಿನಿಯೋಗವಾಗದಂತೆ ಶಿಕ್ಷಕರು ಕಟ್ಟೆಚ್ಚರ ವಹಿಸುವಂತೆ ನೋಡಿಕೊಳ್ಳುವುದು.

**ಶಾಲಾ ಮುಖ್ಯೋಪಾಧ್ಯಾಯರ ಜವಾಬ್ದಾರಿಗಳು:–**

i. ಶಾಲಾಮಕ್ಕಳ ದೈನಂದಿನ ಹಾಜರಾತಿಯನ್ನು ಆಹಾರದ ಬೇಡಿಕೆಯನ್ನು ಮುಖ್ಯ ಅಡುಗೆಯವರಿಗೆ ನೀಡುವುದು.

ii. 1 ರಿಂದ 10ನೇ ತರಗತಿ ಮಕ್ಕಳಿಗೆ ಉತ್ತಮ ಗುಣಮಟ್ಟದ ಆಹಾರವನ್ನು ನೀಡುವಂತೆ ನೋಡಿಕೊಳ್ಳುವುದು.

iii. ಮಕ್ಕಳಿಗೆ ಸ್ವಚ್ಛತೆ ಬಗ್ಗೆ ತಿಳುವಳಿಕೆ ನೀಡುವುದು.

iv. ಮಕ್ಕಳಿಗೆ ದೈನಂದಿನ ಬಿಸಿ ಊಟಕ್ಕೆ ಬಳಕೆ ಮಾಡಿದ ತರಕಾರಿಗಳ ಪೌಷ್ಠಿಕತೆ ಮಹತ್ವ ತಿಳಿಸುವುದು.

v. ಮಕ್ಕಳು ತಟ್ಟೆ ತೊಳೆದುಕೊಂಡು ಸ್ವಚ್ಛವಾಗಿಟ್ಟುಕೊಳ್ಳುವಂತೆ ನೋಡಿಕೊಳ್ಳುವುದು.

vi. ಸರಿಯಾದ ಪ್ರಮಾಣದಲ್ಲಿ ಆಹಾರವನ್ನು ಮಕ್ಕಳಿಗೆ ಕೊಡಿಸುವುದು.

vii. ಶಾಲಾ ವಾತಾವರಣವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು. ಅಡುಗೆಯವರು ಅಹಾರ ಪದಾರ್ಥವನ್ನು ಸುರಕ್ಷಿತವಾಗಿ ನೋಡಿಕೊಳ್ಳುವಂತೆ ಉಸ್ತುವಾರಿ ಮಾಡುವುದು.

viii. ಬಿಸಿಯೂಟ ಕಾರ್ಯಕ್ರಮದಲ್ಲಿ ಯಾವುದೇ ಸಂದರ್ಭದಲ್ಲಿ ಮಕ್ಕಳನ್ನು ಬಳಸಿಕೊಳ್ಳಬಾರದು.

ix. ಶಾಲೆಗಳಲ್ಲಿ ಮಕ್ಕಳಿಗೆ ಪೌಷ್ಠಿಕಾಂಶ ಮಾತ್ರೆಗಳನ್ನು ವಿತರಿಸುವಾಗ ಮಾತ್ರೆಗಳ (Expiry date) ನೋಡಿಕೊಂಡು ವಿತರಿಸಲು ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು.

x. ಶಾಲೆಗಳಲ್ಲಿ ಎಲ್ಲಾ ಮಕ್ಕಳು ಒಟ್ಟಾಗಿ ಕುಳಿತು ಊಟ ಮಾಡುವಂತೆ ನೋಡಿಕೊಳ್ಳುವುದು. ಇದರಿಂದ ಸಾಮಾಜಿಕ ಸಮಾನತೆಯನ್ನು ಪ್ರೋತ್ಸಾಹಿಸುವುದು.

**ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ**

ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮವನ್ನು 2006–07ನೇ ಸಾಲಿನಿಂದ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿನ 1 ರಿಂದ 10 ನೇ ತರಗತಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಯನ್ನು ಕೈಗೊಳ್ಳಲಾಗುತ್ತಿದೆ. 2009–10ನೇ ಸಾಲಿನಲ್ಲಿ ಆಗಸ್ಟ್ ತಿಂಗಳಿನಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಮುಕ್ತಾಯಗೊಳಿಸಿದೆ. ಸರ್ವ ಶಿಕ್ಷಣ ಅಭಿಯಾನ ಮತ್ತು ಎನ್.ಆರ್.ಹೆಚ್.ಎಂ. ವತಿಯಿಂದ ಹೆಲ್ತ್ ಕಾರ್ಡ್‌ಗಳನ್ನು ಮುದ್ರಿಸಿ ಶಾಲೆಗಳಿಗೆ ವಿತರಿಸಿದೆ. ಇಂಧನ ವೆಚ್ಚಕ್ಕಾಗಿ ಪ್ರತಿ ತಾಲ್ಲೂಕಿಗೆ ರೂ.50,000/ದಂತೆ ರೂ.96.10 ಲಕ್ಷಗಳನ್ನು ಮಧ್ಯಾಹ್ನ ಉಪಹಾರ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಭರಿಸಲಾಗಿದೆ.

ಕಾರ್ಯಕ್ರಮದ ಅನುಷ್ಠಾನಕ್ಕೆ ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಉಪಾಧ್ಯಕ್ಷರಾಗಿರುವ ಸಮಿತಿಯನ್ನು ರಚಿಸಿದ್ದು, ಜಿಲ್ಲೆಯ ಆರೋಗ್ಯಾಧಿಕಾರಿಗಳು ಮತ್ತು ಉಪನಿರ್ದೇಶಕರು ಮತ್ತಿತರ ಅಧಿಕಾರಿಗಳು ಸದಸ್ಯರಿರುತ್ತಾರೆ.

2008–09ನೇ ಸಾಲಿನಲ್ಲಿ ತಪಾಸಣೆಗೊಳಪಟ್ಟ ವಿದ್ಯಾರ್ಥಿಗಳ ಸಂಖ್ಯೆ 8528004 ಇದರಲ್ಲಿ 1415 ವಿದ್ಯಾರ್ಥಿಗಳಿಗೆ ತೀವ್ರತರವಾದ ಖಾಯಿಲೆಗಳಿಗೆ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಚಿಕಿತ್ಸೆ ನೀಡಲಾಗಿದೆ. ಇದಕ್ಕೆ ತಗಲುವ ಪೂರ್ಣವೆಚ್ಚವನ್ನು ಎನ್.ಆರ್.ಹೆಚ್.ಎಂ. ವತಿಯಿಂದ ರೂ.778.39 ಕೋಟಿ ಖರ್ಚು ಭರಿಸಲಾಗಿದೆ.

2009–10ನೇ ಸಾಲಿಗೆ ಸುವರ್ಣ ಆರೋಗ್ಯ ಮಾಸಾಚರಣೆ ಎಂದು ದಿನಾಂಕ:01.08.09ರಿಂದ 30.08.2009ರವರೆಗೆ ಹಮ್ಮಿಕೊಳ್ಳಲಾಗಿತ್ತು. ಒಟ್ಟು 6295371 ವಿದ್ಯಾರ್ಥಿಗಳನ್ನು ತಪಾಸಣೆಗೊಳಪಡಿಸಿ 1040 ವಿದ್ಯಾರ್ಥಿಗಳಿಗೆ ತೀವ್ರತರ ಖಾಯಿಲೆಗಳನ್ನು ಗುರ್ತಿಸಿ ಇದಕ್ಕೆ ತಗಲುವ ಪೂರ್ಣವೆಚ್ಚವನ್ನು ಎನ್.ಆರ್.ಹೆಚ್.ಎಂ. ವತಿಯಿಂದ ರೂ.400.44ಲಕ್ಷಗಳ ಖರ್ಚು ಭರಿಸಿರುತ್ತಾರೆ.

**ಕಾರ್ಯದರ್ಶಿ / ಖಜಾಂಚಿಗಳ ಕಛೇರಿ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು-560002. ದೂರವಾಣಿ : 22483434.**

---

ಕೇಂದ್ರಸರ್ಕಾರವು ಶಿಕ್ಷಕರ ಕಲ್ಯಾಣ ಚಟುವಟಿಕೆಗಳಿಗಾಗಿ ಧಾರ್ಮಿಕ ಮತ್ತು ದತ್ತಿ ನಿಯಮ 1890ರ ಅನ್ವಯ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನವನ್ನು 1962 ರಲ್ಲಿ ಸ್ಥಾಪನೆ ಮಾಡಿದ್ದು, ಪ್ರತಿ ರಾಜ್ಯದಲ್ಲೂ ಇದರ ರಾಜ್ಯ ಘಟಕವು ಕಾರ್ಯನಿರ್ವಹಿಸುತ್ತಿದೆ. ಅದೇ ರೀತಿಯಲ್ಲಿ ಕರ್ನಾಟಕ ಸರ್ಕಾರವು 1963 ರಲ್ಲಿ ರಾಜ್ಯದಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಯನ್ನು ಸ್ಥಾಪಿಸಿದೆ.

ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನಕ್ಕೆ ಸೆಪ್ಟೆಂಬರ್ 5 ರಂದು ಆಚರಿಸಲಾಗುವ ಶಿಕ್ಷಕರ ದಿನಾಚರಣೆ ಸಂದರ್ಭದಲ್ಲಿ ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಬಾವುಟಗಳನ್ನು ಮಾರುವ ಮೂಲಕ ವಂತಿಗೆಯನ್ನು ಸಂಗ್ರಹಿಸಲಾಗುತ್ತಿದೆ. ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಮತ್ತು ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗಳಿಗೆ ಪ್ರೌಢಶಾಲಾ ಹಂತ, ಕಾಲೇಜು ಹಂತ ಹಾಗೂ ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳಿಂದ ವಾರ್ಷಿಕ ವಂತಿಗೆಯನ್ನು ಪ್ರತಿವರ್ಷ ಶಾಲಾ-ಕಾಲೇಜುಗಳಿಗೆ ದಾಖಲಾಗುವ ಸಮಯದಲ್ಲಿ ಸಂಗ್ರಹಿಸಲಾಗುತ್ತಿದೆ ಹಾಗೂ ಶಿಕ್ಷಕರಿಂದ ರೂ 1,000/- ಗಳ ಆಜೀವ ಸದಸ್ಯತ್ವ ಶುಲ್ಕವನ್ನು ಸಂಗ್ರಹಿಸಲಾಗುತ್ತಿದೆ. [ಎಲ್ಲಾ ಬೋಧಕ ವೃಂದದವರೂ ಆಜೀವ ಸದಸ್ಯತ್ವ ಪಡೆಯಲು ಕೋರಿದೆ] ಈ ರೀತಿಯಾಗಿ ಸಂಗ್ರಹಿಸಿದ ಹಣವನ್ನು ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅಭ್ಯುದಯಕ್ಕಾಗಿ ಉಪಯೋಗಿಸಲಾಗುತ್ತಿದೆ.

**ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದಿಂದ ಶಿಕ್ಷಕರಿಗೆ ದೊರೆಯುವ ಸೌಲಭ್ಯಗಳು:**

**ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯಿಂದ ದೊರೆಯುವ ಸೌಲಭ್ಯಗಳು:**

1. **ಶಿಕ್ಷಕರ / ನಿವೃತ್ತ ಶಿಕ್ಷಕರ ಮಕ್ಕಳಿಗೆ ಪ್ರತಿಭಾ ವೇತನ.**

| ಕ್ರ.ಸ. | ಕೋರ್ಸು / ಪರೀಕ್ಷೆ | ವಿದ್ಯಾರ್ಥಿ ವೇತನಗಳ ಒಟ್ಟು ಸಂಖ್ಯೆ | ಪ್ರತಿಯೊಂದು ವಿದ್ಯಾರ್ಥಿಗೆ ವಾರ್ಷಿಕ ವೇತನದ ಮೊತ್ತ |
|---|---|---|---|
| 1 | ಎಸ್.ಎಸ್.ಎಲ್.ಸಿ | ಜಿಲ್ಲೆಗೆ ಹತ್ತು ವಿದ್ಯಾರ್ಥಿಗಳಿಗೆ | ರೂ. 500/- |
| 2. | ಪಿ.ಯು.ಸಿ [ದ್ವಿತೀಯ ವರ್ಷ] ಕಲೆ, ವಿಜ್ಞಾನ, ಕಾಮರ್ಸ್, ವೃತ್ತಿಪರ ಶಿಕ್ಷಣ. | ಪ್ರತಿ ವಿಷಯಕ್ಕೆ ಒಬ್ಬರಂತೆ [ಜಿಲ್ಲೆಗೆ ನಾಲ್ಕು ವಿದ್ಯಾರ್ಥಿಗಳಿಗೆ] | ರೂ 1,000/- |
| 3. | ಅಂತಿಮ ಪದವಿ ಪರೀಕ್ಷೆ [ಬಿಎ/ಬಿಎಸ್ಸಿ/ಬಿಕಾಂ/ಬಿಎಡ್/ಬಿಬಿಎಂ/ ಬಿಹೆಚ್ಎಂ/ ಬಿಸಿಎ. | ಆಯಾ ವಿಶ್ವವಿದ್ಯಾನಿಲಯದ ಪ್ರತಿ ಕೋರ್ಸಿಗೆ ಒಂದರಂತೆ | ರೂ 1,500/- |
| 4 | ಅಂತಿಮ ಪೂರ್ವಪರೀಕ್ಷೆ [ಬಿಇ / ಎಂಬಿಬಿಎಸ್] | ಆಯಾ ವಿಶ್ವವಿದ್ಯಾನಿಲಯದ ಪ್ರತಿ ಕೋರ್ಸಿಗೆ ಒಂದರಂತೆ | ರೂ 1,500/- |
| 5 | ಪ್ರಥಮ ವರ್ಷದ ಪರೀಕ್ಷೆ [ಎಂ.ಎ/ಎಂ.ಎಸ್ಸಿ/ಎಂ.ಕಾಂ/ಎಲ್.ಎಲ್.ಬಿ | ಆಯಾ ವಿಶ್ವವಿದ್ಯಾನಿಲಯದ ಪ್ರತಿ ಕೋರ್ಸಿಗೆ ಒಂದರಂತೆ | ರೂ 2,000/- |

**1. ಶಿಕ್ಷಕರು / ನಿವೃತ್ತ ಶಿಕ್ಷಕರು ಮತ್ತು ಅವರ ಅವಲಂಬಿತರಿಗೆ ವೈದ್ಯಕೀಯ ಚಿಕಿತ್ಸೆಗಾಗಿ ಧನಸಹಾಯ :**

ಶಿಕ್ಷಕರು/ನಿವೃತ್ತ ಶಿಕ್ಷಕರು ಮತ್ತು ಅವರ ಅವಲಂಬಿತರಿಗೆ ಖಾಯಿಲೆಯ ತೀವ್ರತೆಯನ್ನು ಪರಿಗಣಿಸಿ ರೂ 3,000/- ರಿಂದ ಗರಿಷ್ಠ ರೂ 15,000/- ಗಳ ಧನಸಹಾಯವನ್ನು ನೀಡಲಾಗುವುದು. [ಚಿಕಿತ್ಸೆಯನ್ನು ಪಡೆದ ಒಂದು ವರ್ಷದೊಳಗೆ ಅರ್ಜಿಯನ್ನು ಸಲ್ಲಿಸಬೇಕು]

**2. ಪ್ರಾಥಮಿಕ / ಪ್ರೌಢಶಾಲಾ ಶಿಕ್ಷಕರಿಗೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಧನಸಹಾಯ:**

ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ತಾಲ್ಲೂಕು / ಜಿಲ್ಲಾಮಟ್ಟದಲ್ಲಿ ಆಯೋಜಿಸಲು ಪ್ರತಿ ತಾಲ್ಲೂಕಿಗೆ ರೂ 5,000/- ಮತ್ತು ಜಿಲ್ಲಾಮಟ್ಟದಲ್ಲಿ ಆಯೋಜಿಸಲು ರೂ 10,000/- ಗಳ ಧನಸಹಾಯವನ್ನು ನೀಡಲಾಗುವುದು. ರಾಜ್ಯ ಹಂತದಲ್ಲಿ ಸಂಗೀತ, ಆಶುಭಾಷಣ, ಪ್ರಬಂಧ, ಚಿತ್ರಕಲಾಸ್ಪರ್ಧೆ ಮತ್ತು ಸ್ಥಳದಲ್ಲೆ ಪಾಠೋಪಕರಣಗಳ ತಯಾರಿಕಾ ಸ್ಪರ್ಧೆಗಳಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸಿದ ಶಿಕ್ಷಕರಿಗೆ ಕ್ರಮವಾಗಿ ರೂ 3,000/-, ರೂ 2,000/- ಮತ್ತು ರೂ 1,000/-ರಂತೆ ನಗದು ಬಹುಮಾನ, ಪ್ರಮಾಣಪತ್ರ ಮತ್ತು ನೆನಪಿನಕಾಣಿಕೆ ನೀಡಲಾಗುವುದು.

**3. ಮೃತ ಶಿಕ್ಷಕರ ಕುಟುಂಬಕ್ಕೆ ಧನ ಸಹಾಯ :**

ಶಿಕ್ಷಕರು ಸೇವೆಯಲ್ಲಿ ಇರುವಾಗಲೇ ಮೃತಪಟ್ಟಿದ್ದು ಅವರ ಕುಟುಂಬಕ್ಕೆ ಕುಟುಂಬ ವೇತನ ಮಂಜೂರಾಗದಿದ್ದಲ್ಲಿ ಕುಟುಂಬ ನಿರ್ವಹಣೆಗಾಗಿ ರೂ 7,000/-ಗಳ ಧನ ಸಹಾಯವನ್ನು ನೀಡಲಾಗುವುದು. ನಿವೃತ್ತಿಯ ನಂತರ ಮೃತಪಟ್ಟ ಶಿಕ್ಷಕರ ಕುಟುಂಬದವರಿಗೆ ರೂ 2,000/-ಗಳ ಧನ ಸಹಾಯವನ್ನು ನೀಡಲಾಗುವುದು. [ಮರಣ ಹೊಂದಿದ 180 ದಿನಗಳೊಳಗೆ ಅರ್ಜಿ ಸಲ್ಲಿಸಬೇಕು.]

**4. ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಧನಸಹಾಯ:**

ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಧನಸಹಾಯವನ್ನು ಈ ಕೆಳಕಾಣಿಸಿರುವ ಕೋರ್ಸುಗಳಿಗೆ ನೀಡಲಾಗುವುದು.

| ಕ್ರ.ಸ | ಕೋರ್ಸ್‌ಗಳ ಹೆಸರು | ನೀಡುವ ಮೊತ್ತ |
|---|---|---|
| 1 | ಪದವಿ ಪೂರ್ವ ಶಿಕ್ಷಣ/ಜೆಓಸಿ/ಪಿಯುಸಿಹೆಚ್/ಪಿಯುಸಿಜೆ/ಡಿ.ಇಡಿ/ಸಿಪಿಎಡ್/ಐಟಿಐ | ರೂ. 300/- |
| 2 | ಬಿಎ/ಬಿಎಸ್ಸಿ/ಬಿಕಾಂ/ಬಿಎಸ್‌ಡಬ್ಲ್ಯೂ/ಬಿ.ಲಿಬ್/ಬಿಸಿಎ/ಬಿಹೆಚ್‌ಎಂ/ ಬಿಪಿಎಡ್ | ರೂ. 400/- |
| 3 | ಪಾಲಿಟೆಕ್ನಿಕ್ ಕೋರ್ಸ್‌ಗಳು/ಬಿ.ಇಡಿ/ಎಲ್‌ಎಲ್‌ಬಿ/ಡಿಎಆರ್‌ಟಿ/ಜಿಟಿಡಿಸಿ | ರೂ. 500/- |
| 4 | ಬಿಎಸ್ಸಿ[ಅಗ್ರಿ]/ಬಿಹೆಚ್‌ಎಸ್ಸಿ/ಬಿಎಸ್ಸಿ[ನರ್ಸಿಂಗ್]/ಬಿಫಾರ್ಮ/ಬಿಬಿಎಂ/ಬಿಎಸ್ಸಿ[ಸಿರಿಕಲ್ಚರ್/ಡೈರಿ] ಬಿಎಸ್‌ಸಿಎ/ಬಿಹೆಚ್‌ಎಸ್‌ಸಿ/ಬಿಪಿಹೆಚ್/ಹೆಚ್‌ಓಆರ್‌ಟಿ/ ಬಿಹೆಚ್‌ಎಂ/ಬಿಸಿಎ | ರೂ. 600/- |
| 5 | ಬಿಇ/ಎಂಬಿಬಿಎಸ್/ಬಿಡಿಎಸ್/ಬಿಯುಎಂಎಸ್/ಬಿವಿಎಸ್ಸಿ/ಬಿಹೆಚ್‌ಎಂಎಸ್/ಬಿಎಎಂಎಸ್/ಬಿಎಸ್‌ಎಎಂ | ರೂ. 1,000/- |

**<u>ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಯಿಂದ ವಿದ್ಯಾರ್ಥಿಗಳಿಗೆ ದೊರೆಯುವ ಸೌಲಭ್ಯಗಳು:</u>**

**1. <u>ಎನ್.ಟಿ.ಎಸ್.ಇ. ವಿದ್ಯಾರ್ಥಿವೇತನ :</u>**

ರಾಜ್ಯಮಟ್ಟದ ಪ್ರತಿಭಾನ್ವೇಷಣೆ ಪರೀಕ್ಷೆಯಲ್ಲಿ [ಎನ್.ಟಿ.ಎಸ್.ಇ.] ಉತ್ತೀರ್ಣರಾಗಿ ರಾಷ್ಟ್ರಮಟ್ಟದ ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ 2,000/-ಗಳಂತೆ ಎರಡು ವರ್ಷ ವಿದ್ಯಾರ್ಥಿವೇತನ ನೀಡಲಾಗುವುದು.

**2. <u>ಕನ್ನಡ ಮಾಧ್ಯಮದಲ್ಲಿ ಬರೆದು ಪ್ರತಿಭಾನ್ವೇಷಣೆ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ವೇತನ :</u>**

ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ರಾಷ್ಟ್ರೀಯ ಪ್ರತಿಭಾನ್ವೇಷಣೆ ಪರೀಕ್ಷೆಯನ್ನು ಕನ್ನಡ ಮಾಧ್ಯಮದಲ್ಲಿ ಬರೆದು ರಾಷ್ಟ್ರಮಟ್ಟದ ಪರೀಕ್ಷೆಯಲ್ಲಿ ಆಯ್ಕೆಯಾಗದ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದಲ್ಲಿ ಮೆರಿಟ್ ಆಧಾರದ ಮೇಲೆ ಪರಿಗಣಿಸಿ 200 ವಿದ್ಯಾರ್ಥಿಗಳಿಗೆ ವಾರ್ಷಿಕ ರೂ 2,000/-ಗಳಂತೆ ಎರಡು ವರ್ಷ ವಿದ್ಯಾರ್ಥಿವೇತನ ನೀಡಲಾಗುವುದು.

3. **<u>ಶೌರ್ಯ ಪ್ರಶಸ್ತಿ</u> :**

ಅಪಾಯ ಸನ್ನಿವೇಶದಲ್ಲಿ ಅಸಾಧಾರಣ ಧೈರ್ಯ, ಸಮಯ ಪ್ರಜ್ಞೆ ಮತ್ತು ಸಾಹಸ ಪ್ರದರ್ಶಿಸಿ ಜನರ ಪ್ರಾಣ ಉಳಿಸಲು ನೆರವಾದ ವಿದ್ಯಾರ್ಥಿಗಳಿಗೆ ಮೆಚ್ಚಿಗೆ ಪತ್ರ, ರೂ 1,000/– ನಗದನ್ನು ಒಳಗೊಂಡ ಶೌರ್ಯಪ್ರಶಸ್ತಿಯನ್ನು ನೀಡಲಾಗುವುದು. ಕರ್ನಾಟಕ ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಶಿಫಾರಸ್ಸು ಮಾಡಿರುವ ವಿದ್ಯಾರ್ಥಿಗಳನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು.

4. **<u>ಕ್ರೀಡಾ ಪ್ರಶಸ್ತಿ</u>** :

ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನಡೆಸುವ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ವೈಯಕ್ತಿಕ ಹಾಗೂ ತಂಡದ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದಂತಹ ವಿದ್ಯಾರ್ಥಿಗಳಿಗೆ ನಿಧಿಗಳಿಂದ ಎಲ್ಲಾ ಸ್ಪರ್ಧೆಗಳಿಗೂ ಪ್ರತ್ಯೇಕವಾಗಿ ನಗದು ಬಹುಮಾನ ನೀಡಲಾಗುವುದು.

5. **<u>ವಿದ್ಯಾರ್ಥಿ ಸುರಕ್ಷಾ ಪರಿಹಾರ ಯೋಜನೆ:</u>**

ಅಪಘಾತದಿಂದ ಶಾಲಾ ವಿದ್ಯಾರ್ಥಿಗಳಿಗೆ ಆಗಬಹುದಾದ ಅನಾಹುತಗಳನ್ನು ಗಮನದಲ್ಲಿಟ್ಟುಕೊಂಡು 2001–02 ನೇ ಸಾಲಿನಿಂದ ವಿದ್ಯಾರ್ಥಿ ಸುರಕ್ಷಾ ಪರಿಹಾರ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯ ಸೌಲಭ್ಯಗಳು ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನಿತ ಶಾಲೆ/ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅನ್ವಯವಾಗುತ್ತದೆ. ಇದರ ಜೊತೆಗೆ ಶಿಕ್ಷಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ಎಲ್ಲಾ ಶಿಕ್ಷಕ / ಉಪನ್ಯಾಸಕರನ್ನೂ ಸಹ ಈ ಯೋಜನೆಯ ಸೌಲಭ್ಯಗಳಿಗೆ ಒಳಪಡಿಸಲಾಗಿದೆ.

6. **<u>ವಿದ್ಯಾರ್ಥಿಗಳಿಗೆ ವೈದ್ಯಕೀಯ ಧನಸಹಾಯ:</u>**

ಶಿಕ್ಷಕರಿಗೆ ನೀಡುತ್ತಿರುವಂತೆ ವಿದ್ಯಾರ್ಥಿಗಳಿಗೂ ಖಾಯಿಲೆಯ ತೀವ್ರತೆಯನ್ನು ಆಧರಿಸಿ ರೂ 3,000/–ರಿಂದ ಗರಿಷ್ಠ ರೂ 15,000/–ರೂ.ಗಳ ಮಿತಿಗೊಳಪಟ್ಟು ವೈದ್ಯಕೀಯ ಧನಸಹಾಯವನ್ನು ನೀಡಲಾಗುತ್ತದೆ.

7. ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ ಪರೀಕ್ಷೆಗಳಲ್ಲಿ ಶೇ. 100 ಫಲಿತಾಂಶ ಪಡೆದ ಪ್ರೌಢಶಾಲೆ / ಪದವಿ ಪೂರ್ವ ಕಾಲೇಜುಗಳನ್ನು ಅಭಿನಂದಿಸುವುದು.

8. **ಎಸ್.ಎಸ್.ಎಲ್.ಸಿ <u>ಮತ್ತು</u> ದ್ವಿತೀಯ ಪಿ.ಯು.ಸಿ ಪರೀಕ್ಷೆಗಳಲ್ಲಿ ಜಿಲ್ಲಾಮಟ್ಟದಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ನಗದು ಬಹುಮಾನ:**

ಎಸ್‌ಎಸ್‌ಎಲ್‌ಸಿ [ಕನ್ನಡ ಮಾಧ್ಯಮ–5, ಇತರೆ ಮಾಧ್ಯಮಗಳು–5] 10 X ವಿದ್ಯಾರ್ಥಿ ರೂ 1,000/–
ದ್ವಿತೀಯ ಪಿ.ಯು.ಸಿ [ವಿಜ್ಞಾನ–2, ಇತರೆ ವಿಷಯಗಳು–03] 05 X ವಿದ್ಯಾರ್ಥಿ ರೂ 2,000/–

**9.** ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗೆ ಪ್ರೌಢಶಾಲೆ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ವಂತಿಗೆಯ ಶೇ.50 ಭಾಗವನ್ನು ಮತ್ತು ಕಿರಿಯ ಕಾಲೇಜು (ಪಿಯುಸಿ), ಪ್ರಥಮ ದರ್ಜೆ ಹಾಗೂ ಇನ್ನಿತರೆ ಕಾಲೇಜುಗಳಿಂದ ಸಂಗ್ರಹಿಸಿದ ವಂತಿಗೆಯ ಶೇ.60 ಭಾಗವನ್ನು ಆಯಾ ಕಾಲೇಜುಗಳಲ್ಲಿ ಉಳಿಸಿಕೊಂಡು ವಿದ್ಯಾರ್ಥಿಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಉಪಯೋಗಿಸುವುದು [ ಬಡ ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡುವುದು/ ಪರೀಕ್ಷಾ ಶುಲ್ಕ / ನೋಟ್ ಪುಸ್ತಕಗಳ ವಿತರಣೆ/ ಬಹುಮಾನ ಇತರೆ ಸದ್ಬಳಕೆ ಕಾರ್ಯಕ್ಕಾಗಿ ವಿನಿಯೋಗಿಸಿಕೊಳ್ಳಬಹುದು]

10. **<u>ಶಿಕ್ಷಕರ ದಿನಾಚರಣೆಯನ್ನು ಆಚರಿಸುವ ಸಲುವಾಗಿ ಧನಸಹಾಯ:</u>**

ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲು ಪ್ರತಿ ತಾಲ್ಲೂಕು ಹಾಗೂ ಜಿಲ್ಲೆಗೆ ರೂ. 5000/– ಗಳಂತೆ ಒಟ್ಟು ರೂ. 11,75,000/– ಗಳನ್ನು ಪ್ರತಿವರ್ಷ ಬಿಡುಗಡೆ ಮಾಡಲಾಗುವುದು.

ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಮತ್ತು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು http://www.schooleducation.kar.nic.in ವೆಬ್‌ಸೈಟಿನಿಂದ ಪಡೆಯಬಹುದು.

## ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005

1986ರ ರಾಷ್ಟ್ರೀಯ ಶಿಕ್ಷಣದಲ್ಲಿ ಸೂಚಿಸಿದಂತೆ, ಐದು ವರ್ಷಗಳಿಗೊಮ್ಮೆ ಪಠ್ಯಕ್ರಮದಲ್ಲಿ ಬದಲಾವಣೆ ತರುವ ಕೆಲಸ ನಿಯಮಿತವಾಗಿ ನಡೆಯುತ್ತಿದೆ. ಮಕ್ಕಳ ಮೇಲೆ ಪುಸ್ತಕಗಳ [ವಿಷಯ] ಹೊರೆ ಹೆಚ್ಚಾಗುತ್ತಿರುವುದನ್ನು ಮನಗಂಡು ಸರ್ಕಾರ 2004ರಲ್ಲಿ ವಿನೂತನವಾದ ಮಕ್ಕಳ ಕಲಿಕೆಗೆ ಪೂರಕವಾದ ಪಠ್ಯಕ್ರಮ ರಚಿಸಲು ಎನ್.ಸಿ.ಇ.ಆರ್.ಟಿ ಯನ್ನು ಕೇಳಿತು. ಪ್ರೋ.ಯಶಪಾಲ್ ರವರ ಅಧ್ಯಕ್ಷತೆಯಲ್ಲಿಯೇ ಒಂದು ರಾಷ್ಟ್ರೀಯ ಚಾಲನಾ ಸಮಿತಿ ಮತ್ತು 21 ರಾಷ್ಟ್ರೀಯ ಕೇಂದ್ರ ಗುಂಪುಗಳ [National Core Group] ರಚನೆಯಾಯಿತು. 21 ರಾಷ್ಟ್ರೀಯ ಕೇಂದ್ರ ಗುಂಪುಗಳು ನೀಡಿದ ಸಲಹೆ ಮೇರೆಗೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ರಚನೆಯಾಯಿತು.

ಇಂದು ರಾಷ್ಟ್ರಾದ್ಯಂತ 2005ರ ಪಠ್ಯಕ್ರಮ ಹೆಚ್ಚು ಪ್ರಾಮುಖ್ಯತೆ ಪಡೆದಿದೆ. ಏಕೆಂದರೆ ಬೋಧನೆ–ಕಲಿಕೆ ಹಾಗೂ ಒಟ್ಟಾರೆ ಶಿಕ್ಷಣದ ಚಿಂತನೆಗಳಲ್ಲಿ ಆಮೂಲಾಗ್ರ ಬದಲಾವಣೆ ಬಯಸುತ್ತಿದೆ. ರಾಷ್ಟ್ರೀಯ ಪಠ್ಯಕ್ರಮ 2005ರ ಆಶಯದಂತೆ ರಾಜ್ಯ ಪಠ್ಯಕ್ರಮದಲ್ಲಿ ಬದಲಾವಣೆ ತರಲು ಈಗಾಗಲೇ ಅನೇಕ ರಾಜ್ಯಗಳು ಪ್ರಯತ್ನ ಪ್ರಾರಂಭಿಸಿವೆ. ಅದರಂತೆ ಕರ್ನಾಟಕ ರಾಜ್ಯದಲ್ಲೂ ಕೂಡ 1 ರಿಂದ 10ನೇ ತರಗತಿಯವರೆಗೆ ಹೊಸ ಪಠ್ಯಕ್ರಮ ರಚನೆಯಾಗಿದ್ದು, ವಿವಿಧ ಹಂತಗಳಲ್ಲಿ ಪರಿಶೀಲನಾ ಕೆಲಸ ಪ್ರಗತಿಯಲ್ಲಿದೆ. ಮುಂದಿನ ಒಂದೆರಡು ವರ್ಷಗಳಲ್ಲಿ ಹೊಸ ಪಠ್ಯಕ್ರಮಾಧಾರಿತ ಪಠ್ಯ ಪುಸ್ತಕಗಳು ಚಾಲ್ತಿಗೆ ಬರಲಿವೆ.

ಮಾರ್ಗದರ್ಶಿ ತತ್ವಗಳು: ಮಕ್ಕಳ ಮೇಲೆ ಕಲಿಕೆ ಒಂದು ಹೊರೆಯಾಗದಂತೆ ಮತ್ತು ಒತ್ತಡವನ್ನುಂಟು ಮಾಡದಂತೆ ಪಠ್ಯಕ್ರಮದ ವಿಕಾಸಕ್ಕೆ ಮಾರ್ಗದರ್ಶಿ ತತ್ವಗಳನ್ನು ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು ಪ್ರಸ್ತುತಪಡಿಸುತ್ತಿದೆ.

- ಶಾಲೆಯ ಹೊರ ವಾತಾವರಣಕ್ಕೆ ಜ್ಞಾನವನ್ನು ಜೋಡಿಸುವುದು.
- ಹಳೆಯ ಪದ್ಧತಿಯಿಂದ ಕಲಿಕೆಯು ದೂರ ಸರಿಯುತ್ತಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದು.
- ಪಠ್ಯಕ್ರಮವು ಪಠ್ಯಪುಸ್ತಕಗಳ ಆಚೆಯೂ ಸಾಗುವ ಹಾಗೆ ಅದನ್ನು ಉತ್ಕೃಷ್ಟಗೊಳಿಸುವುದು.
- ಪರೀಕ್ಷೆಗಳನ್ನು ಹೆಚ್ಚು ಸುಸಂಗತಗೊಳಿಸುವುದು ಮತ್ತು ಅದನ್ನು ತರಗತಿ ಕೋಣೆಯ ಬದುಕಿನೊಂದಿಗೆ ಒಗ್ಗೂಡಿಸುವುದು.
- ರಾಷ್ಟ್ರೀಯ ಸಾಮಾಜಿಕ ವ್ಯವಸ್ಥೆಯಲ್ಲಿ ತಮ್ಮ ತಮ್ಮ ಅನನ್ಯತೆಯನ್ನು ಒಲಿಸಿಕೊಳ್ಳಲು ಪ್ರಯತ್ನಿಸುವವರ ಬಗ್ಗೆ ಕಳಕಳಿಯಿಂದ ವರ್ತಿಸುವುದು ಅಗತ್ಯ.

ರಾಷ್ಟ್ರೀಯ ಪಠ್ಯಕ್ರಮ 2005ರಲ್ಲಿ ಶಿಶು ಕೇಂದ್ರಿತ ಶಿಕ್ಷಣ ಹಾಗೂ ಜ್ಞಾನ ಮತ್ತು ಅರಿವಿನ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ.

**ಶಿಶು ಕೇಂದ್ರಿತ ಶಿಕ್ಷಣ:**

- ಮಕ್ಕಳ ಅನುಭವವನ್ನು ಆಧರಿಸಿ ಕಲಿಕಾ ವಾತಾವರಣ.
- ಚಟುವಟಿಕೆ ಆಧಾರಿತ ಕಲಿಕೆ.
- ಮಗುವಿನ ಸ್ವಾತಂತ್ರ್ಯಕ್ಕೆ ಹೆಚ್ಚು ಅವಕಾಶ. [ಶಾಲೆಯಲ್ಲಿ ಹಾಗೂ ಶಾಲಾ ವಾತಾವರಣದ ಹೊರಗೆ]
- ಮಗುವಿಗೆ ಭದ್ರತಾ ಮನೋಭಾವ ಬೆಳೆಸುವುದು. [ದೈಹಿಕ, ಭಾವನಾತ್ಮಕ]

**ಜ್ಞಾನ ಮತ್ತು ಅರಿವು:**

- ಭಾಷಾ ಬೆಳವಣಿಗೆಗೆ ಹೆಚ್ಚಿನ ಅವಕಾಶ ಒದಗಿಸುವುದು.
- ಜ್ಞಾನವನ್ನು ಭಾಷೆಯ ಮೂಲಕ ಪಡೆದ ಅನುಭವಗಳನ್ನು ರಚನೆಗಳೆಂದು ತಿಳಿಸುವುದು.
- ಮಕ್ಕಳ ಮೂಲ ಸಾಮರ್ಥ್ಯಗಳ ಬೆಳವಣಿಗೆಗೆ [ಅರಿವು ಮೌಲ್ಯಗಳು ಮತ್ತು ಕೌಶಲ್ಯ] ಆದ್ಯತೆ ನೀಡುವುದು.
- ಅರಿವಿನ ವಿವಿಧ ರೂಪಗಳನ್ನು ಮಗುವಿಗೆ ದೊರಕುವಂತೆ ಬೋಧನಾ ಚಟುವಟಿಕೆ ರೂಪಿಸುವುದು.
- ಜ್ಞಾನದ ಪುನರ್ ಸೃಷ್ಟಿ:ವಿಷಯಗಳ ಮೂಲಕ ಸಂಗತಿಗಳನ್ನು ಪತ್ತೆ ಹಚ್ಚುವುದು. ಈ ಸಂಗತಿಗಳಿಂದ ಆಳಕ್ಕೆ ಹೋಗಿ ಅವುಗಳಿಗೆ ಅರ್ಥ ಕೊಡುವ ಮತ್ತು ಮಹತ್ವದ ಅಂತರ್ ಸಂಬಂಧಗಳನ್ನು ಗುರುತಿಸುತ್ತದೆ.

**ಸ್ಥಳೀಯ ಜ್ಞಾನ ಮತ್ತು ಸಮುದಾಯ:**

- ಸ್ಥಳೀಯ ಪರಿಸರ ಮತ್ತು ಮಗುವಿನ ಸ್ವ ಅನುಭವಗಳಿಗೆ ಆದ್ಯತೆ.
- ಮಗುವಿನ ಸನ್ನಿವೇಶದಲ್ಲಿ ಕಲಿಕೆಯನ್ನು ಅಳವಡಿಸುವುದು.
- ಮಗುವಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳಿಗೆ ಆದ್ಯತೆ ನೀಡುವುದು.
- ಮಗುವಿನ ಮನೆಯಲ್ಲಿ ಹಾಗೂ ಶಾಲೆಯಲ್ಲಿ ಮಾತನಾಡುವಂತೆ ಪ್ರೇರೇಪಿಸಬೇಕು. ಆಯಾ ಸಮುದಾಯದ ಸ್ಥಳೀಯ ಹಾಡು, ಕಥೆ, ಒಗಟುಗಳು ಕಲೆ ಇತ್ಯಾದಿಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಬೇಕು.
- ಸ್ಥಳೀಯ ಜ್ಞಾನ ದೇಶೀಯ ಸಂಪ್ರದಾಯ ಮತ್ತು ವಿಧಾನಗಳೊಡನೆ ವ್ಯವಹರಿಸುವುದು. ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ, ಶಾಲಾ ಜ್ಞಾನಕ್ಕೆ ಹೊಂದಿಸುವುದು.

ರಾಷ್ಟ್ರೀಯ ಪಠ್ಯಕ್ರಮ 2005ರಲ್ಲಿ ಪ್ರತಿ ವಿಷಯದಲ್ಲಿ ಆಗಬೇಕಾಗಿರುವ ಬದಲಾವಣೆ ಬಗ್ಗೆ ಹೀಗೆ ನಿರೀಕ್ಷಿಸಲಾಗಿದೆ.

**"ಭಾಷೆ"**

- ಭಾಷೆಯಲ್ಲಿ ಮುಖ್ಯವಾಗಿ ಆಲಿಸುವುದು, ಮಾತನಾಡಿಸುವುದು, ಓದುವುದು ಮತ್ತು ಬರೆಯುವುದು, ಇವುಗಳ ಅಭಿವೃದ್ಧಿ ಮಾಡುವುದು ಮಗುವಿನ ಪರಿಸರದಲ್ಲಿನ ಆಡು ಭಾಷೆಯಿಂದ ಬೆಳವಣಿಗೆ.
- ಮಕ್ಕಳ ಮಾತೃ ಭಾಷೆಯೇ ಬೋಧನಾ ಮಾಧ್ಯಮವಾಗಿರಬೇಕು.
- ಪೂರ್ವ ಜ್ಞಾನದಿಂದ ಕಲಿತಿರುವ ಪದಗಳನ್ನು ಬಳಸುತ್ತಾರೆ. ಈ ಸಾಮರ್ಥ್ಯವನ್ನು ಉತ್ತಮಪಡಿಸಬೇಕು.
- ಕೋರ್ ವಿಷಯಗಳೂ ಭಾಷೆಯನ್ನು ಕಲಿಸಬಹುದು.
- ತ್ರಿಭಾಷಾ ಸೂತ್ರವನ್ನು ಕಲಿಸಲು ಪ್ರಯತ್ನಿಸಬಹುದು.

**"ಗಣಿತ"**

- ಯಾಂತ್ರಿಕ ವಿಧಾನಕ್ಕಿಂತ ತಾರ್ಕಿಕವಾಗಿ ಚಿಂತಿಸುವ ಮತ್ತು ಅನ್ವಯಿಸುವ ಸಾಮರ್ಥ್ಯ ಬೆಳೆಸುವುದು.

• ಸಮಸ್ಯೆಗಳನ್ನು ಸ್ಥಳೀಯ ಸಂಪನ್ಮೂಲಗಳಲ್ಲಿ ಗುರುತಿಸುವ ಸಾಮರ್ಥ್ಯವನ್ನು ಹೆಚ್ಚಿಸಬೇಕು.

ಉದಾ: ಕೊಠಡಿಯಲ್ಲಿ ಕಪ್ಪು ಹಲಗೆ, ಧ್ವಜಸ್ಥಂಭ, ಪುಸ್ತಕಗಳಿಂದ ವಿವಿಧ ಬಗೆಯ ಕೋನಗಳನ್ನು ಆಯತ ಘನ, ಸ್ಥಂಭ ಗುರುತಿಸುವುದು.

• ನಿತ್ಯ ಜೀವನದಲ್ಲಿ ಕಂಡು ಬರುವ ವಸ್ತುಗಳಲ್ಲಿ ಆಕೃತಿಗಳನ್ನು ಕಲ್ಪಿಸಿ.

ಉದಾ: ಮನೆಯಲ್ಲಿ ಬಳಸುವ ವಸ್ತುಗಳು.

**"ವಿಜ್ಞಾನ"**

- ವಿಜ್ಞಾನವು ಅವರ ಕುತೂಹಲ ಮತ್ತು ಸೃಜನಶೀಲತೆಯನ್ನು ಬೆಳೆಸಬೇಕು.
- ವಿಜ್ಞಾನವು ಚಲನಶೀಲವಾಗಿದ್ದು, ಯಾವಾಗಲೂ ತನ್ನ ಜ್ಞಾನ ಪರಿಧಿಯನ್ನು ವಿಸ್ತರಿಸಿಕೊಳ್ಳುವುದು ಮತ್ತು ಹೊಸ ಹೊಸ ಅನುಭವಗಳನ್ನು ಒಳಗೊಂಡಿದೆ.
- ವೈಜ್ಞಾನಿಕ ಪರಿಕಲ್ಪನೆಗಳನ್ನು ಪ್ರಯೋಗಗಳ ಮೂಲಕ ರೂಪಿಸಬಹುದು.

**"ಸಮಾಜ ವಿಜ್ಞಾನ"**

- ಪರಿಕಲ್ಪನೆಗಳು, ಸ್ಥಳೀಯ ಸಾಮಾಜಿಕತೆಯನ್ನು ಅರ್ಥೈಸಿಕೊಳ್ಳುವ ರೀತಿಯಲ್ಲಿರಬೇಕು.
- ರಾಷ್ಟ್ರೀಯ ಕಾಳಜಿಯನ್ನು ಉತ್ತೇಜಿಸುವ ದೃಷ್ಠಿಕೋನವನ್ನು ಹೊಂದಿರಬೇಕು.
- ಸ್ಥಳೀಯ ಆಡಳಿತ ಹಾಗೂ ಸಂಘ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ತಿಳಿಯುವುದು.
- ಸಾಮಾಜಿಕ ಮೌಲ್ಯಗಳ ಬಗ್ಗೆ ಪರಸ್ಪರ ನಂಬಿಕೆ, ಗೌರವ ಸಹಕಾರ ಮುಂತಾದ ಮೌಲ್ಯಗಳನ್ನು ಅರಿಯಬೇಕು.
- ವಾಸ್ತವತೆಗಳನ್ನು ವಿಮರ್ಶಾತ್ಮಕತೆಯಿಂದ ವಿಶ್ಲೇಷನೆ ಮಾಡುವುದು.

**ಕಲೆ**

ಕಲೆಗಳು ಜಾತ್ಯಾತೀತತೆಯ ಚೌಕಟ್ಟು ಮತ್ತು ಸಂಸ್ಕೃತಿಯ ವೈವಿಧ್ಯತೆಯ ಜೀವಂತೆ ಉದಾಹರಣೆಗಳಾಗಿವೆ. ಅವುಗಳಲ್ಲಿ ಜನಪದ, ಶಾಸ್ತ್ರೀಯ ಸಂಗೀಯ, ನೃತ್ಯ, ಗೊಂಬೆಯಾಟ, ಕುಶಲ ಕರ್ಮಿಗಳ ಕೆಲಸ, ರಂಗಭೂಮಿಯ ಪಾರಂಪರಿಕ ಕರಕುಶಲಕಲೆ, ಚಿತ್ರಕಲೆ ಇವುಗಳನ್ನು ಶಾಲಾ ಶಿಕ್ಷಣವನ್ನು ಒಂದು ವಿಷಯವಾಗಿ ಅಳವಡಿಸುವುದು.

**ಆರೋಗ್ಯ ಮತ್ತು ದೈಹಿಕ ಶಿಕ್ಷಣ:**

- ಮಗುವಿನ ದೈಹಿಕ, ಸಾಮಾಜಿಕ, ಭಾವನಾತ್ಮಕ, ಮಾನಸಿಕ ಬೆಳವಣಿಗೆ ಅವಶ್ಯಕವಾಗಿದೆ.
- ಕಲಿಕೆಯೊಂದಿಗೆ ಸಾಲದು, ಕಲಿಕೆಯೊಂದಿಗೆ ಸರ್ವಾಂಗೀಣ ಬೆಳವಣಿಗೆಗಾಗಿ ಆರೋಗ್ಯ ಮತ್ತು ದೈಹಿಕ ಶಿಕ್ಷಣ ಹಾಗೂ ಯೋಗ ಶಿಕ್ಷಣ ಅಗತ್ಯವಾಗಿದೆ.
- ತಜ್ಞ ವೈದ್ಯರಿಂದ ಆರೋಗ್ಯ ಶಿಕ್ಷಣದ ಬಗ್ಗೆ ಮಾಹಿತಿ ನೀಡುವುದು.
- ದಿನಾಚರಣೆಗಳ ಮೂಲಕ ಹೆಚ್‌ಐವಿ – ಏಡ್ಸ್, ಪರಿಸರ, ರಕ್ತದಾನ, ಪಲ್ಸ್ ಪೋಲಿಯೋ ಮಾಹಿತಿ ನೀಡುವುದು.

ಪಠ್ಯಕ್ರಮವು ಸಂಸ್ಕೃತಿಯ ಬಗ್ಗೆ ಅರಿವನ್ನು ಮೂಡಿಸುವುದರ ಮೂಲಕ ಗಮನ ಸೆಳೆಯುತ್ತದೆ. ವ್ಯವಸ್ಥೆಯಲ್ಲಿನ ಮಜಲುಗಳ ಬಗ್ಗೆ ಪ್ರತ್ಯಕ್ಷ ಮತ್ತು ಪರೋಕ್ಷ ಪ್ರಭಾವವನ್ನು ಬೀರುತ್ತವೆ.

**2005ರ ರಾಷ್ಟ್ರೀಯ ಪಠ್ಯಕ್ರಮದಲ್ಲಿ ಬದಲಾವಣೆ ಬಯಸುವ ಕ್ಷೇತ್ರಗಳನ್ನು ಹೀಗೆ ಗುರುತಿಸಬಹುದು.**

| **ಇದರಿಂದ** | **ಇದಕ್ಕೆ** |
|---|---|
| ➢ ಶಿಕ್ಷಕ ಕೇಂದ್ರಿತ | ➢ ವಿದ್ಯಾರ್ಥಿ ಕೇಂದ್ರಿತ |
| ➢ ಶಿಕ್ಷಕರಿಗೆ ನಿರ್ದೇಶನ ಮತ್ತು ತೀರ್ಮಾನಗಳು | ➢ ವಿದ್ಯಾರ್ಥಿಗಳಿಗೆ ಸ್ವಾಯತ್ತತೆ |
| ➢ ಕಲಿಕೆಯನ್ನು ಪ್ರೋತ್ಸಾಹಿಸುವ ಮನೋಭಾವ | ➢ ಕಲಿಕೆಯಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ |
| ➢ ಶಿಕ್ಷಕರಿಗೆ ಮಾರ್ಗದರ್ಶನ ಮತ್ತು ಪರಿಶೀಲನೆ | ➢ ಸುಗಮಕಾರರು |
| ➢ ಕಲಿಕೆಯಲ್ಲಿ ನಿಷ್ಕ್ರೀಯ ಮನೋಭಾವದ ನೆಲೆಯಲ್ಲಿ ಕಲಿಕೆ | ➢ ವಿಸ್ತೃತ ಸಾಮಾಜಿಕ |
| ➢ ಶಾಸ್ತ್ರಕ್ಕೆ ಮಹತ್ವ | ➢ ಶಿಕ್ಷಣಕ್ಕೆ ಮಹತ್ವ |

**ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2005ರ ದೃಷ್ಟಿಕೋನದಲ್ಲಿ ಗುಣಮಟ್ಟ:**

ಶಿಕ್ಷಣದ ಗುಣಮಟ್ಟ ಮತ್ತು ಹೊಣೆಗಾರಿಕೆಯನ್ನು ವರ್ಧಿಸಲು ಸಮುದಾಯ ಭಾಗವಹಿಸುವಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು ಮತ್ತು ಅದನ್ನು ಒಂದು ಸಾಧನವಾಗಿ ಬಳಸಿಕೊಂಡು ಸೂಕ್ತ ಮಾರ್ಗದರ್ಶನಗಳನ್ನು ರೂಪಿಸಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಲ ನೀಡುವಂತೆ ಸಲಹೆ ನೀಡಲಾಗಿದೆ. ಕಾರ್ಯ ನಿರ್ವಹಣೆಯಲ್ಲಿ ತಾಂತ್ರಿಕ ಭಿನ್ನತೆ, ಬ್ಲಾಕ್, ಕ್ಲಸ್ಟರ್ ಮತ್ತು ಶಾಲಾ ಹಂತದಲ್ಲಿ ಗುಣಮಟ್ಟವನ್ನು ಹೆಚ್ಚಿಸಲು ಶೈಕ್ಷಣಿಕ ಯೋಜನೆ ಮತ್ತು ಮುಂದಾಳತ್ವ ಇವುಗಳನ್ನು ಬಳಸಿಕೊಳ್ಳಬೇಕು.

"ಶಾಂತಿ ಮತ್ತು ಸಹಬಾಳ್ವೆಗಳನ್ನು ಒಳಗೊಂಡ ಮೌಲ್ಯಗಳೆಡೆಗೆ ಸೂಕ್ತ ಮಾರ್ಗದರ್ಶನ ನೀಡಬೇಕಾಗಿದೆ. ಶಿಕ್ಷಣದಲ್ಲಿ ಗುಣಮಟ್ಟ ಎಂಬುದು ಉತ್ತಮ ಬದುಕನ್ನು ಅಗತ್ಯವಾದ ಎಲ್ಲಾ, ಆಯಾಮಗಳನ್ನು ಒಳಗೊಂಡಿರುತ್ತದೆ. ಆದುದರಿಂದಲೇ ಶಾಂತಿ, ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ಬದಲಾವಣೆಗಳನ್ನು ತರುವ ಮನೋಭಾವವನ್ನು ಕೇವಲ ಮೌಲ್ಯಗಳೆಂದು ಭಾವಿಸದೇ ಗುಣಮಟ್ಟದ ಅತ್ಯಂತ ಮುಖ್ಯ ಅಂಗವೆಂದು ಭಾವಿಸಬೇಕು"

"ಮಕ್ಕಳಿಗೆ ಶಿಕ್ಷಣದ ಅವಧಿಯಲ್ಲಿ ಜ್ಞಾನ ಮತ್ತು ಕೌಶಲ್ಯಗಳ ಮೂಲಕ ಒದಗಿಸುವ ಅನುಭವಗಳ ದೃಷ್ಠಿಯಿಂದಲೂ ಗುಣಮಟ್ಟವನ್ನು ಅಳೆಯುವುದು ಅಗತ್ಯವಾಗಿದೆ"

"ಶಿಕ್ಷಣವನ್ನು ತಮ್ಮ ವೈಯಕ್ತಿಕ ವೃತ್ತಿಯನ್ನಾಗಿ ಸ್ವೀಕರಿಸಿ ಕೆಲಸ ಮಾಡುವ ಉತ್ಸಾಹಿ ಶಿಕ್ಷಕರ ಲಭ್ಯತೆಯೂ ಸಹ ಗುಣಮಟ್ಟದ ಒಂದು ಅಂಶ ಷರತ್ತು"

"ಮಗುವಿನ ಕಾರ್ಯ ಸಾಮರ್ಥ್ಯವೇ ವ್ಯವಸ್ಥೆಯನ್ನು ಸಾಧಿಸುವ ಗುಣಮಟ್ಟದ ಸಂಕೇತವೆಂದು ಭಾವಿಸಬೇಕು"

"ಭೌತಿಕ ಸಂಪನ್ಮೂಲಗಳನ್ನೇ ಗುಣಮಟ್ಟದ ಸಂಕೇತಗಳೆಂದು ಭಾವಿಸಲಾಗದು. ಆದರೂ ಸರ್ಕಾರ ಸ್ಥಳೀಯ ಸಂಸ್ಥೆಗಳಿಂದ ನಡೆಸಲ್ಪಡುವ ಶಾಲೆಗಳಲ್ಲಿ ಮೂಲ ಸ್ವರೂಪದ ಸೌಲಭ್ಯಗಳನ್ನೊಳಗೊಂಡ ಸಂಪನ್ಮೂಲದ ಅತೀ ಹೆಚ್ಚು ಮತ್ತು ದೀರ್ಘ ಕಾಲದ ಕೊರತೆ ಗುಣಮಟ್ಟದ ಬಗ್ಗೆ ಗಂಭೀರ ಪರಿಣಾಮವನ್ನುಂಟು ಮಾಡುತ್ತದೆ"

ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆಯ,ನೃಪತುಂಗ ರಸ್ತೆ, ಬೆಂಗಳೂರು–1

ಸಂಖ್ಯೆ: ಎಡಿಎಂ.2/ಶಾಮೊನಿ–97/2009–10 ದಿನಾಂಕ:04–03–2010

ಸುತ್ತೋಲೆ

ವಿಷಯ:– ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ವಹಿ ನಿರ್ವಹಣೆ ಕುರಿತು.

ಉಲ್ಲೇಖ:– ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಇವರ ಸುತ್ತೋಲೆ ಸಂಖ್ಯೆ: ಸಿಪ್ರಕಾ/ಪ್ರಾಪ್ರೌ.ಶಿ45/2010 ದಿನಾಂಕ 18.02.2010

*****

ಸರ್ಕಾರದ ಪತ್ರದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ವಹಿಯಲ್ಲಿ ಕೆಲವು ಕಡೆ ಹಾಜರಿದ್ದ ಮಕ್ಕಳಿಗೆ P ಹಾಗೂ ಗೈರುಹಾಜರಿದ್ದ ಮಕ್ಕಳಿಗೆ A ಎಂದು ನಮೂದಿಸುತ್ತಿರುವುದು ಕಂಡು ಬಂದಿದೆ. ಕೆಲವು ಕಡೆ ಒಂದು ಉದ್ದಗೆರೆ ಹಾಜರಿಗೆ ಗೈರುಹಾಜರಿಗೆ ಗೈ ಎಂದೂ A ಎಂದೂ ನಮೂದಿಸುತ್ತಿರುವುದು ರೂಡಿಯಲ್ಲಿರುವುದನ್ನು ಗಮನಿಸಲಾಗಿದೆ. ಇದರಿಂದಾಗಿ ಹಾಜರಾತಿ, ಗೈರುಹಾಜರಾತಿಗಳ ನಮೂದನೆಯಲ್ಲಿ ಗೊಂದಲಗಳುಂಟಾಗುವ ಸಾಧ್ಯತೆ ಇದೆ.

ಆದ್ದರಿಂದ ಮಕ್ಕಳ ಹಾಜರಾತಿ ವ್ಯವಸ್ಥೆಯಲ್ಲಿ ಅಗತ್ಯ ಸುಧಾರಣೆಗಾಗಿ ಹಾಗೂ ರಾಜ್ಯದಾದ್ಯಂತ ಏಕರೂಪ ವ್ಯವಸ್ಥೆ ತರುವ ನಿಟ್ಟಿನಲ್ಲಿ ಇನ್ನು ಮುಂದೆ ವಿದ್ಯಾರ್ಥಿಗಳ ಹಾಜರಾತಿ ವಹಿಯಲ್ಲಿ ಶಾಲೆಯ ತರಗತಿಗಳು ಪ್ರಾರಂಭವಾಗುವ ಮೊದಲು ಹಾಜರಿದ್ದ ಮಕ್ಕಳಿಗೆ 'ಹಾ' ಎಂದು ಗೈರುಹಾಜರಿದ್ದ ಮಕ್ಕಳಿಗೆ 'ಗೈರು' ಎಂದು ಕಡ್ಡಾಯವಾಗಿ ನಮೂದಿಸುವುದು.

ಮುಖ್ಯೋಪಾಧ್ಯಾಯರು ವರ್ಗವಾರು ಹಾಜರಾತಿ ವಹಿ ಪಡೆದು ಶಾಲೆಯ ಆ ದಿನದ ಒಟ್ಟಾರೆ ದಾಖಲಾತಿ / ಹಾಜರಾತಿಯ ಅಂಕಿ–ಸಂಖ್ಯೆಗಳನ್ನು ಪ್ರತ್ಯೇಕ ವಹಿಯಲ್ಲಿ ದಾಖಲಿಸಬೇಕು. ಈ ಕೆಲಸವನ್ನು ಆಯಾ ದಿನ ಶಾಲೆ ಪ್ರಾರಂಭವಾದ ಒಂದು ಗಂಟೆಯೊಳಗಾಗಿ ಮಾಡಬೇಕು.

ಮೇಲ್ಕಂಡ ಸರ್ಕಾರದ ಸೂಚನೆಗಳನ್ನು ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸುತ್ತಾ ತಮ್ಮ ವ್ಯಾಪ್ತಿಯಲ್ಲಿನ ಎಲ್ಲಾ ಶಾಲೆಗಳಲ್ಲಿ ಮೇಲ್ಕಂಡಂತೆ ವಿದ್ಯಾರ್ಥಿಗಳ ಹಾಜರಾತಿಗೆ ಸಂಬಂಧಿಸಿದಂತೆ ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸಿದೆ. ಹಾಜರಾತಿ ವಹಿಯಲ್ಲಿ ಯಾವುದೇ ತಿದ್ದುಪಡಿ, ತಿದ್ದಿ ಬರೆದಿರುವುದು ಮುಂತಾದವು ಕಂಡುಬಂದಲ್ಲಿ ಅಂತಹ ವರ್ಗಶಿಕ್ಷಕರು / ಸಿ.ಆರ್.ಸಿ/ ಮುಖ್ಯೋಪಾಧ್ಯಾಯರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲು ತಿಳಿಸಿದೆ.

ಸಹಿ/–

(ಬಿ.ಎ. ಹರೀಶ್ ಗೌಡ)

ಆಯುಕ್ತರು.

ಸಾರ್ವಜನಿಕ ಶಿಕ್ಷಣ ಇಲಾಖೆ

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ,ಬೆಂಗಳೂರು-1

ಸಂಖ್ಯೆ: ಎಡಿಎಂ.2/ಶಾಮೊನಿ-97/2009-10 ದಿನಾಂಕ:04-03-2010

ಸುತ್ತೋಲೆ

ವಿಷಯ:- ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮೊಬೈಲ್‌ಗಳ ಉಪಯೋಗಿಸುವಿಕೆಯನ್ನು ನಿಷೇಧಿಸುವ ಬಗ್ಗೆ.

ಉಲ್ಲೇಖ:-1.ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಇವರ ಸುತ್ತೋಲೆ ಸಂಖ್ಯೆ: ಶಿಪ್ರಕಾ.ಪ್ರಾಪ್ರೌಶಿ-44/2010 ದಿನಾಂಕ 18.02.2010

2.ಸರ್ಕಾರದ ಆದೇಶ ಸಂಖ್ಯೆ:ಇಡಿ 226 ಎಲ್‌ಐಬಿ 2007, ದಿ:-05.10.2007

******

ಶಿಕ್ಷಕ ಮತ್ತು ನೌಕರ ವರ್ಗದವರು ಅವರುಗಳು ಕಾರ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳಲ್ಲಿ ಮೊಬೈಲ್‌ಗಳನ್ನು ಉಪಯೋಗಿಸುತ್ತಿರುವುದರಿಂದ ಬೋಧನಾ ಚಟುವಟಿಕೆಗಳಿಗೆ ಅತೀವ ತೊಂದರೆಯಾಗುತ್ತಿರುವುದಾಗಿ ಸರ್ಕಾರದ ಗಮನಕ್ಕೆ ಬಂದಿದೆ. ಮೊಬೈಲ್ ಬಳಕೆ ಮಾಡಲಾಗುತ್ತಿರುವುದರಿಂದ ಉತ್ತಮ ವಾತಾವರಣವನ್ನು ಕಲುಷಿತಗೊಳಿಸಿದಂತಾಗಿ ಬೋಧನಾ ಕ್ರಮಕ್ಕೆ ಅಡ್ಡಿಯಾಗುತ್ತಿರುತ್ತದೆ. ಈ ಜ್ಞಾನ ಮಂದಿರಗಳ ಶಾಲೆಗಳಲ್ಲಿ ಉತ್ತಮ ವಾತಾವರಣವನ್ನು ಕಲ್ಪಿಸುವ ಸಲುವಾಗಿ ಮೊಬೈಲ್‌ಗಳ ಬಳಕೆ ಮಾಡುವುದನ್ನು ನಿಷೇಧಿಸುವುದು ಸೂಕ್ತವೆಂದು ಭಾವಿಸಲಾಗಿದೆ.

ಆದ್ದರಿಂದ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ ಮೊಬೈಲ್‌ಗಳನ್ನು ಬಳಕೆ ಮಾಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಶಾಲಾ ಅವಧಿಯಲ್ಲಿ ಯಾವುದೇ ಶಿಕ್ಷಕರು ಶಾಲೆಗಳಲ್ಲಿ ಮೊಬೈಲ್‌ಗಳನ್ನು ಉಪಯೋಗಿಸುವುದು ಕಂಡಲ್ಲಿ ಅವರ ಮೇಲೆ ಶಿಸ್ತು ಕ್ರಮ ಜರುಗಿಸಲು ಸೂಚಿಸಿದೆ. ಶಾಲೆಯ ಮುಖ್ಯಶಿಕ್ಷಕರು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಶಾಲಾ ಅವಧಿಯಲ್ಲಿ ಯಾವುದೇ ಶಿಕ್ಷಕರು ಮೊಬೈಲ್‌ಗಳನ್ನು ಬಳಸದೇ ಇರುವಂತೆ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

ಶಾಲಾ ಮುಖ್ಯ ಶಿಕ್ಷಕರಿಗೆ ಈ ನಿಷೇಧದಿಂದ ವಿನಾಯಿತಿ ನೀಡಲಾಗಿದ್ದರೂ ಸಹ ಅವರು ತಮ್ಮ ಬೋಧನಾ ಕಾರ್ಯದ ಅವಧಿಯಲ್ಲಿ ಮೊಬೈಲ್‌ಗಳನ್ನು ಬಳಸುವುದನ್ನು ನಿಷೇಧಿಸಿದೆ. ಯಾವುದೇ ಪ್ರಾಥಮಿಕ ಶಾಲೆ ಪ್ರೌಢಶಾಲೆಗಳಲ್ಲಿ ಶಾಲಾ ವೇಳೆಯಲ್ಲಿ ಮೊಬೈಲ್ ಉಪಯೋಗಿಸುತ್ತಿರುವುದು ಗಮನಕ್ಕೆ ಬಂದಲ್ಲಿ ಶಾಲೆಯ ಮುಖ್ಯ ಶಿಕ್ಷಕರೇ ಹೊಣೆಗಾರರಾಗುತ್ತಾರೆಂದು ತಿಳಿಸುತ್ತಾ, ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

ಸಹಿ/-

(ಬಿ.ಎ. ಹರೀಶ್ ಗೌಡ)

ಆಯುಕ್ತರು.

ಸಾರ್ವಜನಿಕ ಶಿಕ್ಷಣ ಇಲಾಖೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ
ಬೆಂಗಳೂರು – 560 001

ಸಂಖ್ಯೆ: ಎಡಿಎಂ.2/ಸಾಶಿಚ.102/2009–10 ದಿ: 18–03–2010

ಸುತ್ತೋಲೆ

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಜಿಲ್ಲೆಗಳಲ್ಲಿ ಮತ್ತು ಕ್ಷೇತ್ರಮಟ್ಟದಲ್ಲಿ ನಡೆಯುವ ಸಮ್ಮೇಳನಗಳು, ಕಾರ್ಯಾಗಾರಗಳನ್ನು ಮತ್ತು ಸಮಾವೇಶಗಳನ್ನು ಡಿಸೆಂಬರ್ ಅಂತ್ಯದೊಳಗೆ ಮುಗಿಸುವ ಬಗ್ಗೆ

ಉಲ್ಲೇಖ:–ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಇವರ ಸುತ್ತೋಲೆ, ಸಂಖ್ಯೆ:ಸಪ್ರಕಾ/ಪ್ರಾಪ್ರೌ.ಶಿ/ಆಶಾ.63 /2010.ದಿ:10.03.2010

*****

ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಜಿಲ್ಲೆಗಳಲ್ಲಿ, ಕ್ಷೇತ್ರಮಟ್ಟದಲ್ಲಿ ಹಾಗೂ ಶಾಲಾಮಟ್ಟದಲ್ಲಿ ಬಹಳಷ್ಟು ಸಮ್ಮೇಳನಗಳನ್ನು ಸಮಾವೇಶಗಳನ್ನು ಮತ್ತು ಕಾರ್ಯಾಗಾರ ಮುಂತಾದವುಗಳನ್ನು ಪ್ರತಿ ವರ್ಷ ನಡೆಸಲಾಗುತ್ತಿದೆ. ಶಿಕ್ಷಣದ ಜೊತೆಗೆ ಶೈಕ್ಷಣಿಕ ಹಾಗೂ ಇನ್ನಿತರೆ ಚಟುವಟಿಕೆಗಳನ್ನು ವಾರ್ಷಿಕ ಕ್ರಿಯಾಯೋಜನೆ ಪ್ರಕಾರ ಹಮ್ಮಿಕೊಳ್ಳಲಾಗುತ್ತಿದೆ.

ಕಳೆದ ಕೆಲವು ವರ್ಷಗಳಿಂದ ಶೈಕ್ಷಣಿಕ ವರ್ಷದ ಕೊನೆಯ ಮೂರು ತಿಂಗಳ ಕಾಲ ಅಂದರೆ ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಕೂಡ ಈ ರೀತಿಯ ಚಟುವಟಿಕೆಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದರೆ ಈ ಮೂರು ತಿಂಗಳಲ್ಲಿ ಸಂಪೂರ್ಣವಾಗಿ ಬೋಧನೆ, ಕೆಲಸ ಹಾಗೂ ಪರೀಕ್ಷಾ ಪೂರ್ವ ಚಟುವಟಿಕೆಗಳು ಆಗುವುದು ಅತೀ ಅವಶ್ಯಕವಾದುದು. ಬೇರೆ ಯಾವುದೇ ಚಟುವಟಿಕೆಗಳು ನಡೆಸಿದ್ದರೆ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ತಮ್ಮ ಸಂಪೂರ್ಣ ಗಮನವನ್ನು ತರಗತಿಯ ಕಡೆ ಕೊಡಲು ಸಾಧ್ಯವಾಗುವುದಿಲ್ಲ.

ಮೇಲೆ ವಿವರಿಸಿದ ಕಾರಣಗಳಿಗಾಗಿ ಉಲ್ಲೇಖದ ಸರ್ಕಾರದ ಸುತ್ತೋಲೆಯಲ್ಲಿ ಬರುವ ಶೈಕ್ಷಣಿಕ ವರ್ಷದಿಂದ 2010–11ನೇ ಸಾಲಿನಿಂದ ಎಲ್ಲಾ ಶೈಕ್ಷಣಿಕ ಮತ್ತು ಇತರೆ ಚಟುವಟಿಕೆಗಳನ್ನು ಡಿಸೆಂಬರ್ ಅಂತ್ಯದೊಳಗಾಗಿ ಮುಗಿಸಬೇಕೆಂದು ಸೂಚಿಸಲಾಗಿದೆ, ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಬೋಧನೆ ಹಾಗೂ ಪರೀಕ್ಷಾ ಪೂರ್ವ ಚಟುವಟಿಕೆಗಳಿಗೆ ಆದ್ಯತೆ ನೀಡುವಂತೆ ಸೂಚನೆ ನೀಡಿದೆ ಹಾಗೂ ಇದನ್ನು ಎಲ್ಲಾ ಹಂತದಲ್ಲಿಯೂ ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳಿಸಿದೆ.

ಮೇಲ್ಕಂಡ ಸರ್ಕಾರದ ಸೂಚನೆಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸುತ್ತಾ ಈ ಬಗ್ಗೆ ಎಲ್ಲಾ ಹಂತದಲ್ಲಿಯೂ ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳಿಸಿದೆ.

ಸಹಿ/–
(ಬಿ.ಎ. ಹರೀಶ್ ಗೌಡ)
ಆಯುಕ್ತರು.
ಸಾರ್ವಜನಿಕ ಶಿಕ್ಷಣ ಇಲಾಖೆ

## <u>ಶಾಲಾ ಸಂದರ್ಶನದ ನಮೂನೆ</u>

- ✓ ಶಾಲೆಯ ಹೆಸರು/ವಿಳಾಸ :
- ✓ ಶಾಲೆಯ ಮುಖ್ಯೋಪಾಧ್ಯಾಯರ ಹೆಸರು:
- ✓ ಸಂದರ್ಶನದ ದಿನಾಂಕ:

| | |
|---|---|
| * ಹಿಂದಿನ ಸಂದರ್ಶನದ ಅವಧಿಯಲ್ಲಿ ನೀಡಿದ ಸಲಹೆಗಳ ಅನುಪಾಲನೆಯ ವಿವರ ಹಾಗೂ ನೀಡಿದ ಸಲಹೆ. | |
| * ಶಾಲೆಯ ಆವರಣ, ತರಗತಿ ಕೋಣೆಗಳು, ಕುಡಿಯುವ ನೀರು, ಶೌಚಾಲಯ; ಅಡುಗೆಕೋಣೆ ಇವುಗಳ ಸ್ವಚ್ಛತೆ ಮತ್ತು ಬಳಕೆಯ ಕುರಿತು | |
| * ಶಾಲೆಯಲ್ಲಿ ಇರುವ ಸೌಲಭ್ಯಗಳಾದ ಗ್ರಂಥಾಲಯ, ಗಣಕ ಯಂತ್ರಗಳು, ಟಿವಿ, ರೇಡಿಯೋ, ವಿಜ್ಞಾನ ಉಪಕರಣಗಳು, ಕ್ರೀಡೆ ಮತ್ತು ಸಂಗೀತಕ್ಕೆ ಸಂಬಂಧಿಸಿದ ಉಪಕರಣಗಳ ಸುಸ್ಥಿತಿ ಮತ್ತು ಬಳಕೆಯ ಕುರಿತು. | |
| * ಶಾಲಾ ಹಂತದಲ್ಲಿ ಮತ್ತು ಕ್ಲಸ್ಟರ್ ಹಂತದಲ್ಲಿ ಸಹಪಠ್ಯ ಚಟುವಟಿಕೆಯ ಸಂಘಟನೆ ಮತ್ತು ಭಾಗವಹಿಸುವಿಕೆ ಕುರಿತು | |
| * ಮಕ್ಕಳ ದಾಖಲಾತಿ; ಹಾಜರಾತಿ, ಮಕ್ಕಳ ಕಲಿಕೆ, ಗೈರುಹಾಜರಿ ಮತ್ತು ಈ ಕುರಿತು ಅಧ್ಯಾಪಕರು ಮತ್ತು ಎಸ್.ಡಿ.ಎಂ.ಸಿ.ಯವರು ಕೈಗೊಂಡಿರುವ ಕ್ರಮಗಳು. ಅಧ್ಯಾಪಕರ ಹಾಜರಾತಿ ಕುರಿತು ಎಸ್‌ಡಿಎಂಸಿಯವರು ನಡೆಸಿದ ಕ್ರಮಗಳು. | |
| * ಫ್ಲಾನೆಲ್ ಬೋರ್ಡ್; ತರಗತಿಗೊಂದು ಕಿರುಹೊತ್ತಿಗೆ, ಮಕ್ಕಳ ಅಭಿವ್ಯಕ್ತಿಗೆ ಕಲ್ಪಿಸಿರುವ ಅವಕಾಶಗಳ ಅವಲೋಕನ / ಹಿಮ್ಮಾಹಿತಿ | |
| * ಅಧ್ಯಾಪಕರು/ವಿದ್ಯಾರ್ಥಿಗಳು ತಯಾರಿಸಿರುವ ಕಲಿಕಾ-ಬೋಧನಾ ಸಾಮಾಗ್ರಿಗಳು ಮತ್ತು ಅವುಗಳ ಬಳಕೆ | |
| * ಮುಖ್ಯೋಪಾಧ್ಯಾಯರು ನಡೆಸುತ್ತಿರುವ ಶೈಕ್ಷಣಿಕ ಮೇಲ್ವಿಚಾರಣೆ: (ವ್ಯವಸ್ಥೆಯ ಏಣಿ-ಶ್ರೇಣಿಯಲ್ಲಿನ ಹಿರಿಯ ಅಧಿಕಾರಿ / ಮೇಲ್ವಿಚಾರಕರು ಈ ಮಾಹಿತಿಯನ್ನು ಅವಲೋಕಿಸಿ ಹಿಮ್ಮಾಹಿತಿ ನೀಡಬೇಕು.) | |
| ✓ ಸಹೋಪಾಧ್ಯಾಯರ ತರಗತಿ ಸಿದ್ಧತೆ | |
| ✓ ಸಹೋಪಾಧ್ಯಾಯರು ನಡೆಸುತ್ತಿರುವ ಮೌಲ್ಯಮಾಪನ ಮತ್ತು ನೀಡುತ್ತಿರುವ ಹಿಮ್ಮಾಹಿತಿ. | |
| ✓ ತಿಂಗಳಿಗೊಮ್ಮೆ ಎಲ್ಲಾ ತರಗತಿಗಳಿಗೆ ಭೇಟಿ ನೀಡಿ ಮಕ್ಕಳ ಕಲಿಕೆಯ ಪ್ರಗತಿ ಪರಿಶೀಲನೆ ಮತ್ತು ನೀಡಲಾದ ಹಿಮ್ಮಾಹಿತಿ | |

| | |
|---|---|
| ✓ ತಿಂಗಳಿಗೊಮ್ಮೆ ಅಧ್ಯಾಪಕರ ಪಾಠ ವೀಕ್ಷಣೆ ಮಾಡಿ ನೀಡಿದ ಹಿಮ್ಮಾಹಿತಿ | |
| ✓ ತಿಂಗಳಿಗೊಮ್ಮೆ ನಡೆಸಲಾಗುತ್ತಿರುವ ಅಧ್ಯಾಪಕರ ಸಭೆಗಳು | |
| ✓ ತಿಂಗಳಿಗೊಮ್ಮೆ ನಡೆಸಲಾಗುತ್ತಿರುವ SDMC ಸಭೆಗಳು ಮತ್ತು ನಡವಳಿಯ ಅನುಷ್ಠಾನ | |
| * ನೀಡಿದ ಪಾಠದ/ಕಲಿಕಾಂಶದ ಪ್ರಾತ್ಯಕ್ಷಿಕೆಯ ವಿವರ | |
| * ತಯಾರಿಸಿ ತೋರಿಸಿದ ಅಥವ ತಾವೇ ತಯಾರಿಸಿಕೊಂಡು ತಂದ ಟಿ.ಎಲ್.ಎಂ ಗಳ ಪ್ರಾತ್ಯಕ್ಷಿಕೆಯ ವಿವರ | |
| * ಅಧ್ಯಾಪಕರು ನಡೆಸಿದ ಕ್ರಿಯಾಸಂಶೋಧನೆಗಳು/ಕಲಿಕೆ-ಬೋಧನೆಯಲ್ಲಿ ಬಳಸುತ್ತಿರುವ ಹೊಸ ವಿಧಾನ/ಕ್ರಮಗಳು ಅವುಗಳ ಪ್ರಸ್ತುತತೆ | |
| * 02/03 ತರಗತಿಗಳಿಗೆ ಭೇಟಿ ನೀಡಿ ಮಕ್ಕಳ ಕಲಿಕೆಯ ಪ್ರಗತಿಯನ್ನು ಪರೀಕ್ಷಿಸಿದಾಗ ಕಂಡುಬಂದ ಸ್ಥಿತಿಯ ವಿವರ ಮತ್ತು ಹಿಮ್ಮಾಹಿತಿ ಕುರಿತು | |
| * ತರಗತಿ ಪ್ರಕ್ರಿಯೆ ನಮೂನೆ | ಅನುಬಂಧಿಸಿದೆ |
| * ನಿರ್ಮಿಸಲಾಗುತ್ತಿರುವ ಸಿವಿಲ್ ಕಾಮಗಾರಿಗಳ ವಿವರ ಮತ್ತು ಅವುಗಳ ಗುಣಮಟ್ಟ ಕುರಿತು | |
| * ಶಾಲಾಮಕ್ಕಳಿಗೆ ನೀಡಿದ ವಿವಿಧ ಪ್ರೋತ್ಸಾಹಕಗಳ ವಿತರಣೆ/ಸಮರ್ಪಕತೆ | |
| * ಅಕ್ಷರ ದಾಸೋಹ ದಾಸ್ತಾನು ವಿವರ | |
| * ನಗದು ಪುಸ್ತಕದ/ಪಾಸ್ ಪುಸ್ತಕಗಳ ವಿವರ (ಹಿರಿಯ ಅಧಿಕಾರಿಗಳು/ಉಸ್ತುವಾರಿದಾರರು ನೋಡಲಿ) | |

**ಸಂದರ್ಶಕರ ಸಹಿ**

ಟಿಪ್ಪಣಿ : √ ತರಗತಿ ಪ್ರಕ್ರಿಯೆ ಹೊರತುಪಡಿಸಿ-ಉಳಿದ ಭಾಗಗಳನ್ನು ಸಂದರ್ಶನ ಪುಸ್ತಕದಲ್ಲಿ ನಮೂದಿಸತಕ್ಕದ್ದು.

√ ಸಂದರ್ಶನ ವೇಳೆಯಲ್ಲಿ ಕನಿಷ್ಠ ಒಂದು ಪಾಠಬೋಧನೆಯನ್ನು ವೀಕ್ಷಿಸಿ ಹಿಮ್ಮಾಹಿತಿ ನೀಡಬೇಕು. ಆದರೆ ಶಾಲಾ ಮೌಲ್ಯಮಾಪನ ಸಂಧರ್ಭದಲ್ಲಿ ಎಲ್ಲಾ ಅಧ್ಯಾಪಕರ ಪಾಠ ವೀಕ್ಷಣೆ ಮಾಡುವುದು.

√ ಮುಖ್ಯೋಪಾಧ್ಯಾಯರೂ ಸೇರಿದಂತೆ ಎಲ್ಲಾ ಹಂತದ ಅಧಿಕಾರಿಗಳೂ-ತರಗತಿ ಪ್ರಕ್ರಿಯೆ ನಮೂನೆ ಬಳಸಬಹುದು.

# ತರಗತಿ ಪ್ರಕ್ರಿಯೆಗಳನ್ನು ವೀಕ್ಷಿಸಲು ನಮೂನೆ

(NCF-05 ಮತ್ತು RTE- 09 ರನ್ವಯ)

ಸೂಚನೆ : ತರಗತಿಯ ಪ್ರಕ್ರಿಯೆ ಲವಲವಿಕೆಯಿಂದ ಕೂಡಿರಬೇಕೆಂಬ ಆಶಯದ ಹಿನ್ನೆಲೆಯಲ್ಲಿ ಈ ನಮೂನೆ ತಯಾರಾಗಿದೆ. ನಾಲ್ಕು ಆಯಾಮಗಳಲ್ಲಿ ತರಗತಿ ಬೋಧನೆಯನ್ನು ವೀಕ್ಷಿಸಲಾಗುತ್ತದೆ. ಪ್ರತಿ ಆಯಾಮದಡಿ ವಿವಿಧ ಸೂಚನಾತ್ಮಕ ಪ್ರಶ್ನೆಗಳಿವೆ. ಇವುಗಳಿಗೆ ಪ್ರತಿಯಾಗಿ ವಸ್ತುಸ್ಥಿತಿಯನ್ನು 05 ಬಿಂದು ಶ್ರೇಣಿಯಲ್ಲಿ ಮಾಪಿಸುವುದು. 1–ಎಂದರೆ ಕನಿಷ್ಠ; 2–ಸುಧಾರಿಸಬೇಕು; 3–ಪರವಾಗಿಲ್ಲ; 4– ಸಮಾಧಾನಕರ; 5–ಉತ್ತಮ. ಕೊರತೆಯಿರುವ ಅಂಶಗಳಿಗೆ ಯುಕ್ತವಾದ ಸಲಹೆಗಳನ್ನು ದಾಖಲಿಸಿ.

ತರಗತಿ :
ವಿಷಯ :
ಕಲಿಕಾಂಶ :
ದಾಖಲಾತಿ :
ತರಗತಿ ಹಾಜರಾತಿ :

ಅಧ್ಯಾಪಕರ ಹೆಸರು :

| • **ಕಲಿಕೆಗೆ ಪೂರಕ ವಾತಾವರಣ** | 1 | 2 | 3 | 4 | 5 | ನೀಡಿದ ಸಲಹೆ |
|---|---|---|---|---|---|---|
| 1. ತರಗತಿ ಕೋಣೆ ಸ್ವಚ್ಛವಾಗಿದೆ/ ಆಕರ್ಷಕವಾಗಿದೆ | | | | | | |
| 2. ಕಪ್ಪುಹಲಗೆಯು ಚೆನ್ನಾಗಿದೆ | | | | | | |
| 3. ಕಪ್ಪು ಹಲಗೆಯ ಇಕ್ಕೆಲಗಳಲ್ಲಿ ಭೂಪಟ/ನಕಾಶೆ ತೋರಿಸಲು ಮೊಳೆ ಜೋಡಿಸಿದ್ದಾರೆ/ಸಮರ್ಪಕವಾಗಿದೆ (ಗೋಡೆ ಛಿದ್ರವಾಗಿಲ್ಲ.) | | | | | | |
| 4. ಮಕ್ಕಳ ಕೂಡುವ ವ್ಯವಸ್ಥೆ ಸಮರ್ಪಕವಾಗಿದೆ | | | | | | |
| 5. ಕಲಿಕಾ ಬೋಧನಾ ಸಾಮಗ್ರಿಯನ್ನು ವ್ಯವಸ್ಥಿತವಾಗಿ ಜೋಡಿಸಿ ಇಡಲಾಗಿದೆ | | | | | | |
| 6. ಗಾಳಿ ಬೆಳಕಿನ ವ್ಯವಸ್ಥೆ ಚೆನ್ನಾಗಿದೆ | | | | | | |

ಒಟ್ಟು ಅಂಕ

| • **ತರಗತಿಯ ಸಿದ್ಧತೆ** | 1 | 2 | 3 | 4 | 5 | ನೀಡಿದ ಸಲಹೆ |
|---|---|---|---|---|---|---|
| 1. ಅಧ್ಯಾಪಕರು ಮಾಡಿರುವ ಪಾಠಯೋಜನೆಯು ಎಲ್ಲಾ ಹಂತಗಳನ್ನೂ ಒಳಗೊಂಡಿದ್ದು ಕಲಿಕೆ ಬೋಧನೆಯ ಉದ್ದೇಶಗಳಿಗೆ ಅನುಗುಣವಾಗಿ ತರಗತಿ ಪ್ರಕ್ರಿಯೆಗಳನ್ನು ರೂಪಿಸಿರುತ್ತಾರೆ. | | | | | | |
| 2. ಆಯ್ದ ಕಲಿಕೆ, ಬೋಧನೆ ಅಂಶಗಳಿಗೆ ಅನುಗುಣವಾಗಿ ಕಲಿಕೆ ಬೋಧನೆ ಉಪಕರಣಗಳನ್ನು ಜೋಡಿಸಿಕೊಂಡಿರುವುದು ಸಮರ್ಪಕವಾಗಿದೆ. | | | | | | |
| 3. ಬಹುವರ್ಗ ಕಲಿಕಾ ಬೋಧನೆ ಇದ್ದ ಸಂದರ್ಭವಿದ್ದರೆ ಮಾಡಿದ ವ್ಯವಸ್ಥೆಯ ಸಮರ್ಪಕತೆ | | | | | | |
| 4. ಎಲ್ಲಾ ಮಕ್ಕಳು ಪಠ್ಯಪುಸ್ತಕ ಹೊಂದಿರುತ್ತಾರೆ | | | | | | |
| 5. ನಿಗದಿತ ವೇಳಾಪಟ್ಟಿಯಂತೆ ತರಗತಿ ಕೋಣೆಯಲ್ಲಿ ಶಿಕ್ಷಕರು ಪಾಠ ಮಾಡುತ್ತಿದ್ದಾರೆ. | | | | | | |

ಒಟ್ಟು ಅಂಕ

| • ತರಗತಿಯ ಕಲಿಕೆ ಬೋಧನೆಯ ಪ್ರಕ್ರಿಯೆ | 1 | 2 | 3 | 4 | 5 | ನೀಡಿದ ಸಲಹೆ |
|---|---|---|---|---|---|---|
| 1. ಪೂರ್ವಸಿದ್ಧತಾ ಚಟುವಟಿಕೆಯಲ್ಲಿ ಎಲ್ಲ ಮಕ್ಕಳೂ ಸಕ್ರಿಯವಾಗಿ ಭಾಗವಹಿಸಿದ್ದರು; ಮತ್ತು ಚಟುವಟಿಕೆಗಳು ಸಮರ್ಪಕವಿದ್ದವು. | | | | | | |
| 2. ಕಲಿಕಾಪೂರ್ವ ಚಟುವಟಿಕೆಗಳು ಸಮರ್ಪಕವಾಗಿದ್ದವು ಮತ್ತು ಎಲ್ಲಾ ಮಕ್ಕಳೂ ಭಾಗವಹಿಸಿದ್ದರು. | | | | | | |
| 3. ಅಧ್ಯಾಪಕರ ಪ್ರಶ್ನಿಸುವಿಕೆಯಲ್ಲಿ ಸ್ಪಷ್ಟತೆ ಇತ್ತು. | | | | | | |
| 4. ಪ್ರಶ್ನೆಗಳು ಎಲ್ಲಾ ಮಕ್ಕಳಿಗೆ ಸಮಾನವಾಗಿ ಹಂಚಿಕೆಯಾಗಿದ್ದವು | | | | | | |
| 5. ಮಕ್ಕಳು ಉತ್ತರಿಸದಿದ್ದಾಗ ನೀಡುತ್ತಿದ್ದ ಸೂಚನಾತ್ಮಕ ಪ್ರಶ್ನೆಗಳು (Clue)ಸಮಂಜಸವಾಗಿದ್ದವು | | | | | | |
| 6. ಮಕ್ಕಳಿಂದ ಉತ್ತರ ಪಡೆದ ತರುವಾಯ ಅದನ್ನು ಸಾಮಾನ್ಯೀಕರಿಸುವ ಕ್ರಮ ಸಮರ್ಪಕವಾಗಿತ್ತು | | | | | | |
| 7. ಅಧ್ಯಾಪಕರು ನೀಡುತ್ತಿದ್ದ ವಿವರಣೆಯ ಧ್ವನಿ ಎಲ್ಲಾ ಮಕ್ಕಳಿಗೂ ಕೇಳಿಸುತ್ತಿತ್ತು | | | | | | |
| 8. ವಿವರಣೆಯಲ್ಲಿ ಖಚಿತತೆ ನಿರರ್ಗಳತೆ ಕಂಡುಬರುತ್ತಿತ್ತು | | | | | | |
| 9. ವಿವರಣೆಯು ತರ್ಕಬದ್ಧವಾಗಿ ಜೋಡಿಸಲ್ಪಟ್ಟಿತ್ತು | | | | | | |
| 10. ಎಲ್ಲಾ ವಿಷಯವನ್ನು ತಾವೇ ಹೇಳದೆ ಮಕ್ಕಳೂ ಭಾಗವಹಿಸಿ ಉತ್ತರಿಸುವಂತೆ ಇತ್ತು. | | | | | | |
| 11. ವಿವರಣೆಯನ್ನು ಎಲ್ಲ ಮಕ್ಕಳು ಕುತೂಹಲದಿಂದ ಆಲಿಸುತ್ತಿದ್ದರು | | | | | | |
| 12. ಮಕ್ಕಳ ಅವಧಾನವನ್ನು ಕೇಂದ್ರೀಕರಿಸುವ ತಂತ್ರ ಪರಿಣಾಮಕಾರಿಯಾಗಿತ್ತು. | | | | | | |
| 13. ಹೊರಾಂಗಣ ಚಟುವಟಿಕೆ ಯೋಜನಾ ವಿಧಾನ; ಗುಂಪು ಚಟುವಟಿಕೆ; ಸಂದರ್ಶನ ಚಟುವಟಿಕೆ; ಮಾರ್ಗದರ್ಶಿತ ಪ್ರಾತ್ಯಕ್ಷಿಕೆ; ಚರ್ಚೆ; ಸಂಶೋಧನಾತ್ಮಕ ವಿಧಾನ ಅಥವಾ ಅನುಗಮನ ಬೋಧನ ಕ್ರಮಗಳ ಮೂಲಾಂಶಗಳ ಬಳಕೆ | | | | | | |

| | | | | | | |
|---|---|---|---|---|---|---|
| ಮುಂತಾದ 2 ಅಥವಾ 3 ಬೋಧನಾ ವಿಧಾನಗಳನ್ನು ತರಗತಿಯಲ್ಲಿ ಬಳಸಲಾಯಿತು. | | | | | | |
| 14. ಬಳಸಿದ ಬೊಧನಾ ವಿಧಾನ/ಬೋಧನಾ ಕ್ರಮಗಳ ಚಟುವಟಿಕೆಗಳು ಆಯಾ ಕಲಿಕಾಂಶಕ್ಕೆ ಪೂರಕವಾಗಿದ್ದವು. | | | | | | |
| 15. ಬಳಸಿದ ಬೋಧನಾ ವಿಧಾನ/ಬೋಧನಾ ಕ್ರಮಗಳ ಚಟುವಟಿಕೆಗಳು ಮಕ್ಕಳ ಮಟ್ಟಕ್ಕೆ ಇದ್ದವು | | | | | | |
| 16. ಅಧ್ಯಾಪಕರು ಬಳಸಿದ ಕೆಲವು ಕಲಿಕೋಪಕರಣ ಗಳು ಮಕ್ಕಳು ಕೂಡಾ ಬಳಸುವಂತೆ ಇದ್ದವು, ಅಥವ ಬಳಸಲು ಅವಕಾಶವಿತ್ತರು. | | | | | | |
| 17. ಬಳಸಿದ ಕಲಿಕೋಪಕರಣಗಳನ್ನು ಎಲ್ಲಾ ಮಕ್ಕಳಿಗೆ ಕಾಣುವಂತೆ ಪ್ರದರ್ಶಿಸಲಾಯಿತು. | | | | | | |
| 18. ತರಗತಿಯ ಸನ್ನಿವೇಶಗಳನ್ನು ಕಲಿಕೆಯ ಸಂದರ್ಭದಲ್ಲಿ ಬಳಸಿಕೊಳ್ಳಲಾಯಿತು | | | | | | |
| 19. ಸ್ಥಳೀಯ ಸನ್ನಿವೇಶಗಳಿಗೆ ಅಥವಾ ಪಠ್ಯದ ಇತರ ಕಲಿಕಾಂಶಗಳಿಗೆ ಪ್ರಸ್ತುತ ಕಲಿಕಾಂಶಗಳನ್ನು ಹೋಲಿಕೆ ಮಾಡಲಾಯಿತು. | | | | | | |
| 20. ಕಪ್ಪು ಹಲಗೆಯ ಕೆಲಸವು ಕ್ರಮಬದ್ಧವಾಗಿತ್ತು | | | | | | |
| 21. ಕಪ್ಪುಹಲಗೆಯ ಬರಹ ಸ್ಪಷ್ಟವಾಗಿಯೂ/ ಗುಂಡಾಗಿಯೂ ಇದ್ದಿತು. | | | | | | |
| 22. ಅಧ್ಯಾಪಕರು ಕೋಪಿಸಿಕೊಳ್ಳುವುದು/ ಬೇಸರ ಮಾಡುತ್ತಿರುವುದು ಕಂಡುಬರಲಿಲ್ಲ. | | | | | | |
| 23. ಉತ್ತಮ ವರ್ತನೆಗಳನ್ನು ಅಧ್ಯಾಪಕರು ಗಮನಿಸಿ ಯುಕ್ತವಾಗಿ ಮೆಚ್ಚುತ್ತಿದ್ದರು | | | | | | |
| 24. ಅಧ್ಯಾಪಕ/ಕಿಯರ ವೇಷಭೂಷಣ/ಹಾವ-ಭಾವ ಮುಂತಾದವು ಮಕ್ಕಳ ಅವಧಾನ ವಿಚಲನೆಗೆ ಕಾರಣವಾಗಲಿಲ್ಲ. | | | | | | |
| 25. ಕುಶಲಕರ್ಮಿಗಳು/ಸಮುದಾಯದ ಸಂಪನ್ಮೂಲ ವ್ಯಕ್ತಿಗಳನ್ನು ಕಲಿಕೆ-ಬೋಧನೆಯಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ. | | | | | | |
| 26. ಮೌಲ್ಯಮಾಪನವನ್ನು ಮಾಡಲು ಬಳಸಿದ ಕ್ರಮದ ಸಮರ್ಪಕತೆ | | | | | | |
| ಅನುಸರಿಸಿದ ಬೋಧನಾ ವಿಧಾನ; | | | | | | |
| ಅದು ಶಿಶುಕೇಂದ್ರಿತವೇ ? | | | | | | |

ಒಟ್ಟು ಅಂಕ

| • ಮಕ್ಕಳ ಭಾಗವಹಿಸುವಿಕೆ | 1 | 2 | 3 | 4 | 5 | ನೀಡಿದ ಸಲಹೆ |
|---|---|---|---|---|---|---|
| 1. ಎಲ್ಲಾ ಮಕ್ಕಳು ಶಿಕ್ಷಕರು ನೀಡುವ ಚಟುವಟಿಕೆಯಲ್ಲಿ ಭಾಗವಹಿಸುತ್ತಾರೆ. | | | | | | |
| 2. ಕಲಿಕಾಂಶಗಳನ್ನು ಕಲಿಯುವಾಗ ಮಕ್ಕಳು ಪರಸ್ಪರ ತಮ್ಮ ವಿಚಾರಗಳನ್ನು ಹಂಚಿಕೊಳ್ಳುತ್ತಿದ್ದರು ಹಾಗೂ ಅಂಜಿಕೆಯಿಲ್ಲದೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು. | | | | | | |
| 3. ಮಕ್ಕಳು ಪ್ರಶ್ನೆಗಳನ್ನು ಅಧ್ಯಾಪಕರಿಗೆ ಕೇಳುತ್ತಾರೆ ಇದಕ್ಕೆ ಪೂರಕವಾಗಿ ಅಧ್ಯಾಪಕರು ಹುಡುಕಾಟದ ಪ್ರಶ್ನೆ/ಸನ್ನಿವೇಶವನ್ನು ಸೃಷ್ಟಿಸುತ್ತಾರೆ. | | | | | | |
| 4. ಕಲಿಕೋಪಕರಣಗಳನ್ನು ಕಲಿಕಾಂಶಗಳನ್ನು ಅರ್ಥಮಾಡಿಕೊಳ್ಳಲು ಬಳಸುತ್ತಾರೆ. | | | | | | |
| 5. ಮಕ್ಕಳಿಗೆ ಕಲಿಕಾ ವಿಷಯದ ಕುರಿತು ಇರುವ ಅನುಭವವನ್ನು/ಪೂರ್ವಜ್ಞಾನವನ್ನು ಕಲಿಕೆ ಬೋಧನೆಯ ವೇಳೆಯಲ್ಲಿ ವ್ಯಕ್ತಪಡಿಸಿದರು. | | | | | | |
| 6. ಮಕ್ಕಳು ಅಧ್ಯಾಪಕರು ನೀಡಿದ ಕಲಿಕೆಯ ಅನುಭವ ಮತ್ತು ತಮ್ಮ ನಡುವಿನ ಚರ್ಚೆ ಮುಂತಾದ ಚಟುವಟಿಕೆಗಳಿಂದ ಪರಿಕಲ್ಪನೆಗಳನ್ನು ತಾವೇ ಕಟ್ಟಿಕೊಳ್ಳುತ್ತಾರೆ. | | | | | | |
| 7. ಯಾವುದೇ ವಿದ್ಯಾರ್ಥಿಯು ಅಧ್ಯಾಪಕರಿಂದಾಗಲೀ ಅಥವಾ ಸಹಪಾಠಿಗಳಿಂದಾಗಲೀ ಕಡೆಗಣಿಸಲ್ಪಡಲಿಲ್ಲ. | | | | | | |
| 8. ಎಲ್ಲಾ ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ಗೌರವಿಸುವ ವಾತಾವರಣ ತರಗತಿಯಲ್ಲಿ ಇದೆ. | | | | | | |
| 9. ಮಕ್ಕಳ ಉತ್ತಮ ವರ್ತನೆಗಳನ್ನು (ಕಲಿಕಾಂಶಗಳಿಗೆ ಸಂಬಂಧಿಸಿದಂತೆ ಹಾಗೂ ಇತರ ವಿಶೇಷ ಪ್ರಕರಣಗಳಿಗೆ ಸಂಬಂಧಿಸಿದಂತೆ) ಅಧ್ಯಾಪಕರು ಗುರುತಿಸಿದಾಗ–ಮಕ್ಕಳು ಸಂತೋಷಪಡುತ್ತಾರೆ. | | | | | | |
| 10. ಮಕ್ಕಳ ಮುಖದಲ್ಲಿ ಮಂದಹಾಸವಿತ್ತು. | | | | | | |
| 11. ಹಿಂಜರಿಕೆ, ನಿಧಾನಕಲಿಕೆ, ಮಕ್ಕಳ ಕುರಿತು ವಹಿಸಿದ ಕಾಳಜಿಯಿಂದಾಗಿ ಅಂತಹ ಮಕ್ಕಳೂ ಕಲಿಕೆಯಲ್ಲಿ ಪಾಲ್ಗೊಂಡರು. | | | | | | |
| 12. ಮಕ್ಕಳ ನಡುವೆ ತಾರತಮ್ಯ ಮಾಡುವ ಅಂಶಗಳು ಬೋಧನಾ ಅವಧಿಯಲ್ಲಿ ಕಂಡು ಬರಲಿಲ್ಲ. | | | | | | |

| | | | | | | |
|---|---|---|---|---|---|---|
| 13. ಪ್ರತಿ ಮಗುವಿಗೂ ಒಂದೊಂದು ಪ್ರತ್ಯೇಕ ಕಡತ ಇದೆ ಮತ್ತು ಅದು ಯುಕ್ತವಾಗಿ ತುಂಬಲ್ಪಟ್ಟಿದೆ. | | | | | | |
| 14. ಕಲಿಕಾ ಬೋಧನಾ ಚಟುವಟಿಕೆಗಳು ಪಠ್ಯ ಪುಸ್ತಕಗಳನ್ನು ಮೀರಿಯೂ ಇರುವ ಸಂದರ್ಭಗಳು ಇವೆ. | | | | | | |
| 15. ಮಕ್ಕಳು ಕಲಿತ ಮಟ್ಟ | | | | | | |
| 16. ಗೃಹಪಾಠ ಚಟುವಟಿಕೆಯಿಂದ ಕೂಡಿತ್ತು / ಸಮುದಾಯದ ಸಂಪನ್ಮೂಲ ಬಳಸಿಕೊಂಡು ಗೃಹಪಾಠವನ್ನು ಪೂರ್ಣಗೊಳಿಸಲು ಅವಕಾಶಗಳಿದ್ದವು. | | | | | | |

ಸಾಮಾನ್ಯ ಅಭಿಪ್ರಾಯ (ನಿರ್ದಿಷ್ಟ ಸಲಹೆಗಳು)

ಒಟ್ಟು ಅಂಕ

ಎಲ್ಲಾ ಅಂಶಗಳ ಒಟ್ಟು

ಅಂಕಗಳು

ಒಟ್ಟಾರೆ ಶ್ರೇಣಿ :

| < 50 | 50-60 | 61-70 | 71-80 | > 80 | ಪ್ರತಿಶತ |
|---|---|---|---|---|---|
| < 133 | 133-159 | 160-186 | 187-212 | > 212 | ಅಂಕಗಳ ವ್ಯಾಪ್ತಿ |
| ಕನಿಷ್ಠ | ಸುಧಾರಿಸುವುದು | ಪರವಾಗಿಲ್ಲ | ಸಮಾಧಾನಕರ | ಉತ್ತಮ | ಶ್ರೇಣಿ |

ಸಂದರ್ಶಕರ ಹೆಸರು, ಹುದ್ದೆ,
ವಿಳಾಸ

ಟಿಪ್ಪಣಿ

- ಪ್ರತಿ ಪ್ರಶ್ನೆಗಳನ್ನು ಸೂಕ್ಷ್ಮವಾಗಿ ಗಮನಿಸಿ. ಇವು ತರಗತಿ ಪ್ರಕ್ರಿಯೆ ಲವಲವಿಕೆಯಿಂದ ಕೂಡಿರಬೇಕೆಂದು ಬಯಸುತ್ತವೆ.
- ತರಗತಿಯಲ್ಲಿ ಕಂಡುಬರುವ ವಸ್ತುಸ್ಥಿತಿಯನ್ನು ಸಮಸ್ಥಿತಿಯಿಂದ ಗಮನಿಸಿ – ಅಂಕಗಳನ್ನು ನೀಡಿ. 01 ಎಂದರೆ ಕನಿಷ್ಠ; 2–ಸುಧಾರಿಸುವುದು; 3–ಪರವಾಗಿಲ್ಲ; 4–ಸಮಾಧಾನಕರ; 5–ಉತ್ತಮ.
- ಪ್ರತಿ ಪ್ರಶ್ನೆಗಳಿಗೂ ವಸ್ತುಸ್ಥಿತಿಯು–ಹೀಗೆ ಇರಬೇಕು ಎಂಬ ಸಾಮಾನ್ಯ ಭಾವನೆ ಇದೆ. ಅದನ್ನು ಆಧರಿಸಿ ಅಂಕ ನೀಡಿ. ಉದಾಹರಣೆಗೆ–ಅಧ್ಯಾಪಕರು ಕೋಪಿಸಿಕೊಳ್ಳುತ್ತಿರಲಿಲ್ಲ–ಎನ್ನುವುದು ವಸ್ತುಸ್ಥಿತಿಯಾಗಿದ್ದರೆ ಅದು ನಿರೀಕ್ಷಿತ ವರ್ತನೆಯಾಗಿದೆ–ಪೂರ್ಣ ಅಂಕ ನೀಡಬಹುದು. ಸ್ವಲ್ಪಮಟ್ಟಿಗೆ ಕೋಪಿಸಿಕೊಳ್ಳುವುದು ಇದೆ–ಎಂದಾದರೆ ಪ್ರಮಾಣ ನಿರ್ಧರಿಸಿ ಅಂಕ ನೀಡಿ. ಕೋಪಿಸಿಕೊಳ್ಳುವುದು ತುಂಬಾ ಜಾಸ್ತಿ ಅನಿಸಿದರೆ ಆಗ ನೀವು ಕೊಡಬಹುದಾದ ಅಂಕ–01.
- ಪ್ರತಿ ಆಯಾಮದ ಅಂಕಗಳನ್ನು ಕೂಡಿ ನೀಡಿರುವ ಅಂಕಣದಲ್ಲಿ ದಾಖಲಿಸಿ
- ಒಟ್ಟಾರೆ ಅಂಕಗಳನ್ನು ಸಂಚಯನ ಮಾಡಿ, ಶ್ರೇಣಿಕೊಡಿ.

**ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ 2009:-**

ಭಾರತ ಸರ್ಕಾರ ಇಡೀ ದೇಶದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ 2009 ಎಂಬ ಅಧಿನಿಯಮವನ್ನು ಹೊರಡಿಸಿದೆ.

ಶಾಲಾಮಟ್ಟದಲ್ಲಿ ಅನುಪಾಲಿಸಬೇಕಾದ ಅಧಿನಿಯಮದ ಕೆಲವು ಮುಖ್ಯಾಂಶಗಳು ಈ ಕೆಳಕಂಡಂತಿವೆ.

- " ಮಗು" ಎಂದರೆ 6 ರಿಂದ 14 ವರ್ಷದೊಳಗಿನ ಗಂಡು ಅಥವಾ ಹೆಣ್ಣು ಮಗು
- " ಪ್ರಾಥಮಿಕ ಶಿಕ್ಷಣ" ಎಂದರೆ 1 ನೇ ತರಗತಿಯಿಂದ 8 ನೇ ತರಗತಿಯವರೆಗೆ ನೀಡಲಾಗುವ ಶಿಕ್ಷಣ.
- 6 ರಿಂದ 14 ವರ್ಷದೊಳಗಿನ ಪ್ರತಿಯೊಂದು ಮಗುವು ತನ್ನ ಪ್ರಾಥಮಿಕ ಶಿಕ್ಷಣವನ್ನು ಉಚಿತ ಮತ್ತು ಕಡ್ಡಾಯವಾಗಿ ಪಡೆಯುವ ಹಕ್ಕನ್ನು ಹೊಂದಿದ್ದು, ಪ್ರಾಥಮಿಕ ಶಿಕ್ಷಣ ಪೂರೈಸಲು ಅಡ್ಡಿ ಮಾಡಬಹುದಾದ ಯಾವುದೇ ಶುಲ್ಕ ಅಥವಾ ವೆಚ್ಚಗಳನ್ನು ಪಾವತಿಸುವಂತೆ ಯಾವುದೇ ಮಗು ಮತ್ತು ಪೋಷಕರನ್ನು ಒತ್ತಾಯಿಸುವಂತಿಲ್ಲ.
- 6 ವರ್ಷಕ್ಕೂ ಮೇಲ್ಪಟ್ಟ ಮಗುವನ್ನು ಯಾವುದಾದರೂ ಶಾಲೆಗೆ ಸೇರಿಸದೇ ಇದ್ದಾಗ ಅಥವಾ ಮಧ್ಯದಲ್ಲಿ ಶಾಲೆ ಬಿಟ್ಟಾಗ ಆ ಮಗುವಿನ ವಯಸ್ಸಿಗನುಗುಣವಾಗಿ ಸೂಕ್ತವಾದ ತರಗತಿಗೆ ಸೇರಿಸಿಕೊಂಡು ಇತರೆ ಸಹಪಾಠಿಗಳ ಜೊತೆಗೆ ಅವರ ಸಮನಾಗಿ ಆ ತರಗತಿಯ ಪಾಠಗಳನ್ನು ಕಲಿಯುವ ಹಕ್ಕು ಹೊಂದಿರುತ್ತದೆ.
- ಯಾವುದೇ ಕಾರಣಕ್ಕಾಗಿ ಮಗು ಒಂದು ಶಾಲೆಯಿಂದ ಬೇರೆ ಶಾಲೆಗೆ ಹೋಗಬೇಕಾದ ಅಗತ್ಯ ಬಿದ್ದರೆ ಶಾಲಾ ಮುಖ್ಯಸ್ಥರು ಕೂಡಲೇ ವರ್ಗಾವಣೆ ಪ್ರಮಾಣಪತ್ರವನ್ನು ಮಗು ಸೇರಬಯಸುವ ಶಾಲೆಯ ಮುಖ್ಯಸ್ಥರಿಗೆ ತಲುಪಿಸತಕ್ಕದ್ದು. ಒಂದು ವೇಳೆ ಪ್ರಮಾಣಪತ್ರ ತಲುಪುವುದು ವಿಳಂಬವಾಯಿತೆಂಬ ಕಾರಣದಿಂದ ಶಾಲೆಯಲ್ಲಿ ಸೇರಿಸಿಕೊಳ್ಳಲು ವಿಳಂಬ ಮಾಡುವುದಾಗಲೀ, ನಿರಾಕರಿಸುವುದಾಗಲೀ ಮಾಡತಕ್ಕದ್ದಲ್ಲ. ಪ್ರಮಾಣಪತ್ರ ನೀಡಲು ವಿಳಂಬ ಮಾಡಿದವರು ಸೇವಾ ನಿಯಮಗಳಡಿಯಲ್ಲಿ ಶಿಸ್ತು ಕ್ರಮಕ್ಕೆ ಗುರಿಯಾಗತಕ್ಕದ್ದು.
- ದುರ್ಬಲ ವರ್ಗಗಳಿಗೆ ಸೇರಿರುವ ಮಗುವಿನ ಬಗ್ಗೆ ಅಥವಾ ಅನುಕೂಲಕರವಲ್ಲದ ಗುಂಪಿಗೆ ಸೇರಿದ ಮಗುವಿನ ವಿರುದ್ಧ ಯಾವುದೇ ಕಾರಣದಿಂದ ತಾರತಮ್ಯ ಮಾಡದಂತೆ ಹಾಗೂ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸುವುದಕ್ಕೆ ಅಡ್ಡಿಪಡಿಸದಂತೆ ನೋಡಿಕೊಳ್ಳುವುದು, ಸರ್ಕಾರದ ಅಂಗವಾದ ಶಾಲಾ ಮುಖ್ಯಸ್ಥರು ಹಾಗೂ ಕ್ಷೇತ್ರ ಸಿಬ್ಬಂದಿಯ ಕರ್ತವ್ಯವಾಗಿರುತ್ತದೆ.
- ಪ್ರತಿಯೊಂದು ಮಗುವಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ಸಲುವಾಗಿ ಸುವ್ಯವಸ್ಥಿತ ಹಾಗೂ ಸುರಕ್ಷಿತ ಶಾಲಾ ಕಟ್ಟಡ, ಕಲಿಕಾ ಸಾಮಗ್ರಿ, ಸೇರಿದಂತೆ ಇತರೆ ಮೂಲ ಸೌಕರ್ಯಗಳನ್ನು ಒದಗಿಸುವುದು. ಹಾಗೂ ನಿಗದಿತ ಗುರಿಸಾಧನೆಗಾಗಿ ವಾರ್ಷಿಕ, ಶೈಕ್ಷಣಿಕ ಕಾರ್ಯಕ್ರಮಗಳನ್ನು ನಿರ್ವಹಿಸುವುದು ಸರ್ಕಾರದ ಅಂಗವಾದ ಶಾಲಾ ಮುಖ್ಯಸ್ಥರು & ಕ್ಷೇತ್ರ ಸಿಬ್ಬಂದಿಯ ಕರ್ತವ್ಯವಾಗಿರುತ್ತದೆ.
- ವಯಸ್ಸಿನ ರುಜುವಾತು ಇಲ್ಲದಿರುವುದಕ್ಕಾಗಿ ಯಾವ ಮಗುವಿಗೂ ಶಾಲೆಗೆ ಪ್ರವೇಶ ನಿರಾಕರಿಸತಕ್ಕದ್ದಲ್ಲ.
- ಶಾಲೆಗೆ ಪ್ರವೇಶ ಪಡೆದ ಯಾವುದೇ ಮಗುವನ್ನು ಯಾವುದೇ ತರಗತಿಯಲ್ಲಿ ತಡೆಹಿಡಿಯತಕ್ಕದ್ದಲ್ಲ ಅಥವಾ ಪ್ರಾಥಮಿಕ ಶಿಕ್ಷಣವು ಪೂರ್ಣಗೊಳ್ಳುವವರೆಗೆ ಶಾಲೆಯಿಂದ ಹೊರಹಾಕತಕ್ಕದ್ದಲ್ಲ.
- ಯಾವ ಮಗುವನ್ನು ದೈಹಿಕ ದಂಡನೆಗೆ ಅಥವಾ ಮಾನಸಿಕ ಕಿರುಕುಳಕ್ಕೆ ಗುರಿಪಡಿಸತಕ್ಕದ್ದಲ್ಲ.
- ತರಗತಿ ನಿರ್ವಹಣೆಗೆ ಸಂಬಂಧಿಸಿದಂತೆ ಮಗುವಿನ ಕಲಿಕೆ ಮತ್ತು ಪರೀಕ್ಷಾ ಪ್ರಕ್ರಿಯೆಯು ಯಾವುದೇ ರೀತಿ ಒತ್ತಡದ ವಾತಾವರಣದಿಂದ ಮುಕ್ತವಾಗಿರಬೇಕು.
- ತರಗತಿ ಕಲಿಕೆ ಸಮಯದಲ್ಲಿ ಮಗುವಿಗೆ ಭಯ, ಆಘಾತ, ಆತಂಕ ಹೋಗಲಾಡಿಸುವುದು ಮತ್ತು ಮಗು ಮುಕ್ತವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಮಾಡಿಕೊಡುವುದು.
- ಮಕ್ಕಳ ಜ್ಞಾನದ ಗ್ರಹಿಕೆ ಮತ್ತು ಅದನ್ನು ಅನ್ವಯಿಸುವ ಸಾಮರ್ಥ್ಯದ ಪ್ರಗತಿಯ ಬಗ್ಗೆ ಸಮಗ್ರ ಹಾಗೂ ನಿರಂತರ ಮೌಲ್ಯಮಾಪನ ಮಾಡತಕ್ಕದ್ದು.

## ಲಿಂಕನ್‌ರ ಪತ್ರ.

ನಾ ಬಲ್ಲೆ. ಎಲ್ಲರೂ ನ್ಯಾಯಪರರಲ್ಲ.
ಎಲ್ಲರೂ ಸತ್ಯವಂತರಲ್ಲ ಎಂಬುದನು.
ಆದರೆ ಪ್ರತಿಯೊಬ್ಬ ಮುಠ್ಠಾಳನಿಗೆ ಪ್ರತಿಯಾಗಿ
ಒಬ್ಬ ಧೀರೋದಾತ್ತ.
ಪ್ರತಿಯೊಬ್ಬ ಸ್ವಾರ್ಥಿ ರಾಜಕಾರಣಿಗೆ ಬದಲು
ಒಬ್ಬ ನಿಷ್ಠಾವಂತ ನಾಯಕ.
ಪ್ರತಿಯೊಬ್ಬ ಶತ್ರುವಿನ ಬದಲು ಒಬ್ಬ
ಸನ್ಮಿತ್ರನಿರುವನೆಂಬುದನು ಕಲಿಸು
ನಿನಗೆ ಸಾಧ್ಯವಾದರೆ ಕಲಿಸು ಗಳಿಸಿದ ಒಂದು ಡಾಲರು
ಸಿಕ್ಕ ಐದಕ್ಕಿಂತ ಹೆಚ್ಚು ಬೆಳೆಯುಳ್ಳದೆಂಬುದನು.
ಕಲಿಸು ಸೋಲುವುದನು, ಗೆಲುವಿನಲ್ಲಿ ಹರ್ಷಿಸುವುದನು.
ಪುಸ್ತಕಗಳ ಅದ್ಭುತಗಳನ್ನು ಅವನಿಗೆ ಕಲಿಸು.
ಆದರೆ ಆಕಾಶದ ಹಕ್ಕಿಗಳನ್ನು
ಹಾರಾಡುವ ದುಂಬಿಗಳನ್ನು
ಮತ್ತು ಹಸಿರು ಮಲೆಯ ಹೂಗಳನ್ನು ಕುರಿತು.
ಧ್ಯಾನಿಸಲು ಅವನಿಗೆ ಬಿಡುವು ಮಾಡಿಕೊಡು
ಶಾಲೆಯಲ್ಲಿ ವಂಚಿಸುವುದಕ್ಕಿಂತ
ಫೇಲಾಗುವುದು ಹೆಚ್ಚು ಗೌರವವೆಂಬುದನು ಕಲಿಸು.
ಎಲ್ಲರೂ ತಪ್ಪೆಂದಾಗ
ತನ್ನ ವಿಚಾರಗಳಲ್ಲಿ ಅವನು ನಂಬಿಕೆ ಉಳಿಸಿಕೊಳ್ಳಲು ಕಲಿಸು.
ನಯದ ಜನರಲ್ಲಿ ವಿನಯದಲ್ಲಿ ಮತ್ತು
ಒರಟರಲ್ಲಿ ಒರಟುತನದಿ ನಡೆಯುವುದನು ಕಲಿಸು.
ಬೆವರು ಬುದ್ಧಿಗಳನು ಹೆಚ್ಚು ಬೆಲೆ ತೆರುವವನಿಗೆ ಮಾರುವುದನು.
ಆದರೆ ತನ್ನ ಹೃದಯ ಮತ್ತು ಆತ್ಮಕ್ಕೆ ಬೆಲೆಯ ಚೀಟಿಯನು
ಎಂದಿಗೂ ಅಂಟಿಸದಿರುವುದನು ಕಲಿಸು.
ಬೇಸರಗೊಂಡಾಗ ನಗುವುದನು.
ಕಣ್ಣೀರಿನಲ್ಲಿ ಅವಮಾನವಿಲ್ಲವೆಂಬುದನು ಮತ್ತು
ತನ್ನಲ್ಲಿ ತಾನು ವಿಶ್ವಾಸ ಹೊಂದುವುದನು ಕಲಿಸು.
ಆಗಲೇ ಅವನಿಗೆ ಮಾನವೀಯತೆಯಲ್ಲಿ
ದಿವ್ಯವಿಶ್ವಾಸ ಮೂಡುವುದು.